ಪ್ರಬೋಧನೆ

ಲಂಕೇಶ್




ಶಿವತೀರ್ಥನ್‌ಗೆ ನಮನ

ಸೆಪ್ಟೆಂಬರ್ 28, 2011 ಪುಟ 20 ರೂ. 14/-



ಯೋಗಿಗೆ ಜೈಲು ಯೋಗ

ಕ್ರೂರಿ



ಶಿವರಾಜನ ಗೂಂಡಾ ಸಾಮ್ರಾಜ್ಯ



ಕೊಪ್ಪಳ ಕರೆಂಟ್ ಹೊಡೆದ ಕರಡಿ



ಕಟಕಟೆಯಿಂದ ಪಾರಾಗುವ ನಾಟಕ


ತೇಜಸ್ವಿ ಮತ್ತು ಲಂಕೇಶರ 'ಕುದುರೆ' ಸವಾರಿ

ನಾನಿದ್ದ ವಾರ್ಡಿನ ಪಕ್ಕದ ರೂಮ್‌ನಲ್ಲಿ ಉತ್ತರ ಕರ್ನಾಟಕದಿಂದ ಬಂದಿದ್ದ ಒಬ್ಬ ಮಹಿಳೆ ಕೂಡ ತಮ್ಮ ಮಗುವಿಗೆ ಜನ್ಮ ನೀಡಿದ್ದರು. ಆಕೆಯ ತಾಯಿ ನನ್ನ ವಾರ್ಡಿಗೆ ಬಂದು ನನ್ನ ಮಗಳನ್ನು ನೋಡಿ "ಎಷ್ಟು ಚಂದ ಅದಾಳೆ ನಿಮ್ಮ ಮಗಳು. ಜವಳ ಎಷ್ಟು ಚೆಂದದ್ರಿ. ಒಳ್ಳೆ ಗೊಂಬಿ ಗೊಂಬಿ ಇದ್ದಾಂಗ ಅದಾಳೆ" ಎಂದರು. ನನ್ನ ತಮ್ಮ ಶಿವು ಬಂದು ಮಗುವನ್ನು ನೋಡಿ "ಮಗು ಎಷ್ಟು ದಪ್ಪಾದೆ. ಈ ಮಗು ನಿಂದೇನಾ ಅಥವಾ ಯಾರದೋ ಮಗುವನ್ನು ಕದ್ದೆಯಾ?" ಎಂದು ತಮಾಷೆ ಮಾಡಿದ.

ನನ್ನ ಅತ್ತೆ ದೇವೀರಮ್ಮ ಮತ್ತು ಮಾವ ನಂದಿಬಸಪ್ಪ ಬಂದರು. ಹೆಣ್ಣು ಮಗುವನ್ನು ನೋಡಿ ನನ್ನ ಅತ್ತೆ "ಹೆಣ್ಣಾ? ಮನೆಯಲ್ಲಿ ಇರುವ ಹೆಣ್ಣುಗಳು ಸಾಲದಿತ್ತಾ, ಈಗ ಇನ್ನೊಂದು" ಎಂದರು. ಅದಕ್ಕೆ ಕಾರಣ ನನ್ನ ಭಾವ ಶಿವ ರುದ್ರಪ್ಪನವರಿಗೆ ಅಷ್ಟೊತ್ತಿಗಾಗಲೇ ಒಂದು ಗಂಡು ಮತ್ತು ಮೂರು ಹೆಣ್ಣು ಮಕ್ಕಳಾಗಿದ್ದವು. ಆದರೆ ನನ್ನ ಮಾವ ಮಾತ್ರ ಎಂದಿನ ಪ್ರೀತಿಯಿಂದ "ನೀನು ಚೆನ್ನಾಗಿದ್ದೀಯಲ್ಲ ತಾಯಿ? ಹೆರಿಗೆ ಏನೂ ತ್ರಾಸ ಆಗಲಿಲ್ಲ?" ಅಂತ ಕೇಳಿ ಮಗುವನ್ನು ನೋಡಿದರು.

ಲಂಕೇಶರು ಅಂಗಡಿಗೆ ಹೋಗಿ ಮಗಳಿಗೆ ಫ್ರಾಕ್, ಜುಬ್ಬಾ ಎಲ್ಲಾ ತೆಗೆದುಕೊಂಡು ಬಂದು ಮಗುವಿಗೆ ಹಾಕಲು ಹೇಳಿದರು. ನನ್ನ ಅಜ್ಜಿ ಚೆನ್ನಮ್ಮ "ಹಾಗೆಲ್ಲಾ ಹೊಸ ಕೂಸಿಗೆ ಹೊಸಬಟ್ಟೆ ಹಾಕಬಾರದು. ಮೊದಲು ಬೇರೆ ಮಕ್ಕಳ ಹಳೆಬಟ್ಟೆ ಹಾಕಬೇಕು" ಎಂದರೂ ಇವರು ಕೇಳಲಿಲ್ಲ. "ಈ ಬಟ್ಟೆಗಳನ್ನು ಮಗೂಗೆ ಹಾಕಿ, ನಾನು ನನ್ನ ಮಗಳನ್ನು ಈ ಬಟ್ಟೆಗಳಲ್ಲಿ ನೋಡಬೇಕು" ಅಂತ ಹಠ ಹಿಡಿದರು. ಆಗ ಚೆನ್ನಮ್ಮಜ್ಜಿ ವಿಧಿ ಇಲ್ಲದೆ ಆ ಬಟ್ಟೆಗಳನ್ನು ತೆಗೆದುಕೊಂಡು ಹೋಗಿ ಅವುಗಳನ್ನು ಆಸ್ಪತ್ರೆಯ ಆವರಣದಲ್ಲಿದ್ದ ಒಂದು ಹಸುವಿನ ಮೇಲೆ ಹಾಕಿ ಆಮೇಲೆ ಅದನ್ನು ನನ್ನ ಮಗಳಿಗೆ ತೊಡಿಸಿದರು.

ಡೆಲಿವರಿ ಆದನಂತರ ಒಂದು ವಾರ ನಾನು ಆಸ್ಪತ್ರೆಯಲ್ಲಿದ್ದೆ. ನಾನು ಅಲ್ಲಿ ಇದ್ದಷ್ಟು ದಿನ ಬೆಳಗ್ಗೆ ಮತ್ತು ಸಾಯಂಕಾಲ ಆಸ್ಪತ್ರೆಗೆ ಬರುತ್ತಿದ್ದ ಲಂಕೇಶರು ತಮ್ಮ ಮಗಳನ್ನು ತೊಡೆಯ ಮೇಲೆ ಹಾಕಿಕೊಂಡು ಆಕೆಯನ್ನೇ ನೋಡುತ್ತಾ ಕುಳಿತಿರುತ್ತಿದ್ದರು.



ಚೆನ್ನವ್ವಜ್ಜಿ 90ರ ದಶಕದಲ್ಲಿ

ಹೆರಿಗೆ ಆದ ಹದಿನೈದು ದಿನಗಳ ನಂತರ ನನ್ನ ಅಜ್ಜಿ ಚೆನ್ನಮ್ಮ "ಮನೆ ಮತ್ತು ಇಬ್ಬರು ಬಾಣಂತಿಯರ ಕೆಲಸಗಳನ್ನೆಲ್ಲ ನಾನೊಬ್ಬಳೆ ಮಾಡಲಾಗುವುದಿಲ್ಲ" ಎಂದು ನನ್ನನ್ನೂ ಮತ್ತು ನನ್ನ ಅಕ್ಕನನ್ನೂ ನಮ್ಮ ಮಕ್ಕಳೊಂದಿಗೆ ತಮ್ಮ ಕೊಕ್ಕನೂರಿಗೆ - ಅಂದರೆ ನನ್ನ ತಾಯಿಯ ತವರಿಗೆ - ಕರೆದುಕೊಂಡು ಹೋದರು.

ಲಂಕೇಶರು ಪ್ರತಿ ಶನಿವಾರ ಕಾಲೇಜ್ ಮುಗಿದನಂತರ ಸ್ಕೂಟರ್‌ನಲ್ಲಿ ಶಿವಮೊಗ್ಗದಿಂದ 68 ಕಿಲೋಮೀಟರ್ ದೂರದ ಕೊಕ್ಕನೂರಿಗೆ ಬಂದು ಮತ್ತೆ ಸೋಮವಾರ ಬೆಳಗ್ಗೆ ಆರೂವರೆಗೆ ಶಿವಮೊಗ್ಗೆಗೆ ಹೊರಡುತ್ತಿದ್ದರು.



ಗೌರಿಯನ್ನು ಎತ್ತಿಕೊಂಡು ಶಿವಮೊಗ್ಗೆಯಲ್ಲಿ (1962)

ನಮ್ಮಲ್ಲಿ ಬಾಣಂತಿಯರಿಗೆ 'ಖಾರ' ಅಂತ ಮಾಡಿ ತಿನ್ನಿಸುತ್ತಾರೆ. ಖಾರ ಅಂದರೆ ಉತ್ತತ್ತಿ, ಬಾದಾಮಿ, ಗೋಡಂಬಿ ಮತ್ತು ಬೂರಾಸಕ್ಕರೆ ಎಲ್ಲಾ ತರಿತರಿಯಾಗಿ ಪುಡಿ ಮಾಡಿ ಅದನ್ನು ತುಪ್ಪದಲ್ಲಿ ನೆನಸಿಟ್ಟು ದಿನಾ ಬೆಳಗ್ಗೆ ತಿನ್ನಲು ಕೊಡುತ್ತಾರೆ. ಒಂದು ತಿಂಗಳ ನಂತರ ಗೋಧಿ ಕಡುಬು ಮಾಡಿ ತಿನ್ನಿಸುತ್ತಾರೆ. ಗೋಧಿ ಕಡಬು ಅಂದರೆ ಜವೆ ಗೋಧಿ, ಮೆಂತ್ಯೆ, ಸ್ವಲ್ಪ ಉದ್ದುಹಿಟ್ಟು ಹಾಕಿ ಅದನ್ನು ಚಪಾತಿ ಹಿಟ್ಟಿನ ಹದಕ್ಕೆ ಕಲಸಿ ಬಟ್ಟಲಾಕಾರದಲ್ಲಿ ಹಬೆಯಲ್ಲಿ ಬೇಯಿಸುತ್ತಾರೆ. ಆಮೇಲೆ ಅದರೊಳಗೆ ತುಪ್ಪವನ್ನು ಸುರಿದು ತಿನ್ನಿಸುತ್ತಾರೆ. ಇದಕ್ಕೊಂದು ನನ್ನ ಅಜ್ಜಿ ಹತ್ತು ಕೆ.ಜಿಯಷ್ಟು ತುಪ್ಪ ಮಾಡಿ ಇಟ್ಟಿದ್ದರು.

ಲಂಕೇಶರಿಗೆ ಖಾರ ಮತ್ತು ಕಡುಬು ಎಂದರೆ ತುಂಬಾ ಇಷ್ಟ. ಆದ್ದರಿಂದ ಅವರೂ ಅದನ್ನು ನನ್ನ ಜೊತೆಗೆ ತಿಂದು ತಾವೂ ಒಂದು ರೀತಿಯಲ್ಲಿ ನನ್ನೊಂದಿಗೆ ಬಾಣಂತನ ಮಾಡಿಸಿಕೊಂಡರು ಎನ್ನಬಹುದು.

ಒಮ್ಮೆ ಲಂಕೇಶರು ಕೊಕ್ಕನೂರಿಗೆ ಬಸ್ಸಿನಲ್ಲಿ ಬಂದರು. ಆದರೆ ಸೋಮವಾರ ಅವರು ಹೊರಡುವುದು ಸ್ವಲ್ಪ ತಡವಾಗಿ ಬಸ್ ಮಿಸ್ ಆಯಿತು. ಆದ್ದರಿಂದ ಅವರು ಏಳು ಕಿ.ಮೀ. ದೂರದ ಮಲೆಬೆನ್ನೂರಿಗೆ ಹೋಗಿ ಅಲ್ಲಿಂದ ಶಿವಮೊಗ್ಗೆಗೆ ಬಸ್ ಹಿಡಿಯಬೇಕಿತ್ತು, ಆಗ ಅವರು ಎತ್ತಿನ ಗಾಡಿಯಲ್ಲಿ ಒಬ್ಬ ಆಳಿನ ಜೊತೆ ಹೊರಟರು. ಆದರೆ ಆ ಆಳು ಗಾಡಿಯನ್ನು ನಿಧಾನಕ್ಕೆ ಓಡಿಸುತ್ತಿದ್ದರಿಂದ ಬಸ್ ಮಿಸ್ ಆಗುತ್ತೆ ಅಂತ ಲಂಕೇಶರೇ ಆತನನ್ನು ಎಬ್ಬಿಸಿ ತಾವೇ ಎತ್ತಿನ ಗಾಡಿ ಹೊಡೆದುಕೊಂಡು ಹೋಗಿ ಮಲೆಬೆನ್ನೂರು ತಲುಪಿದರು. ಅವರನ್ನು ಬಸ್ ಹತ್ತಿಸಿ ವಾಪಸ್ ಬಂದ ಆಳು "ಎತ್ತಿನ ಗಾಡಿಯನ್ನು ಒಳ್ಳೆ ಕುದುರೆ ಓಡಿಸಿದಂತೆ ಓಡಿಸಿದರು" ಎಂದು ಲಂಕೇಶರ ಎತ್ತಿನ ಗಾಡಿ ಓಡಿಸುವ ವೃತ್ತಾಂತವನ್ನು ಬಣ್ಣಿಸಿದ.


ನಮ್ಮ ಮಗಳಿಗೆ ಗೌರಿ ಅಂತ ಹೆಸರಿಟ್ಟೆವು. ಅದು ನನ್ನ ತಾಯಿಯ ಹೆಸರು. ನನ್ನ ಮಗಳಿಗೆ ಎರಡೂವರೆ ತಿಂಗಳಾದ ನಂತರ ನಾನು ಶಿವಮೊಗ್ಗೆಯ ನಮ್ಮ ಮನೆಗೆ ವಾಪಸ್ ಬಂದೆ. ನಾನಿನ್ನೂ ಮಗಳನ್ನು ಎತ್ತಿಕೊಂಡು ಮನೆಯ ಒಳಗೆ ಹೋಗುತ್ತಿರುವಾಗ ಮನೆಯ ಮುಂದೆ ಒಂದು ಸ್ಕೂಟರ್ ಬಂದು ನಿಂತಿತು. ಯಾರು ಅಂತ ನೋಡಿದೆ. ಒಳ್ಳೆ ಅಜಾನುಬಾಹು ವ್ಯಕ್ತಿ "ಇವರು ತೇಜಸ್ವಿ ಅಂತ" ಎಂದು ಲಂಕೇಶರು ಪರಿಚಯ ಮಾಡಿಸಿದರು. ಅಷ್ಟೇ ಅಲ್ಲ "ಅವರೆಲ್ಲಿಗೋ ಬೇಗ ಹೋಗಬೇಕಂತೆ. ಬೇಗನೆ ಕಾಫಿ ಮಾಡು" ಎಂದರು. ನಾನು ಮನೆಯೊಳಗೆ ಹೋಗಿ ಸಾಮಾನುಗಳನ್ನು ಎಲ್ಲೋ ಎಸೆದು, ಮಗುವನ್ನು ಪಕ್ಕದಲ್ಲಿ ಇಟ್ಟುಕೊಂಡು ಆದಷ್ಟು ಬೇಗ ಕಾಫಿ ಮಾಡಿಕೊಟ್ಟೆ. ಸ್ವಲ್ಪ ಹೊತ್ತಿನ ನಂತರ ತೇಜಸ್ವಿ ಹೊರಟರು. ಅವರು ಸ್ಕೂಟರ್ ಸ್ಟಾರ್ಟ್ ಮಾಡಿದ ರೀತಿ ಅದ್ಭುತವಾಗಿತ್ತು, ಕುದುರೆ ತನ್ನ ಮುಂದಿನ ಎರಡೂ ಕಾಲುಗಳನ್ನು ಮೇಲೆತ್ತಿ ನೆಗೆದು ಓಡುವಂತೆ ತೇಜಸ್ವಿ ಅವರ ಸ್ಕೂಟರ್ ಕೂಡ ಮುಂದಿನ ಚಕ್ರವನ್ನು ಮೇಲಕ್ಕೆತ್ತಿ ಮುಂದೆ ಸಾಗಿತು.

ತೇಜಸ್ವಿ ಹೋದನಂತರ ಮನೆ ಒಳಗೆ ಬಂದು ನೋಡಿದರೆ ಅವರು ಕಾಫಿ ಕುಡಿದೇ ಇರಲಿಲ್ಲ, ಅಚ್ಚರಿಯಿಂದ ಅವರ ಕಾಫಿ ಲೋಟವನ್ನು ಎತ್ತಿ ಮೂಸಿದ. ಕೆಟ್ಟ ವಾಸನೆ ಹೊಡೆಯುತ್ತಿತ್ತು, ಏನಾಗಿತ್ತೆಂದರೆ ನಾನು ಮೂರು ತಿಂಗಳು ಮನೆಯಲ್ಲಿ ಇಲ್ಲದಿರುವಾಗ ನನ್ನ ಅತ್ತೆ ಆಗಾಗ ಮನೆಗೆ ಬರುತ್ತಿದ್ದರು. ಹಾಗೆ ಬಂದಾಗ ಅವರು ಕಾಫಿ ಸೋಸುವ ಬಟ್ಟೆಯಲ್ಲಿ ಹರಳೆಣ್ಣೆಯನ್ನು ಸೋಸಿದ್ದರು. ಅದು ನನಗೆ ಗೊತ್ತಿಲ್ಲದೆ ಅದೇ ಸೋಸುವ ಬಟ್ಟೆಯಲ್ಲಿ ತೇಜಸ್ವಿ ಅವರಿಗೆ ಕಾಫಿ ಮಾಡಿ ಕೊಟ್ಟಿದ್ದೆ.

ಲಂಕೇಶರು ಹಸಿರು ಬಣ್ಣದ ಹೊಸ ತೊಟ್ಟಿಲನ್ನು ತಂದು, ಅದರೊಳಗೆ ಹಾಸಿಗೆ ದಿಂಬು ಎಲ್ಲಾ ಇಟ್ಟು ಅದನ್ನು ಮಗಳಿಗೆ ರೆಡಿ ಮಾಡಿಟ್ಟಿದ್ದರು. ಅದೇ ತೊಟ್ಟಿಲಿನಲ್ಲಿ ನಮ್ಮ ಇನ್ನೂ ಇಬ್ಬರು ಮಕ್ಕಳು ಬೆಳೆದರು. ಈಗಲೂ ಆ ತೊಟ್ಟಿಲು ಮರುಳಸಿದ್ದಪ್ಪನವರ ಮನೆಯಲ್ಲಿದೆ. ಅವರ ಮಗ ಚೈತನ್ಯ ಮಾತ್ರವಲ್ಲ ಚೈತನ್ಯನ ಮಗು ಕೂಡ ಆ ತೊಟ್ಟಿಲಿನಲ್ಲೇ ಬೆಳೆದಿದ್ದಾರೆ.

ನಾನು ಶಿವಮೊಗ್ಗೆಗೆ ವಾಪಸ್ ಬಂದಾಗ ನನ್ನ ಮಗಳನ್ನು ನೋಡಿಕೊಳ್ಳಲು ನನ್ನ ಜೊತೆ ನನ್ನ ಮುತ್ತಜ್ಜಿ - ಅಂದರೆ ನನ್ನ ಅಜ್ಜಿ ಚೆನ್ನವಜ್ಜಿಯ ತಾಯಿ - ಬಂದಿದ್ದರು. ಅವರ ಹೆಸರು ಗುರುಬಸಮ್ಮ. ಆಕೆ ತುಂಬಾ ಧೈರ್ಯಶಾಲಿ. ತಮ್ಮ ಕಾಲದಲ್ಲಿ ಕುದುರೆ ಸವಾರಿ ಮಾಡಿಕೊಂಡು ತಮ್ಮ ಜಮೀನನ್ನು ನೋಡಿಕೊಂಡಿದ್ದಾಕೆ. ಅವರು ಪಾಳೇಗಾರರಾಗಿದ್ದವರು. ನನ್ನ ಮುತ್ತಜ್ಜಿಗೆ ಲಂಕೇಶರು ವೀಳೆದೆಲೆ ಚಿಕಣಿ ಅಡಿಕೆ ತಂದು ಕೊಡುತ್ತಿದ್ದರು. ಅವ[illegible] ಎಲೆಅಡಿಕೆ ಅಗಿಯುತ್ತಾ ಮಳೆ, ಬೆಳೆ, ಆಳು, [illegible] ಎಂದೆಲ್ಲ ಹರಟುತ್ತಿದ್ದರು.

ಹುಳಿಮಾವು ಮತ್ತು ನಾನು 7



• ಇಂದಿರಾ ಲಂಕೇಶ್

ಮದುವೆ ನಂತರ ಜೋಗ್‌ಫಾಲ್ಸ್‌ಗೆ ಹೋಗ[illegible] ಎಂದು ನಾವು ಎರಡು ಬಾರಿ ಹೊರಟಿದ್ದರೂ ಅದ[illegible] ಹೋಗಲು ಆಗಿರಲಿಲ್ಲ. ಒಂದು ದಿನ ಲಂಕೇಶರು, [illegible] ನನ್ನ ಮುತ್ತಜ್ಜಿ ಮತ್ತು ನಮ್ಮ ಪುಟ್ಟ ಮಗಳೂ ಜೊ[illegible] ಹೊರಟೆವು. ಲಂಕೇಶರಿಗೆ ಮತ್ತು ನನಗೆ ಫಾಲ್ಸ್ [illegible] ಇಳಿದುನೋಡಬೇಕೆನ್ನಿಸಿತು. ನನ್ನ ಮುತ್ತಜ್ಜಿ "ನೀವು ಹ[illegible] ಬನ್ನಿ, ನಾನು ಮಗುವನ್ನು ಇಟ್ಟುಕೊಂಡು ಕುಳಿತಿರು[illegible]" ಎಂದು ನಮ್ಮನ್ನು ಕಳುಹಿಸಿದರು. ನಾನು ಮಗ[illegible] ಹಾಲು ಕುಡಿಸಿ ಹೊರಟೆ. ಕಡಿ[illegible] ದಾರಿ, ಮೆಟ್ಟಿಲುಗಳಿರಲಿಲ್ಲ, ಇ[illegible] ಕೆಳಗೆ ಇಳಿದುಹೋದೆವು.

ಜೋಗ್ ಮೇಲಿನಿಂದ [illegible] ನೋಡಲು ಚೆಂದ. ಕೆಳಗಿನಿ[illegible] ನೋಡಿದರೆ ಬರೀ ನೀರು [illegible] ಬೀಳುವಂತೆ ಕಾಣುತ್ತದೆ. ಆ[illegible] ಆ ನೀರು ಅದೆಷ್ಟು ರಭಸವ[illegible] ಬೀಳುತ್ತದೆ ಎಂದರೆ ಅದು [illegible] ನಮ್ಮ ಮೇಲೆ ಸಿಡಿದು ನಾವ[illegible] ಪೂರಾ ಒದ್ದೆ ಆಗಿಬಿಡುತ್ತೇವೆ[illegible] ಜೋಗ್ ಮೇಲಿನಿಂದ ಕಣ್ಣಿಗೆ [illegible] ಆನಂದ ನೀಡಿದರೆ ಕೆಳಗೆ ಇಳಿದು ನೀರಿನಲ್ಲಿ ಆಡುವುದು ಮನಸ್ಸಿಗೆ ಮತ್ತು ಮೈಯ್ಯಿಗೆ ಹಿತ ನೀಡುತ್ತದೆ.

ನಾವಿಬ್ಬರೂ ತಣ್ಣಗಿರುವ ನೀರು ಕುಡಿದು ಮ[illegible] ಹತ್ತಿ ಬರುವ ಹೊತ್ತಿಗೆ ಸಂಜೆಯಾಗಿತ್ತು. ನನ್ನ ಮಗ[illegible] ಹಸಿವಾಗಿ ಅಳಲಾರಂಭಿಸಿದಾಗ ನನ್ನ ಮುತ್ತಜ್ಜಿ ತನ್ನ ಬ[illegible] ಎದೆಯನ್ನೇ ಆಕೆಗೆ ಕೊಟ್ಟು ಚೀಪಿಸುತ್ತಾ ಕುಳಿತಿದ್ದ[illegible] ನಾನು ಬಂದು ಆಕೆಗೆ ಹಾಲು ಕುಡಿಸಿದೆ. ನಾವು ಶಿವಮೊ[illegible] ವಾಪಸ್ ಬಂದಾಗ ಎಲ್ಲರೂ "ಮಗುವಾಗಿ ಇನ್ನು ಮೂ[illegible] ತಿಂಗಳೂ ಸರಿಯಾಗಿ ಆಗಿಲ್ಲ, ಆಗಲೇ ಫಾಲ್ಸ್ ಇಳಿ[illegible] ಹೋಗಿದ್ದೀಯ" ಅಂತ ಬೈದರು. ಆದರೆ ನನ್ನ ಮುತ್ತ[illegible] ಮಾತ್ರ ನಾವಿಬ್ಬರೂ ಸಂತೋಷವಾಗಿರುವುದನ್ನು ನೋ[illegible] ಅವರೂ ಖುಷಿಯಾಗಿದ್ದರು.

ಲಂಕೇಶರ ಸ್ನೇಹಿತರಾದ ಕೆಂಚಪ್ಪ ಎಂಬುವವರು ನ[illegible] ಮನೆಗೆ ಬರುತ್ತಿದ್ದರು. ತುಂಬಾ ಸಾಧು ಮನುಷ್ಯ. ಅವರಿ[illegible] ಅರಣ್ಯ ಇಲಾಖೆಯಲ್ಲಿ ರೇಂಜರ್ ಕೆಲಸ ಸಿಕ್ಕಿತ್ತು. ಕೆಂಚ[illegible] ನವರು ಪ್ರಾಮಾಣಿಕ ಮನುಷ್ಯರಾಗಿದ್ದರಿಂದ ಅವ[illegible] "ನನ್ನಂಥವರಿಗಲ್ಲ ಈ ಕೆಲಸ. ಈ ಭ್ರಷ್ಟ ವ್ಯವಸ್ಥೆಯ[illegible] ಕೆಲಸ ಮಾಡುವುದು ತುಂಬಾ ಕಷ್ಟ" ಎನ್ನುತ್ತಿದ್ದರು. ಆದರ[illegible] ಅದು ಹೇಗೋ ಅದೇ ಇಲಾಖೆಯಲ್ಲಿ ಕೆಲಸ ಮಾ[illegible] ನಿವೃತ್ತಿ ಹೊಂದಿದರು. ಕೆಂಚಪ್ಪನವರು ಮತ್ತು ನನ್ನವ[illegible] ಕೊನೆಯವರೆಗೂ ತುಂಬಾ ಸ್ನೇಹದಿಂದಲೇ ಇದ್ದರು.

(ಮುಂದಿನ ವಾರಕ್ಕೆ)


ನೋ ಕಾಮೆಂಟ್ಸ್

ಭ್ರಷ್ಟಾಚಾರದ ವಿರುದ್ಧ ಎಲ್.ಕೆ.ಅಡ್ವಾನಿ ಅವರು ಯೋಚಿಸಿರುವ ಯಾತ್ರೆಯನ್ನು ಬಳ್ಳಾರಿಯಿಂದ ಪ್ರಾರಂಭಿಸುವುದು ಸೂಕ್ತ ಎನಿಸುತ್ತದೆ. ಯಾಕೆಂದರೆ ಇವತ್ತು ಬಳ್ಳಾರಿ ನಮ್ಮ ದೇಶದಲ್ಲಿರುವ ಭ್ರಷ್ಟಾಚಾರ, ಮೋಸ, ಅನೈತಿಕತೆ ಮತ್ತು ದೇಶದ ಸಂಪತ್ತಿನ ಲೂಟಿಗೆ ಪ್ರತೀಕದಂತಿದೆ.

- ಟೈಮ್ಸ್ ಆಫ್ ಇಂಡಿಯಾ/ಟೀಸರ್ಕಾಲ್ಸ್.ನೆಟ್ ವೆಬ್‌ಸೈಟಿನಲ್ಲಿ.

ನಟ ದರ್ಶನ್ ವಿರುದ್ಧ ನಿಷೇಧ ಹೇರಬೇಕೆ ಎಂಬ ಪ್ರಶ್ನೆಗೆ ಶೇ 88 ವಾಚಕರು ಹೌದು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

- ಚುರುಮುರಿ ಬ್ಲಾಗ್‌ನಲ್ಲಿ



ಬಳ್ಳಾರಿಯ ರೆಡ್ಡಿಗಳು ಮತ್ತು ಆಂಧ್ರದ ವೈ.ಎಸ್.ಆರ್ ರೆಡ್ಡಿ ಕುಟುಂಬ ಹಲವಾರು ಅಕ್ರಮ ವ್ಯವಹಾರಗಳನ್ನು ಜಂಟಿಯಾಗಿ ನಡೆಸುತ್ತಿದ್ದಾರೆ. 2007-08ರಲ್ಲಿ ಜನಾರ್ದನ ರೆಡ್ಡಿ ಪ್ರಾರಂಭಿಸಿದ ಬ್ರಹ್ಮಣಿ ಸ್ಟೀಲ್ ಇಂಡಸ್ಟ್ರೀಸ್ ಎಂಬ ಕಂಪನಿಯಲ್ಲಿ ಜಗನ್ ರೆಡ್ಡಿ ಬಂಡವಾಳವನ್ನು ಹೂಡಿದ್ದ. ಆಗ ಆ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಜಗನ್‌ನ ತಂದೆ ವೈ.ಎಸ್.ಆರ್. ರಾಜಶೇಖರ್ ರೆಡ್ಡಿ ಬ್ರಹ್ಮಣಿ ಸ್ಟೀಲ್ಸ್ ಕಂಪನಿಗೆ 10,760 ಎಕರೆ ಸರ್ಕಾರಿ ಭೂಮಿಯನ್ನು ಕೊಟ್ಟಿದ್ದ. ಹಾಗೆ ಕೊಟ್ಟ ಭೂಮಿಗೆ ರೆಡ್ಡಿ ಸರ್ಕಾರ ವಿಧಿಸಿದ್ದು ಪ್ರತಿ ಎಕರೆಗೆ ಕೇವಲ 18,500 ರೂಪಾಯಿಗಳನ್ನು. ಈ ಭೂಮಿಯನ್ನು ಬ್ಯಾಂಕುಗಳಿಗೆ ಒತ್ತೆ ಇಟ್ಟು ಒಟ್ಟು 350 ಕೋಟಿ ರೂಪಾಯಿಗಳನ್ನು ಎತ್ತಲಾಯಿತು. ಅನಂತರ ಬ್ರಹ್ಮಣಿ ಸ್ಟೀಲ್ಸ್ ಕಂಪನಿಯನ್ನೇ ಜಿಂದಾಲ್‌ಗಳಿಗೆ ಮಾರಲಾಯಿತು. ಹೀಗೆ ಒಂದೆಡೆ ಕಡಿಮೆ ದರದಲ್ಲಿ ಸಾವಿರಾರು ಎಕರೆ ಸರ್ಕಾರಿ ಭೂಮಿ, ಅದೇ ಭೂಮಿ ಮೇಲೆ ಬ್ಯಾಂಕುಗಳಿಂದ ಹಣ ಎತ್ತುವಳಿ ಮತ್ತು ಕಂಪನಿಯ ಮಾರಾಟದಿಂದಲೂ ರೊಕ್ಕ... ಬಳ್ಳಾರಿ ರೆಡ್ಡಿಗಳ ಮತ್ತು ಜಗನ್ ರೆಡ್ಡಿ ಲೂಟಿ ಈ ಪರಿಯದ್ದು.

- ಪತ್ರಿಕಾ ವರದಿಗಳು



ಜನಾರ್ದನ ರೆಡ್ಡಿ ಬಿಜೆಪಿಯ ಸುಷ್ಮಾ ಸ್ವರಾಜ್ ಅವರನ್ನು 'ತಾಯಿ' ಎಂದೂ, ಅಂದಿನ ಆಂಧ್ರದ ಮುಖ್ಯಮಂತ್ರಿ ಕಾಂಗ್ರೆಸ್‌ನ ವೈ.ಎಸ್.ಆರ್ ಅವರನ್ನು 'ತಂದೆ' ಎಂದೂ ಕರೆಯುತ್ತಿದ್ದರು. ಹೀಗೆ ಎರಡು ರಾಷ್ಟ್ರೀಯ ಪಕ್ಷಗಳಲ್ಲಿ 'ತಂದೆ ತಾಯಿ'ಯನ್ನು ಹೊಂದಿದ್ದ ರೆಡ್ಡಿಗಳು ಇದರ ಮೂಲಕವೇ ಸಾಕಷ್ಟು ಲಾಭ ಪಡೆದರು.

- ಪತ್ರಿಕಾ ವರದಿ

ರೆಡ್ಡಿ ಗುಂಪು ನಡೆಸಿದ ಅಕ್ರಮ ಗಣಿಗಾರಿಕೆಯಿಂದ 5,308 ಕೋಟಿ ರೂಪಾಯಿ ಮೌಲ್ಯದ 19.7 ಮಿಲಿಯನ್ ಟನ್ನಿನಷ್ಟು ಕಬ್ಬಿಣದ ಅದಿರನ್ನು ರಫ್ತು ಮಾಡಿದೆ.

- ಸುಪ್ರೀಂ ಕೋರ್ಟ್ ನೇಮಿಸಿರುವ ಸಿಈಸಿ ತಂಡ.

ಗೋವಿಂದಾ. ಗೋವಿಂದ!

ಅಂದು: ರೆಡ್ಡಿಗಳು ತಿರುಪತಿ ದೇವಸ್ಥಾನಕ್ಕೆ ನೀಡಿದ ಕಿರೀಟವನ್ನು ಸಕ್ರಮವಾಗಿ ದುಡಿದ ಹಣದಿಂದ ಖರೀದಿಸಿ, ಅದನ್ನು ತಮ್ಮ ಲೆಕ್ಕಪತ್ರಗಳಲ್ಲಿ ದಾಖಲಿಸಿದ್ದರೆ, ನಾವು ಕಿರೀಟವನ್ನು ಇಟ್ಟುಕೊಳ್ಳುತ್ತೇವೆ. ಆದರೆ ಅವರು ಅದನ್ನು ಅಕ್ರಮವಾಗಿ ಗಳಿಸಿದ ದುಡ್ಡಿನಿಂದ ಖರೀದಿಸಿದ್ದರೆ ಅದನ್ನು ಸಿಬಿಐಗೆ ಅಥವಾ ತೆರಿಗೆ ಇಲಾಖೆಗೆ ಒಪ್ಪಿಸುತ್ತೇವೆ.

- ತಿರುಪತಿ ದೇವಸ್ಥಾನದ ಮಂಡಲಿ.



ಇಂದು: ಯಾವುದೇ ಕಾರಣಕ್ಕೂ ರೆಡ್ಡಿಗಳು ನೀಡಿದ ಕಿರೀಟವನ್ನು ಯಾರಿಗೂ ಕೊಡುವುದಿಲ್ಲ.


- ತಿರುಪತಿ ದೇವಸ್ಥಾನದ ಮಂಡಲಿ.

ವಾರದ ರಾಜಕೀಯ ಜೋಕ್ಸ್

* ಇಷ್ಟೊಂದು ಸಂಸದರು ಜೈಲಿನಲ್ಲಿರುವುದರಿಂದ ಇನ್ನು ಮುಂದೆ ತಿಹಾರದಲ್ಲಿ ಸಂಸತ್ತಿನ ಸಭೆ ಏರ್ಪಡಿಸುವುದು ಸೂಕ್ತ.

* ಸದ್ಯದಲ್ಲೇ ಸ್ವಿಸ್ ಬ್ಯಾಂಕಿನವರು ತಿಹಾರ್ ಜೈಲಿಯಲ್ಲಿ ಏಟಿಎಂ ಮೆಷಿನ್‌ಗಳನ್ನು ಸ್ಥಾಪಿಸಲಿದ್ದಾರಂತೆ.

ರ್ಶನ್ ಸಂತತಿ ಮಹಿಳೆಯರ ಬದುಕಿನ ಬಹುದೊಡ್ಡ ಚಾಲೆಂಜ್





• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ದರ್ಶನ್ ಅಭಿಮಾನಿಗಳು ಆತನಿಗೆ ...ಲೆಂಜಿಂಗ್ ಸ್ಟಾರ್ ಎಂಬ ಬಿರುದನ್ನು ಕೊಟ್ಟಿ...ರೆ. ಆದರೆ ನಟನೆ ಎಂಬುದು ಆತನಿಗೆ ...ಡ್ಡ 'ಚಾಲೆಂಜ್' ಆಗಿದೆ ಎಂದು ದರ್ಶನ್ ...ಸಿರುವ ಒಂದೆರೆಡು ಸಿನಿಮಾಗಳನ್ನು ನೋಡಿ ...ನ ನಾನು ನಿರ್ಧರಿಸಿದ್ದೆ.

ಮೊನ್ನೆ ದರ್ಶನ್ ನಿಜವಾಗಲೂ ತಾನೋರ್ವ ...ಷ್ಠತ ನಟ ಎಂಬುದನ್ನು ಸಾಬೀತುಪಡಿಸಿ ...ಮ ನನ್ನ ಅಭಿಪ್ರಾಯವನ್ನು ಬದಲಾಯಿಸಿ...ಳ್ಳುವಂತೆ ಮಾಡಿದ್ದಾನೆ. ಹಿಂದಿನ ರಾತ್ರಿಯ ...ಕ ಪ್ರತಿದಿನ ಲೆಕ್ಕವಿಲ್ಲದಷ್ಟು ಸಿಗರೇಟನ್ನು ...ಸುತ್ತಿದ್ದ ಮತ್ತು ಉರಿಯುವ ಸಿಗರೇಟಿ...ದಲೇ ತನ್ನ ಪತ್ನಿಯ ಮೈಯನ್ನು ಸುಟ್ಟ ...ರ್ಶನ್ ಜೈಲಿನ ಗೇಟಿನ ಮುಂದೆ ನಿಂತಿದ್ದಾಗ ಇದ್ದಕ್ಕಿದ್ದಂತೆ ...ನಿಗೆ ಅಸ್ತಮಾ ಅಟ್ಯಾಕ್ ಆಗಿದೆ. ಅದೇ ರೀತಿ ಹಿಂದಿನ ...ತ್ರಿಯುತನಕ ಕಂಠಮಟ್ಟ ಕುಡಿದು ತನ್ನ ಹೆಂಡತಿಯನ್ನು ...ಮಾನುಷವಾಗಿ ಥಳಿಸಿದ ದರ್ಶನ್‌ಗೆ ಅದೇ ಗಳಿಗೆಯಲ್ಲಿ ...ರ್ಟ್ ಪ್ರಾಬ್ಲಮ್ ಕೂಡ ಕಾಣಿಸಿಕೊಂಡಿದೆ. ಆತನ ನಟನೆ ...ಷ್ಟು ಅದ್ಭುತವಾಗಿತ್ತೆಂದರೆ ಆತನನ್ನು ಜೈಲಿನಲ್ಲಿ ಇಡುವ ...ಬದಲಾಗಿ ಆಸ್ಪತ್ರೆಯಲ್ಲಿ ಇವತ್ತಿನ ತನಕ ಇಡಲಾಗಿದೆ ಮತ್ತು ...ಆಸ್ಪತ್ರೆಯಲ್ಲಿ ಆತನನ್ನು ಭೇಟಿಯಾಗಲು ಆತನ ಮಿತ್ರರಿಗೆ, ...ಮಾರಂಗದ ದಿಗ್ಗಜರಿಗೆ ಅನುವು ಮಾಡಿಕೊಡಲಾಗಿದೆ.

ಹಾಗೆ ನೋಡಿದರೆ ದರ್ಶನ್ ತನ್ನ ಪತ್ನಿ ವಿಜಯಲಕ್ಷ್ಮಿ ...ಯರನ್ನು ಬರ್ಬರವಾಗಿ ಬಡಿಯುತ್ತಿದ್ದಾನೆ ಎಂಬುದು ...ಟ್ಟಾಗಿ ಉಳಿದಿದ್ದು ಈಗತಾನೇ ಹೊರಗೆ ಬಿದ್ದಿರುವ ...ಸ್ಯಮಾನವೇನಲ್ಲ. ಕಳೆದ ಜೂನ್ ತಿಂಗಳಲ್ಲೇ ಇದರ ...ಪತ್ರಿಕೆ ಮುಖಪುಟ ವರದಿಯನ್ನು ಪ್ರಕಟಿಸಿತ್ತು. ಆ ...ದಿಯಲ್ಲಿ ವಿಜಯಲಕ್ಷ್ಮಿ ಅವರ ಮುಖ, ಮೈಯೆಲ್ಲ ...ಊದಿಕೊಳ್ಳುವಂತೆ, ಮೂಗಿನಿಂದ ರಕ್ತ ಹರಿಯುವಂತೆ ...ಡಿದಿದ್ದ ಎಂದು ರಾ.ಸೋಮನಾಥ್ ಬರೆದಿದ್ದರು. ಹೀಗೆ ...ಯನ್ನು ಬಡಿದದ್ದಲ್ಲದೆ ನಟಿ ನಿಖಿತಾಳಿಗೆ ಬಲವಂತವಾಗಿ ...ನ್ ಮಾಡಿ ಕ್ಷಮೆ ಕೇಳುವಂತೆ ಮಾಡಿದ್ದ ಎಂದೂ, ...ರ್ಶನ್ ತನ್ನ ಹೆಂಡತಿಯ ಹೆಸರಿನಲ್ಲಿ ಮಾಡಿರುವ ...ಗಳನ್ನು ತನ್ನ ಹೆಸರಿಗೆ ವರ್ಗಾಯಿಸಬೇಕೆಂದು ಒತ್ತಡ ...ಹುತ್ತಿದ್ದಾನೆಂದೂ, ತನ್ನ ಗಂಡ ಕೊಡುತ್ತಿದ್ದ ಇಂತಹ ಹಿಂಸೆಯಿಂದ ತಪ್ಪಿಸಿಕೊಳ್ಳಲು ಮನೆಯಿಂದ ಓಡಿಹೋಗಿದ್ದ ವಿಜಯಲಕ್ಷ್ಮಿ ಶಿವರಾಜ್‌ಕುಮಾರ್ ಮನೆಯಲ್ಲಿ ಆಶ್ರಯ ಪಡೆದಿದ್ದರೆಂದೂ, ಶಿವಣ್ಣ ದರ್ಶನ್‌ಗೆ ಬೈದು ಬುದ್ಧಿ ಹೇಳಿದ್ದರೆಂದೂ... ಈ ಎಲ್ಲ ವಿವರಗಳು ಆ ವರದಿಯಲ್ಲಿದ್ದವು. ಮೊನ್ನೆ ವಿಜಯಲಕ್ಷ್ಮಿ ಅವರು ಪೊಲೀಸರಿಗೆ ನೀಡಿದ ದೂರಿನಲ್ಲಿ ಈ ಎಲ್ಲ ಅಂಶಗಳೂ ಇದ್ದು ನಮ್ಮ ವರದಿ ಎಷ್ಟು ಸರಿಯಾಗಿತ್ತು ಎಂದು ಸ್ಪಷ್ಟಪಡಿಸಿದೆ.

ಮುಖ್ಯವಾಗಿ ದರ್ಶನ್ ತನ್ನ ಹೆಂಡತಿಗೆ ನೀಡುತ್ತಿದ್ದ



ಹಿಂಸೆಯ ಬಗ್ಗೆ ಚಿತ್ರರಂಗದಲ್ಲಿರುವ ಪ್ರಮುಖರಿಗೂ ಗೊತ್ತಿತ್ತು. ಆದರೆ ಶಿವರಾಜ್‌ಕುಮಾರ್ ಮತ್ತು ಅವರ ಪತ್ನಿ ಗೀತಾ ಹೊರತಾಗಿ ಯಾರೂ ದರ್ಶನ್‌ಗೆ ಉಗಿದು ಆತ ನೆಟ್ಟಗಾಗುವಂತೆ ನೋಡಿಕೊಳ್ಳಲಿಲ್ಲ; ಅಸಹಾಯಕರಾಗಿದ್ದ ವಿಜಯಲಕ್ಷ್ಮಿ ಅವರ ನೆರವಿಗೆ ನಿಲ್ಲಲಿಲ್ಲ. ಈಗಲೂ ದರ್ಶನ್‌ನ ಕ್ರೌರ್ಯವನ್ನು ಖಂಡಿಸುವ ಬದಲು ಚಿತ್ರರಂಗದ ಕೆಲವರು ಈಗಾಗಲೇ ಕಂಗಾಲಾಗಿರುವ, ದಮನಕ್ಕೆ ತುತ್ತಾಗಿರುವ, ತನ್ನ ಗಂಡನ ಪೈಶಾಚಿಕತನವನ್ನು ಸಹಿಸಲಾಗದೆ ಪೊಲೀಸರಿಗೆ ದೂರು ನೀಡಿರುವ ವಿಜಯಲಕ್ಷ್ಮಿ ಅವರ ಮೇಲೆಯೇ ಸಹಿಸಲಾಗದಂತಹ ಒತ್ತಡ ತಂದು ದರ್ಶನ್ ಎಂಬ ಕಟುಕನನ್ನು ಬಚಾವು ಮಾಡುವ ಮಸಲತ್ತು ನಡೆಸುತ್ತಿದ್ದಾರೆ.

ಇದಕ್ಕೆ ಎರಡು ಮುಖ್ಯ ಕಾರಣಗಳಿವೆ. ಮೊದಲನೆಯದಾಗಿ ದರ್ಶನ್ ಮೇಲೆ ನಿರ್ಮಾಪಕರು ಕೋಟ್ಯಂತರ ರೂಪಾಯಿಗಳ ಬಂಡವಾಳವನ್ನು ಹೂಡಿರುವುದು. ಎರಡನೆಯದಾಗಿ ಚಿತ್ರರಂಗವೂ ನಮ್ಮ ಸಮಾಜದಂತೆ ಪುರುಷ ಪ್ರಧಾನ ಕೂಟವಾಗಿರುವುದು. ಆದ್ದರಿಂದಲೇ ಅಂಬರೀಶ್ ತರಹದ ಹಿರಿಯರು "ಗಂಡ ಹೆಂಡತಿಯನ್ನು ಹೊಡೆಯುವುದು, ಮಗ ತಾಯಿಯನ್ನು ಹೊಡೆಯುವುದು ಸಹಜ. ಇದು ದೊಡ್ಡದೇನಲ್ಲ" ಎಂಬಂತಹ ಅಮಾನವೀಯ ನಿಲುವನ್ನು ಪ್ರದರ್ಶಿಸುತ್ತಾರೆ. ಚಲನಚಿತ್ರ ನಿರ್ಮಾಪಕರ ಸಂಘದ ಅಧ್ಯಕ್ಷರು ನಿಖಿತಾ ಎಂಬ ನಟಿಯೇ ದರ್ಶನ್ ದಾಂಪತ್ಯ ಜೀವನದಲ್ಲಿ ಮುಳುವಾಗಿದ್ದಾಳೆ ಎಂದು ಆಕೆಯ ಮೇಲೆ ನಿಷೇಧವನ್ನು ಘೋಷಿಸುತ್ತಾರೆ.

ವಾಸ್ತವವಾಗಿ ಈ ಇಡೀ ಪ್ರಕರಣದಲ್ಲಿ ಸ್ಪಷ್ಟವಾದ ಕ್ರಿಮಿನಲ್ ದರ್ಶನ್. ಆದರೆ ಆತನ ವಿರುದ್ಧ ಇಲ್ಲಿಯವರೆಗೂ ಚಿತ್ರರಂಗದ ಯಾವ ಪ್ರಮುಖರೂ ಚಕಾರವೆತ್ತಿಲ್ಲ, ಬದಲಾಗಿ ಹಲವಾರು ತಿಂಗಳುಗಳಿಂದ ದರ್ಶನ್‌ನಿಂದ ದಾರುಣವಾದ ಹಲ್ಲೆಗೆ ಗುರಿಯಾದ ವಿಜಯಲಕ್ಷ್ಮಿ ಮೇಲೆ ಒತ್ತಡ ತಂದು ಆಕೆ "ನನ್ನ ಗಂಡ ನನಗೆ ಹೊಡೆದಿಲ್ಲ, ನಾನು ಬಚ್ಚಲುಮನೆಯಲ್ಲಿ ಜಾರಿಬಿದ್ದು ಗಾಯಮಾಡಿಕೊಂಡೆ" ಎಂಬ ಹೇಳಿಕೆಯನ್ನು ನೀಡಿರುತ್ತಾರೆ. ಅದು ಮಾತ್ರವಲ್ಲದೆ ನಿಖಿತಾ ಎಂಬ ಮತ್ತೋರ್ವ ಮಹಿಳೆಯ ವಿರುದ್ಧ ನಿಷೇಧ ಘೋಷಿಸುತ್ತಾರೆ. ನಾಗರಿಕತೆ ಇರುವವರ್ಯಾರೂ ಹೀಗೆ ಮಾಡುವುದಿಲ್ಲ.

ಇದೆಲ್ಲದರ ಆಚೆಗೆ, ನಮ್ಮ ಸಮಾಜದ ಒಂದು ದೊಡ್ಡ ಪಿಡುಗು ದರ್ಶನ್ ಪ್ರಕರಣದಿಂದ ಮತ್ತೆ ಸಾಬೀತಾಗಿದೆ. ಅದು ಡೊಮೆಸ್ಟಿಕ್ ವಯಲೆನ್ಸ್ (ಕೌಟುಂಬಿಕ ಹಿಂಸೆ). ಒಂದು ಅಂದಾಜಿನ ಪ್ರಕಾರ ಬೆಂಗಳೂರಿನಲ್ಲೇ ಪ್ರತಿತಿಂಗಳು ಸುಮಾರು 8,000 ಮಹಿಳೆಯರು ತಮ್ಮ ಗಂಡ ನೀಡುವ ದೈಹಿಕ ಹಿಂಸೆಯ ವಿರುದ್ಧ ದೂರುಗಳನ್ನು ನೀಡುತ್ತಾರೆ. ನೆನಪಿಡಿ, ಈ ಎಲ್ಲಾ ಮಹಿಳೆಯರು ವಿಜಯಲಕ್ಷ್ಮಿ ತರಹವೇ ಹಲವಾರು ತಿಂಗಳು ಅಥವಾ ವರ್ಷಗಳ ಕಾಲ ತಮ್ಮ ಗಂಡನ ಹಿಂಸೆಯನ್ನು ತಡೆದುಕೊಂಡು ಕೊನೆಗೂ ಅದನ್ನು ಸಹಿಸಿಕೊಳ್ಳಲಾಗದೇ ದೂರು ಕೊಟ್ಟಿರುವವರು. ಅಂದರೆ ಇನ್ನಷ್ಟು

(16ನೇ ಪುಟಕ್ಕೆ...)

ಯಾತನೆಯಿಂದ ಬಿಡುಗಡೆ ಪಡೆದ ಕವಿಜೀವ ಶಿವತೀರ್ಥನ್

ನಮ್ಮೆಲ್ಲರ ಪ್ರೀತಿಯ ಕೆ.ಸಿ.ಶಿವತೀರ್ಥನ್ ಕೊನೆಗೂ ಬಿಡುಗಡೆ ಹೊಂದಿ...ದೆ. ಬಿಡುಗಡೆ ಎಂದು ಯಾಕೆ ಹೇಳಿದೆನೆಂದರೆ ಮೂರು ವರ್ಷಗಳ ...ದೆ ಸ್ಟ್ರೋಕ್ ಆದಾಗಿನಿಂದ ತಮ್ಮ ದೇಹದ ಬಲಭಾಗದ ಮೇಲೆ ನಿಯಂತ್ರಣ ...ದುಕೊಂಡು ಹಾಸಿಗೆ ಹಿಡಿದಿದ್ದ ಶಿವತೀರ್ಥನ್ ಅವತ್ತಿನಿಂದ ತಮ್ಮ ...ಹ ಎಂಬ ಪಂಜರದಲ್ಲಿ ಬಂಧಿಯಾಗಿದ್ದರು.

ಆ ಸ್ಟ್ರೋಕ್‌ನಿಂದಾಗಿ ಶಿವತೀರ್ಥನ್ ತಮ್ಮ ಮಾತನ್ನೇ ಕಳೆದುಕೊಂಡಿದ್ದರು. ...ಮ್ಮ ವಿಶಿಷ್ಟ ಕಂಠದಿಂದ ಜನರ ಗಮನ ಸೆಳೆಯುತ್ತಿದ್ದ, ತಮ್ಮ ತಮಾಷೆ ...ಮಾತುಗಳಿಂದ ಎಲ್ಲರನ್ನು ನಗಿಸುತ್ತಿದ್ದ ಶಿವತೀರ್ಥನ್ ಅಸಹಾಯಕರಾಗಿದ್ದರು. ...ರ ಕವಿ ಹೃದಯವಂತೂ ಆಘಾತವನ್ನೇ ಪ್ರತಿಕ್ಷಣ ಅನುಭವಿಸುತ್ತಿತ್ತು.

ಅಪ್ಪನ ಶಿಷ್ಯ ಮತ್ತು ಮಿತ್ರರಾಗಿದ್ದ ಶಿವತೀರ್ಥನ್ ಅವರನ್ನು ನಾನು ...ಗಿಯಾಗಿದ್ದಾಗಿನಿಂದ ಬಲ್ಲೆ. ಅಪ್ಪನ ಇತರೆ ಸ್ನೇಹಿತರು ಅಪ್ಪನನ್ನು ಮಾತ್ರ ...ಮಾತನಾಡಿಸಿಕೊಂಡು ಹೋದರೆ ಶಿವತೀರ್ಥನ್ ಮಾತ್ರ ಯಾವಾಗಲೂ ...ಮನೆಯಲ್ಲಿದ್ದ ಎಲ್ಲರನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಅಪ್ಪ ಇದ್ದಾಗ ...ಶಿವತೀರ್ಥನ್ ಅವರು ಬೆಂಗಳೂರಿಗೆ ಬಂದಾಗಲೆಲ್ಲ ಪತ್ರಿಕೆ ಆಫೀಸಿಗೆ ...ಬಂದು ಅಪ್ಪನನ್ನು ನೋಡದೆ ವಾಪಸ್ ಮೈಸೂರಿಗೆ ಹೋಗುತ್ತಿರಲಿಲ್ಲ.

ನಾನು ಪತ್ರಿಕೆಯ ಜವಾಬ್ದಾರಿ ...ವಹಿಸಿಕೊಂಡ ನಂತರವೂ ...ಆಫೀಸಿಗೆ ಬಂದು ಎಲ್ಲರನ್ನು ...ಮಾತನಾಡಿಸಿಕೊಂಡು ಹೋಗು...ತ್ತಿದ್ದರು. ಆಗ ಅವರು ತಪ್ಪದೇ ಅಪ್ಪನ ...ರೂಮಿನಲ್ಲಿ ಸ್ವಲ್ಪ ಸಮಯ ಕೂತು ...ಹೋಗುತ್ತಿದ್ದರು. ಅದೆಷ್ಟೋ ಬಾರಿ ...ಅವರು ಅಪ್ಪನ ರೂಮಿನಿಂದ ...ಹೊರಬಂದಾಗ ಅವರ ಕಣ್ಣುಗಳಲ್ಲಿ ...ನೀರಿರುತ್ತಿತ್ತು.

ನಾನು ಮೈಸೂರಿಗೆ ಹೋದಾಗ ...ರಾಮದಾಸ್ ಮತ್ತು ಶಿವತೀರ್ಥನ್ ...ವರನ್ನು ತಪ್ಪದೇ ಭೇಟಿ ಆಗುತ್ತಿದ್ದೆ. ...ಮ್ಮೆ ನಾನು ಇದ್ದಕ್ಕಿದ್ದಂತೆ ಮೈಸೂರಿಗೆ ಹೋದಾಗ ಶಿವತೀರ್ಥನ್ ...ರಿಗೆ ಅದು ಹೇಗೆ ಗೊತ್ತಾಯಿತೋ ಅವರು ರಾಮದಾಸ್ ಅವರ ...ನೆಯಲ್ಲಿ ಪ್ರತ್ಯಕ್ಷರಾದರು. ಆಗ ರಾಮದಾಸ್ ಅವರು "ನೋಡು ನಾನು ...ರೆ ಮೈಸೂರಿನಲ್ಲಿದ್ದರೂ ಈತ ಸಿಗಲ್ಲ. ಆದರೆ ಗೌರಿ ಮೈಸೂರಿಗೆ ...ಬಂದರೆ ಸಿಗುತ್ತಾನೆ" ಎಂದು ತಮಾಷೆ ಮಾಡಿದ್ದರು.

ರಾಮದಾಸ್ ಮತ್ತು ಶಿವತೀರ್ಥನ್, ಇಬ್ಬರೂ ಒಂದೇ ದಿನ ತಮ್ಮ ...ಧ್ಯಾಪಕ ವೃತ್ತಿಯಿಂದ ನಿವೃತ್ತಿ ಹೊಂದಿದರು. ಅವತ್ತು ಎಚ್.ಎಲ್. ...ಕೇಶವಮೂರ್ತಿ, ರಾಮದಾಸ್, ಅವರ ಪತ್ನಿ ನಿರ್ಮಲಾ, ಮಗಳು ಸ್ನೇಹ, ಶಿವತೀರ್ಥ ಮತ್ತು ನಾನು ಎಲ್ಲರೂ ಸೇರಿ ಮೈಸೂರಿನಲ್ಲಿ ಪಾರ್ಟಿ ಮಾಡಿದ್ದೆವು. ಅವತ್ತು ಶಿವತೀರ್ಥನ್ ಅವರು ಅದೆಷ್ಟು ಚಟಾಕಿಗಳನ್ನು ಹಾರಿಸಿದ್ದರೆಂದರೆ ನಾವೆಲ್ಲ ನಕ್ಕು ನಕ್ಕು ಎಂಜಾಯ್ ಮಾಡಿದ್ದೆವು.

ಅವರಿಗೆ ಸ್ಟ್ರೋಕ್ ಆದಾಗ ಅವರನ್ನು ನೋಡಲು ಹೋಗಿದ್ದೆ ಯಾವಾಗಲೂ ನನ್ನನ್ನು ನೋಡಿದ ಕೂಡಲೆ ತಮ್ಮ ಎರಡೂ ತೋಳುಗಳಲ್ಲಿ ನನ್ನನ್ನು ಅಪ್ಪಿಕೊಳ್ಳುತ್ತಿದ್ದ ಶಿವತೀರ್ಥನ್ ಅವತ್ತು ನನ್ನನ್ನು ಅಪ್ಪುವ ಸ್ಥಿತಿಯಲ್ಲಿ ಇರಲಿಲ್ಲ. ನಾನು ಅವರನ್ನು ಅಪ್ಪಿಕೊಂಡಾಗ ಅವರ ಕಠದಿಂದ ಹೊರಡಿದ 'ಆಆಆ..' ಎಂಬ ಅಸಹಾಯಕ ಸದ್ದು ಕೇಳಿ ಕಣ್ಣೀರಿಟ್ಟಿದ್ದೆ.

ಅವತ್ತು ಅವರು ಅಂತಹ ಸ್ಥಿತಿಯಲ್ಲೂ ಒಂದು ಸ್ಲೇಟ್ ಮೇಲೆ ತಮ್ಮ ಎಡಗೈಯಿಂದ 'ಪತ್ರಿಕೆ', 'ಅಮ್ಮ', 'ಚೀಬ', 'ಪಾಪು', 'ಕೆಲಸ' ಎಂದೆಲ್ಲ ಕಷ್ಟಪಟ್ಟು ಬರೆದು, ನನ್ನತ್ತ ಪ್ರಶ್ನಾರ್ಥಕವಾಗಿ ನೋಡುತ್ತಾ ಎಲ್ಲರ ಬಗ್ಗೆ ವಿಚಾರಿಸಿಕೊಂಡಿದ್ದರು. ನಾನು ಕೆಲಸ ಜಾಸ್ತಿಯಾಗಿ ಪುರುಸೊತ್ತು ಸಿಗಲ್ಲ ಎಂದಾಗ 'You must do your duty' ಎಂದು ಬರೆದು ಗೊಣಗಬೇಡ ಎಂದು ಎಚ್ಚರಿಸಿದ್ದರು. ಅವತ್ತು ನಾನು ಹೊರಡುವಾಗ "ನೀವು ಕವಿ. ಈ ಸ್ಥಿತಿಯಲ್ಲೂ ನಿಮ್ಮಲ್ಲಿ ಮೂಡುವ ಕವನಗಳನ್ನು ಸ್ಲೇಟ್ ಮೇಲೆ ಬರೆಯುತ್ತೀರಿ" ಎಂದೆ. ಕೆಲಕ್ಷಣ ಯೋಚಿಸಿದ ಅವರು ಸ್ಲೇಟ್ ಮೇಲೆ "ಮಾಂದಲಿರು ಬಿಸಿಲು ಬಂದರೆ ಬೊಡ್ಡೆ ಚುಗುರದೆ" ಎಂದು ಕಷ್ಟಪಟ್ಟು ಬರೆದು ತೋರಿಸಿದರು.

ನಾನು ಸಾಧ್ಯವಾದಾಗಲೆಲ್ಲ ನಮ್ಮ ಪ್ರಕಾಶನದ ಪುಸ್ತಕಗಳನ್ನು ಅವರಿಗೆ ಕಳುಹಿಸುತ್ತಿದ್ದೆ. ಕೆಲ ತಿಂಗಳ ಹಿಂದೆಯೂ ಮೈಸೂರಿನಿಂದ ಬಂದಿದ್ದ ಮಿತ್ರರೊಂದಿಗೆ ಅವರಿಗೆ ಪುಸ್ತಕಗಳನ್ನು ಕಳುಹಿಸಿದ್ದೆ.

ಕಳೆದ ವರ್ಷ ಮೈಸೂರಿಗೆ ಹೋದಾಗ ರಾಮದಾಸ್ ಅವರ ಮಗಳು ಸ್ನೇಹ "ಅಕ್ಕ, ಶಿವತೀರ್ಥನ್ ಅವರ ಸ್ಥಿತಿ ಚೆನ್ನಾಗಿಲ್ಲ, ನೀನು ಮತ್ತೆ ಮೈಸೂರಿಗೆ ಬರುವವರೆಗೂ ಅವರು ಇರುವುದಿಲ್ಲ ಅನ್ನಿಸುತ್ತೆ" ಎಂದಳು. ಅವತ್ತು ನಾನು, ಸ್ನೇಹ, ಸ್ನೇಹಾಳ ಮುದ್ದು ಮಗು ತುಷಾರ ಎಲ್ಲರೂ ಶಿವತೀರ್ಥನ್ ಅವರನ್ನು ನೋಡಲು ಹೋದೆವು.

ಶಿವತೀರ್ಥನ್ ಅವರು ಎಷ್ಟು ಸೊರಗಿದ್ದರೆಂದರೆ ಅವರ ದೇಹ ಅಕ್ಷರಶಃ ಅಸ್ಥಿಪಂಜರಕ್ಕೆ ಚರ್ಮವನ್ನು ಹೊದಿಸಿದಂತಿತ್ತು. ಅಷ್ಟು ಹೊತ್ತಿಗೆ ಅವರಿಗೆ ಗಂಟಲ ಮೂಲಕ ಉಣಿಸುವುದೂ ಕಷ್ಟವಾಗಿ ಅವರ ಹೊಟ್ಟೆಗೆ ಒಂದು



ರಾಮದಾಸ್-ಗೌರಿ-ಶಿವತೀರ್ಥನ್

ತೂತನ್ನು ಕೊರೆದು ಅದಕ್ಕೆ ಪೈಪೊಂದನ್ನು ಅಳವಡಿಸಿ ಅದರ ಮೂಲಕ ಆಹಾರವನ್ನು ನೀಡಲಾಗುತ್ತಿತ್ತು. ಶಿವತೀರ್ಥನ್ ಅವರ ಪತ್ನಿ ನಿರ್ಮಲಾ ಅವರು ಸ್ವತಃ ವೈದ್ಯರಾಗಿದ್ದು ಮೈಸೂರಿನಲ್ಲಿ ಒಂದು ನರ್ಸಿಂಗ್ ಹೋಮ್ ಅನ್ನು ನಡೆಸುತ್ತಾರೆ. ಶಿವತೀರ್ಥನ್ ಅವರನ್ನು ಆ ನರ್ಸಿಂಗ್ ಹೋಮ್‌ನಲ್ಲೇ ಇಟ್ಟು ನೋಡಿಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಶಿವತೀರ್ಥನ್ ಅವರಿಗೆ ಸ್ಟ್ರೋಕ್ ಆದ ನಂತರವೂ ಅವರು ಇಷ್ಟು ದಿನ ಬದುಕಿದ್ದಕ್ಕೆ ನಿರ್ಮಲಾ ಅವರ ಆರೈಕೆಯೇ ಕಾರಣ.


ಸುಮಾರು ಮೂವತ್ತು ವರ್ಷಗಳ ಕಾಲ ಸಾವಿರಾರು ವಿದ್ಯಾರ್ಥಿಗಳಿಗೆ ಕನ್ನಡ ಕಲಿಸಿದ ಶಿವತೀರ್ಥನ್ ಅವರು ಕವಿಯಾಗಿಯೂ ತಮ್ಮ ಛಾಪನ್ನು ಮೂಡಿಸಿದವರು ಎಂಬುದು ಎಲ್ಲರಿಗೂ ಗೊತ್ತು. ಆದರೆ ಬಹಳಷ್ಟು ಜನಕ್ಕೆ ಅವರ ಸಾಮಾಜಿಕ ಕಾಳಜಿಯ ಬಗ್ಗೆ ಗೊತ್ತಿಲ್ಲ. ಮೈಸೂರಿನ ಒಡನಾಡಿ ಸಂಸ್ಥೆಯಲ್ಲಿರುವ ಮಕ್ಕಳ ಭವಿಷ್ಯಕ್ಕೆಂದು ತಮ್ಮ ನಿವೃತ್ತಿ ವೇತನದಿಂದ ತಮ್ಮ ಕೈಲಾದಷ್ಟು ಸಹಾಯ ಮಾಡುತ್ತಿದ್ದರು. ಚಾಮಲಾಪುರ ವಿದ್ಯುತ್ ಸ್ಥಾವರದ ವಿರುದ್ಧ ಹೋರಾಟ ನಡೆದಾಗಲೂ ಹಣ ಸಹಾಯ ಮಾಡುವ ಮೂಲಕ ತಮ್ಮ ಬೆಂಬಲವನ್ನು ತೋರಿಸಿದ್ದರು. ಆದರೆ ಅವರೆಂದೂ ತಮ್ಮ ಈ ಕಾಣಿಕೆಗಳ ಬಗ್ಗೆ ಮಾತನಾಡಿದವರಲ್ಲ, ವೇದಿಕೆಯನ್ನೇರಿ ಭಾಷಣ ಮಾಡಿದವರಲ್ಲ, ಬದಲಾಗಿ ಜನಪರ ಹೋರಾಟಗಳಿಗೆ ತೆರೆಮರೆಯಿಂದಲೇ ಸಹಾಯ ಮಾಡುತ್ತಾ ಸುಖದೊಂದಿಗೆ ಸಾಮಾನ್ಯರಂತೆ ಕೂರುತ್ತಿದ್ದರು.

ಇಂತಹ ಪ್ರೀತಿಯ, ತಮಾಷೆಯ, ಅಪಾರ ಕಾಳಜಿಯ ಶಿವತೀರ್ಥನ್ ವಿರುದ್ಧವೇ ಬಂಡಾಯ ಹೂಡಿದ್ದ ಅವರ ದೇಹವನ್ನು ತ್ಯಜಿಸುವ ಮೂಲಕ ಬಿಡುಗಡೆ ಹೊಂದಿದ್ದಾರೆ. ಈಗ ಅವರು ನೆನಪು ಮಾತ್ರ. ಪ್ರೀತಿಯ ಶಿವತೀರ್ಥನ್ ಅವರಿಗೆ ನಮ್ಮ ತಂಡದ ನಮನ.

• ಗೌರಿ ಲಂಕೇಶ್

ಆರ್ಥಿಕ ಅಪರಾಧಗಳ ತನಿಖಾ ವರದಿ

ಯೋಗೇಶ್ವರ್‌ಗೆ ಜೈಲು ಯೋಗ



ಮೆಗಾಸಿಟಿ ವಂಚಕ ಯೋಗೇಶ್ವರ್ ಜೈಲಿಗೆ ಹೋಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಅದಕ್ಕೂ ಮುನ್ನ ಮುಖ್ಯಮಂತ್ರಿ ಸದಾನಂದಗೌಡ ಈ ಅಯೋಗ್ಯನನ್ನು ಸಂಪುಟದಿಂದ ತಕ್ಷಣ ವಜಾ ಮಾಡಿದರೆ ಕನಿಷ್ಠ ಪಕ್ಷ ಅವರ ಮಾನವಾದರೂ ಉಳಿಯಬಹುದೇನೋ?

• ಪಾರ್ವತೀಶ


ಮೆಗಾಸಿಟಿ ಸ್ಕೀಂನ ವಂಚಕ, ಹಾಲಿ ಅರಣ್ಯ ಸಚಿವ ಸಿ.ಪಿ. ಯೋಗೇಶ್ವರ್ ಸದ್ಯದಲ್ಲೇ ಮಂತ್ರಿ ಪದವಿ ಕಳೆದುಕೊಳ್ಳಲಿದ್ದಾನೆ. ಅಷ್ಟೇ ಅಲ್ಲ, ಅವನು ಜೈಲಿಗೂ ಹೋಗುವ ಕಾಲ ಹತ್ತಿರ ಬರುತ್ತಿದೆ. ಕೇಂದ್ರ ಸರ್ಕಾರದ ಉದ್ದಿಮೆ (ಕಾರ್ಪೊರೇಟ್) ವ್ಯವಹಾರಗಳ ಇಲಾಖೆಯ 'ಗಂಭೀರ ವಂಚನೆಯ ತನಿಖಾ ಘಟಕ'ದ ವರದಿಯೇ ಇದಕ್ಕೆ ಕಾರಣ!



ಮಂಜುಳಾ ಕುಮಾರಿ

ಬಿಜೆಪಿಗಳ ಯಾತ್ರಾ ನಾಯಕ ಎಲ್.ಕೆ. ಅಡ್ವಾಣಿ 'ಭ್ರಷ್ಟಾಚಾರದ ವಿರುದ್ಧ' ಹೊಸದೊಂದು ರಥಯಾತ್ರೆ ನಡೆಸಲು ಗಾಡಿ ರೆಡಿ ಮಾಡಿಕೊಳ್ಳುತ್ತಿರುವಾಗಲೇ ಇತ್ತ ಅರಣ್ಯ ಮಂತ್ರಿ ಸಿ.ಪಿ. ಯೋಗೇಶ್ವರನ ಗ್ರಹಚಾರ ಕೆಡುವಂತೆ ಕಾಣುತ್ತಿದೆ.

ಮೆಗಾಸಿಟಿ ಸ್ಕೀಂನಲ್ಲಿ ಸಾರ್ವಜನಿಕರ 37 ಕೋಟಿ ರೂಪಾಯಿ ನುಂಗಿ ನೀರು ಕುಡಿದಿರುವ ಯೋಗೇಶ್ವರನ ವಿರುದ್ಧ ಈಗ ಸಲ್ಲಿಕೆಯಾಗಿರುವ ತನಿಖಾ ವರದಿಯು ಬರೇ ಯೋಗೇಶ್ವರನನ್ನು ಮಾತ್ರವಲ್ಲ, ಅವನ ಹೆಂಡತಿ ಮಂಜುಳಾ ಕುಮಾರಿ, ತಮ್ಮ ಸಿ.ಪಿ. ಗಂಗಾಧರೇಶ್ವರ, ಭಾವ ಮಹದೇವಯ್ಯ ಹಾಗೂ ಎಚ್.ಆರ್. ರಮೇಶ್ ಎಂಬ ಇನ್ನೊಬ್ಬನನ್ನು ಸಹ ಆರ್ಥಿಕ ಅಪರಾಧ, ವಂಚನೆ, ಫೋರ್ಜರಿ ನಡೆಸಿದ ಆರೋಪ ಗಳ ಮೇಲೆ ಅರೆಸ್ಟ್ ಮಾಡಿ ಜೈಲಿಗೆ ಹಾಕಲು ಭೂಮಿಕೆ ಸಿದ್ಧಗೊಳಿಸಿದೆ.



ಇದೇ ಸಮಯಕ್ಕೆ ತನಿಖಾ ವರದಿಯ ಪ್ರತಿಗಳು ಬಿಜೆಪಿ ಹೈಕಮಾಂಡ್ ಕೈ ಸೇರಿವೆ. ದಿನಗೂಲಿ ಮುಖ್ಯಮಂತ್ರಿ ಸದಾನಂದಗೌಡರಿಗೆ ಈ ವರದಿಯು ತನ್ನ ಮುಖಕ್ಕೂ ಮಸಿ ಹಚ್ಚಲಿದೆಯೆಂಬ ಕಲ್ಪನೆಯೂ ಇದ್ದಂತಿಲ್ಲ. ಅಸಲಿಗೆ ಯೋಗೇಶ್ವರ್ ಸದಾನಂದಗೌಡರ ಕ್ಯಾಂಡಿಡೇಟೂ ಅಲ್ಲ, ಯಡ್ಡಿ ಅಂಡ್ ಸನ್ಸ್‌ಗೆ ಕಪ್ಪ ಕಾಣಿಕೆ ನೀಡಿ ಮಂತ್ರಿಗಿರಿ ಲಪಟಾಯಿಸಿರುವ ಶುದ್ಧ ಪೇಮೆಂಟ್ ಗಿರಾಕಿ ಇವನು.

ಈ ತನಿಖಾ ವರದಿಯ ಬಗ್ಗೆ ರಾಜ್ಯ ಬಿಜೆಪಿಗಳು ತಲೆ ಕೆಡಿಸಿಕೊಳ್ಳದಿದ್ದರೂ ದೆಹಲಿ ನಾಯಕರು ಸುಮ್ಮನೆ ಕೂರಲಾರರು. ಏಕೆಂದರೆ ಯೋಗೇಶ್ವರನನ್ನು ಮಂತ್ರಿ ಯಾಗಿಸಲು ಬಿಟ್ಟು, ನಾಳೆ ಅಡ್ವಾಣಿ ರಥಯಾತ್ರೆ ಹೊರಟರೆ ಜನ ಉರುಳಾಡಿಕೊಂಡು ನಗುತ್ತಾರೆ. ಹಾಗಾ ಗಿಯೇ ಕೇಂದ್ರ ತನಿಖಾ ಸಂಸ್ಥೆ ಯೋಗೇಶ್ವರನನ್ನು ಹಿಡಿದು ಜೈಲಿಗೆ ದಬ್ಬುವ ಮುಂಚೆ ಅವನನ್ನು ಮಂತ್ರಿಗಿರಿಯಿಂದ ಹೊರದಬ್ಬುವ ಲೆಕ್ಕಾಚಾರ ನಡೆದಿದೆ. ಇದು ಆಕಸ್ಮಾತ್ ತಡವಾದರೂ ಕಾನೂನು ಕ್ರಮವಂತೂ ತಡವಾಗಲಾರದು.

ಇಷ್ಟಕ್ಕೂ ಇವೆಲ್ಲಾ ಯೋಗೇಶ್ವರನ ಸ್ವಯಂಕೃತಾಪರಾಧಗಳೇ ಆಗಿವೆ. ಇನ್ನೊಬ್ಬರ ಮನೆ ಹಾಳು ಮಾಡಿ ತನ್ನ ಅರಮನೆ ಕಟ್ಟಿಕೊಳ್ಳುವುದು. ಕಂಡವರ ದುಡ್ಡಿನಲ್ಲಿ ಎಲೆಕ್ಷನ್‌ಗೆ ನಿಂತು ಕೋಟ್ಯಂತರ ರೂಪಾಯಿ ಲಾಸು ಮಾಡಿಕೊಂಡಿರುವುದು....

ಹೀಗೆ ಒಂದಾ ಎರಡಾ ಇವನ ಲೀಲೆಗಳು


ಮೆಗಾಸಿಟಿ ಅಂದ... ಕೈಕೊಟ್ಟ

ಅದು 1990 ರ ಅವಧಿ. ಚನ್ನಪಟ್ಟಣದ ಹಳ್ಳಿಗಳಿಂದ ತೆಂಗಿನಕಾಯಿಗಳನ್ನು ಖರೀದಿ ಮಾಡಿ ಬೆಂಗಳೂರಿನಲ್ಲಿ ಮಾರಿ ಜೀವನ ನಡೆಸುತ್ತಿದ್ದ ಯೋಗೇಶ್ವರ್. ಆಗತಾನೆ ಬೆಂಗಳೂರಿನ ಆಸುಪಾಸಿನಲ್ಲಿ ರಿಯಲ್ ಎಸ್ಟೇಟ್ ಬಿರುಸು ಸಣ್ಣದಾಗಿ ಕಾಣಿಸಿಕೊಳ್ಳುತ್ತಿದ್ದ ಕಾಲ. ಮಹತ್ವಾಕಾಂಕ್ಷಿಯಾಗಿದ್ದ ಇವನು ಒಂದು ರಿಯಲ್ ಎಸ್ಟೇಟ್ ಸಂಸ್ಥೆ ಮಾಡಿ ದುಡ್ಡು ಮಾಡುವ ಸ್ಕೆಚ್ ಹಾಕಿದ.

1994 ರ ಆಗಸ್ಟ್ 11 ರಂದು ಹೀಗೆ ಕಾಣಿಸಿಕೊಂಡ ಸಂಸ್ಥೆಯೇ ಮೆಗಾಸಿಟಿ (ಬೆಂಗಳೂರು) ಡೆವಲಪರ್ಸ್ ಅಂಡ್ ಬಿಲ್ಡರ್ಸ್ ಪ್ರೈವೇಟ್ ಲಿಮಿಟೆಡ್! (MDBL)

ಆಗ ಇದರ ಬಂಡವಾಳ ಜುಜುಬಿ 5 ಲಕ್ಷ ಇತ್ತು.

ಮೊದಲಿಗೆ ಈ MDBL ನಲ್ಲಿ ಯೋಗೇಶ್ವರ್, ಮತ್ತವನ ಹೆಂಡತಿ ಮಂಜುಳಾ ಕುಮಾರಿಯಲ್ಲದೆ ಆರುಣ್ ಚರಂತಿಮಠ ಮತ್ತವನ ಪತ್ನಿ ಸುಜಾತ ಚರಂತಿಮಠ ಪ್ರಮೋಟರ್‌ಗಳಾಗಿದ್ದರು. ನಂತರ 1996 ರಲ್ಲಿ ಚರಂತಿಮಠ ದಂಪತಿ MDBL ನಿಂದ ಹೊರಬಂದರು, ಅವರ ಜಾಗಕ್ಕೆ 1997 ರಲ್ಲಿ ಯೋಗೇಶ್ವರನ ತಮ್ಮ ಗಂಗಾಧರೇಶ್ವರ ಬಂದು ಕುಳಿತ. ಇದಾದನಂತರ 1998 ರ ಆಗಸ್ಟ್ 12 ರಂದು MDBL ಅನ್ನು ಪಬ್ಲಿಕ್ ಲಿಮಿಟೆಡ್ ಕಂಪನಿಯಾಗಿ ಬದಲಾಯಿಸಿದ ಯೋಗಿ ತನ್ನ ತಮ್ಮ, ಭಾಮೈದ ಮುಂತಾದ ರಕ್ತಸಂಬಂಧಿಗಳನ್ನೇ ಕಂಪನಿಯ ನಿರ್ದೇಶಕರನ್ನಾಗಿಸಿ ಆಯ ಕಟ್ಟಿನ ಸ್ಥಾನಗಳಿಗೆ ತಂದು ಕೂರಿಸಿಕೊಂಡ.




ಗಂಗಾಧರೇಶ್ವರ

ಹೆಸರಿಗೆ ಸಾರ್ವಜನಿಕ ಕಂಪನಿಯಾದರೂ ಹೀಗೆ MDBL ಲಿಮಿಟೆಡ್ ಯೋಗೇಶ್ವರನ ಫ್ಯಾಮಿಲಿಯ ಕಪಿಮುಷ್ಠಿಗೆ ಸಿಲುಕಿತು.

ಯೋಗೇಶ್ವರ್ ತನ್ನ ವಂಚನೆಯ ಹೊಸ ವರಸೆಗಳನ್ನು ಶುರು ಮಾಡಿಕೊಂಡ.

ಬಿಡದಿ ಹತ್ತಿರದ ಶೇಷಗಿರಿ ಹಳ್ಳಿಯ ಬಳಿ ವಜ್ರಗಿರಿ ಟೌನ್‌ಶಿಪ್ ಮಾಡುವುದಾಗಿ ಪ್ರಚಾರ ಶುರು ಮಾಡಿದ ಯೋಗಿ ಮಿಂಚಿನ ವೇಗದಲ್ಲಿ ಒಂಭತ್ತು ಸಾವಿರದ ಮುನ್ನೂರು ಜನರ ಮೆಂಬರ್‌ಶಿಪ್ ಪಡೆದುಕೊಂಡ. ತಿಂಗಳಿಗಿಷ್ಟು ಎಂದು ಅರವತ್ತು ತಿಂಗಳ ಕಾಲ ಕಂತಿನಲ್ಲಿ ಹಣ ಕಟ್ಟಿ ಸೈಟ್ ಪಡೆಯುವ ಸ್ಕೀಂ ಇದಾಗಿದ್ದ ಕಾರಣ ಮಿಡಲ್ ಕ್ಲಾಸಿನ ಜನ, ಸಣ್ಣ-ಮೀಡಿಯಂ ಸೈಜಿನ ಸಂಬಳದ ಸರ್ಕಾರಿ ಹಾಗೂ ಖಾಸಗಿ ನೌಕರರೆಲ್ಲಾ ಮುಗಿಬಿದ್ದು ಮೆಗಾಸಿಟಿ ಮೆಂಬರ್‌ಗಳಾದರು. ಹೀಗೆ ಅರವತ್ತು ತಿಂಗಳು ತಲಾ ಒಂದು ಸಾವಿರದಂತೆ ಕಟ್ಟುತ್ತಾ ಹೋದರೆ ಕೊನೆಗೆ ಒಂದು ಸೈಟು ಕೊಡುವುದಾಗಿ ಯೋಗಿ ಹೇಳಿದ್ದ. ಆ ಬಗ್ಗೆ MDBL ಹಾಗೂ ಮೆಂಬರ್‌ಗಳ ನಡುವೆ ಲಿಖಿತ ಅಗ್ರಿಮೆಂಟುಗಳೂ ಆದವು.



ಅಷ್ಟರಲ್ಲಾಗಲೇ ಸೈಟು ಬಯಸಿ ಹಣ ಕಟ್ಟುತ್ತಿದ್ದ ಮೆಂಬರ್‌ಗಳಿಗೆ ಸುಮಾರು 565 ಎಕರೆ ಜಮೀನು ಬೇಕಾಗುತ್ತಿತ್ತು. ಈ ಹಂತದಲ್ಲೇ ಯೋಗಿ ಇನ್ನೊಂದು ತಂತ್ರ ಮಾಡಿದ. ಶೇಷಗಿರಿಹಳ್ಳಿ ಹಾಗೂ ಸುತ್ತಲಿನ ಎಂಟು ಹಳ್ಳಿಯಲ್ಲಿ ವಜ್ರಗಿರಿ ಟೌನ್‌ಶಿಪ್‌ಗಾಗಿ ನೋಡಿದ್ದ ಭೂಮಿ ಖರೀದಿಯನ್ನು MDBL ಮೂಲಕ ನಡೆಸುವ ಬದಲಾಗಿ ತನ್ನ ನೆಂಟರ ಹೆಸರಿನಲ್ಲಿ ಖರೀದಿಸಲು ಹೊರಟ. ಮಜಾ ಅಂದರೆ ಆ ನೆಂಟರೆಲ್ಲಾ ಮೆಗಾಸಿಟಿ ಕಂಪನಿಯಲ್ಲೂ ಡೈರೆಕ್ಟರುಗಳಾಗಿದ್ದರು. ಯೋಗಿಯ ಪ್ರಕಾರ ಅವನ ಹೆಂಡತಿ, ತಮ್ಮ, ಭಾವ, ಭಾಮೈದರೆಲ್ಲಾ ಮೊದಲು ತಾವೇ ರೈತರಿಂದ ಭೂಮಿ ಖರೀದಿಸಿ ನಂತರ ಭೂಪರಿವರ್ತನೆ ಮಾಡಿಸಿ ಮೆಗಾಸಿಟಿಗೆ ಹಸ್ತಾಂತರಿಸುವ ಡೀಲ್ ಆದಾಗಿತ್ತು.

ಇವನೆಂಥ ಖದೀಮನೆಂದರೆ ಮೆಗಾಸಿಟಿಯಲ್ಲಿದ್ದ ಕಂಪನಿಯ ಅಂದರೆ ಸಾರ್ವಜನಿಕರ ಹಣದಿಂದ ಅದೇ ಕಂಪನಿಯ ಡೈರೆಕ್ಟರ್‌ಗಳು ತಮ್ಮ ಸ್ವಂತದ ಹೆಸರಿನಲ್ಲಿ ಭೂಮಿ ಖರೀದಿಸಲು ಕಳಿಸಿದ.

ದುಡ್ಡು MDBL ನದ್ದೇ ಆದಕಾರಣ MDBL ನೇರವಾಗಿ ರೈತರಿಂದ ಭೂಮಿ ಕೊಳ್ಳಲು ಅವಕಾಶವಿತ್ತು. ಆದರೆ ಯೋಗೇಶ್ವರ್ ಹಾಗೆ ಮಾಡದೆ ಮೆಗಾಸಿಟಿಯ 10 ಕೋಟಿ ರೂಪಾಯಿಗಳನ್ನು ಭೂಖರೀದಿಗಾಗಿ ತನ್ನ ಮನೆಯವರಿಗೇ ಕೊಟ್ಟುಬಿಟ್ಟ. ಈ ವ್ಯವಹಾರಕ್ಕೆ MDBL ನ ನಿರ್ದೇಶಕರ ಸಭೆ ಒಪ್ಪಿಗೆ ನೀಡುವಂತೆ ಮಾಡಲಾಯಿತು.

ಹೇಗಿದ್ದರೂ ಯೋಗನ ನೆಂಟರಿಷ್ಟರೇ ತಾನೇ ಮೆಗಾಸಿಟಿ ನಿರ್ದೇಶಕರಾಗಿದ್ದವರು.

KIADB ತಡೆ ನೆಪ

ಈ ನಡುವೆ 1998 ರಲ್ಲೇ ಕರ್ನಾಟಕ ಕೈಗಾರಿಕಾಭಿವೃದ್ಧಿ ನಿಗಮವು ಅದೇ ಏರಿಯಾದಲ್ಲಿ ಒಂದು ಇಂಡಸ್ಟ್ರಿಯಲ್ ಏರಿಯಾ ನಿರ್ಮಿಸಲು ಭೂಸ್ವಾಧೀನಕ್ಕೆ ಹೊರಟಿತು. ಅದರಲ್ಲಿ ವಜ್ರಗಿರಿ ಟೌನ್‌ಶಿಪ್‌ಗೆ ಬೇಕಿದ್ದ 130 ಎಕರೆ ಭೂಮಿಯೂ ಸೇರಿತ್ತು. ಅದನ್ನು ಯೋಗೇಶ್ವರ್ ಚೆನ್ನಾಗಿ ಬಳಸಿಕೊಂಡ. "ನಿಮಗೆಲ್ಲಾ ಸೈಟ್ ಕೊಡೋಣ ಅಂತ ಹೊರಟಿದ್ದೆವು. ಆದರೆ ಅದೇ ಜಾಗವನ್ನು KIADB ಸ್ವಾಧೀನಮಾಡಿಕೊಳ್ಳುತ್ತಿದೆ" ಅಂತ ಕತೆ ಕಟ್ಟಿದ. ಇವನ ಹತ್ತಿರ ಹೇಗೂ ಹಣವಿತ್ತಾದ್ದರಿಂದ ಆ ಗ್ರಾಮ ಬಿಟ್ಟು ಬೇರೆ ಕಡೆ ಭೂಮಿ ಖರೀದಿಸಬಹುದಿತ್ತು. ಆದರೆ ಯೋಗೇಶ್ವರ್ ಹಾಗೆ ಮಾಡದೆ ಜನ ನೀಡಿದ್ದ ಹಣ ತಿನ್ನಲು ಶುರು ಮಾಡಿದ. ಅಷ್ಟರಲ್ಲಿ ಮೂರು ಸಾವಿರದ ಒಂದು ನೂರು ಜನ ಕಂತಿನ ಪೂರ್ತಿ ಹಣ ಕಟ್ಟಿ ಸೈಟಿಗಾಗಿ ಕಾಯುತ್ತಿದ್ದರು. ಉಳಿದ ಎರಡೂ ಮುಕ್ಕಾಲು ಸಾವಿರ ಜನ, ಅನುಮಾನ ಬಂದ ಕಾರಣ ಅರ್ಧಕ್ಕೆ ಕಂತು ಕಟ್ಟಿ ನಿಲ್ಲಿಸಿದ್ದರು. ಅಂತವರಿಗೆಲ್ಲಾ ಯೋಗೇಶ್ವರ್ "ನೀವೆಲ್ಲಾ defaulters ನಿಮಗೆ ಸೈಟಿಲ್ಲ ದುಡ್ಡೂ ವಾಪಸ್ ಕೊಡಲ್ಲ" ಅಂದುಬಿಟ್ಟ.

ಹೆಸರು ಬದಲಾಯಿಸಿಕೊಂಡ ಖದೀಮ!

ಸಿ.ಪಿ.ಯೋಗೇಶ್ವರ್ ಎಂದು ಉಚ್ಚರಿಸಲಾಗುವ ಚಕ್ಕೇರೆಪುರ ಪುಟ್ಟಮಾದೇಗೌಡ ಯೋಗೇಶ್ವರ್ ಇನ್‌ಕಂ ಟ್ಯಾಕ್ಸ್‌ನವರ ಕಣ್ಣು ತಪ್ಪಿಸಲು ಹಾಗೂ ತನ್ನ ಅವ್ಯವಹಾರಗಳನ್ನು ಮುಚ್ಚಿ ಹಾಕಲು ಬೇರೆ ಬೇರೆ ಹೆಸರುಗಳಲ್ಲಿ ವ್ಯವಹರಿಸಿರುವುದೂ ಈಗ ಪತ್ತೆಯಾಗಿದೆ.

ಕೇಂದ್ರ ಸರ್ಕಾರದ ಕಂಪನಿ ಕಾಯ್ದೆಯ ಸೆಕ್ಷನ್ 266ಎ ಯಿಂದ 260 ಜಿವರೆಗೆ ಯಾವುದೇ ಖಾಸಗಿ ಕಂಪನಿಯ ನಿರ್ದೇಶಕರು DIN ನಂಬರ್ ಅನ್ನು ಪಡೆಯುವುದನ್ನು ಕಡ್ಡಾಯಗೊಳಿಸಿದೆ. Director Identification Number ಎನ್ನಲಾಗುವ ಈ DIN ಅನ್ನು ಯೋಗೇಶ್ವರ ಒಂದಲ್ಲ, ಎರಡಲ್ಲ ಒಟ್ಟು ಮೂರು ಬಾರಿ ಪಡೆದುಕೊಂಡಿದ್ದಾನೆ.

ದಿನಾಂಕ	DIN ಸಂಖ್ಯೆ	ಹೆಸರು
1. 03-08-2007	0167527	Chakkerepura Yogeeshwara
2. 15-01-2008	01743266	Channapatna Puttamadegowda Yogeeshwara
3. 24-06-2008	02233500	Yogeeshwara Chakkepura Madegowda

–ಇವೇ ಆ ಮೂರು ವಿಭಿನ್ನ ಹೆಸರಿನ DIN ನಂಬರ್‌ಗಳು! ಆಶ್ಚರ್ಯ ಸಂಗತಿ ಏನೆಂದರೆ ಮೆಗಾಸಿಟಿಯ ಮ್ಯಾನೇಜಿಂಗ್ ಡೈರೆಕ್ಟರ್ ಆದ ಇವನು ಕಂಪನಿಯ ದಾಖಲೆಗಳಲ್ಲಿ ಸಿ.ಪಿ.ಯೋಗೇಶ್ವರ ಎಂದು ಬರೆದುಕೊಳ್ಳುತ್ತಿದ್ದ!!

ಮೇಲ್ನೋಟಕ್ಕೆ ಇದು ಸಣ್ಣ ವ್ಯತ್ಯಾಸದಂತೆ ಕಂಡರೂ ಕಂಪನಿ ಕಾಯ್ದೆಯ ಒಬ್ಬನೇ ವ್ಯಕ್ತಿ ಕೇವಲ 10 ತಿಂಗಳ ಅವಧಿಯಲ್ಲಿ ಮೂರು ಬೇರೆ ಬೇರೆ ಹೆಸರಿನಲ್ಲಿ ಡಿನ್ ನಂಬರ್ ಪಡೆಯುವುದು ಅಪರಾಧ. ಇದರಲ್ಲಿ ಜೈಲು ಹಾಗೂ ದಂಡ ಯೋಗೇಶ್ವರ್‌ಗೆ ಕಟ್ಟಿಟ್ಟಬುತ್ತಿಯಾಗಿದೆ.

ಇದೇ ಡಿನ್ ನಂಬರ್ ಬಳಸಿ ಫ್ಯಾಷನ್ (ಪ್ರ) ಲಿ ಎನ್ನುವ ಕಂಪನಿ ಸ್ಥಾಪಿಸಿ ಮೆಗಾಸಿಟಿ ಲೆಕ್ಕದಿಂದ ಒಂದೂವರೆ ಕೋಟಿ ರೂ.ಗಳನ್ನು ಫ್ಯಾಷನ್ ಫೋರಂಗೆ ವರ್ಗಾಯಿಸಿ ಸಿಕ್ಕಿಬಿದ್ದಿದ್ದಾನೆ.

ಈ ಫ್ಯಾಷನ್ ಫೋರಂ ಚನ್ನಪಟ್ಟಣದಲ್ಲಿದೆ.



ಅರುಣ್ ಚರಂತಿಮಠ ಸುಜಾತ ಚರಂತಿಮಠ ಶಾಮೀಲು

ಯೋಗೇಶ್ವರ್ ಮೆಗಾಸಿಟಿ ಕಂಪನಿ ಶುರು ಮಾಡಿದಾಗ ಜೊತೆಗಿದ್ದ ದಂಪತಿಗಳಿವರು. ಮೂಲತಃ ಧಾರವಾಡದವನಾದ ಅರುಣ್ ಚರಂತಿಮಠ ಈಗ ಲಾಯರ್. ಸಿದ್ಧಿ ಗಣೇಶ್ ಫೌಂಡೇಷನ್ ಎಂದೊಂದು ಮಾಡಿಕೊಂಡು ವಿಶ್ವಮಟ್ಟದ ಸ್ಕೂಲ್ ಕಟ್ಟುತ್ತೇನೆಂದು ಹೇಳಿಕೊಳ್ಳುತ್ತಾನೆ. ಆದರೆ ಈ ತರದ ಯಾವ ಅಪಾಯಗಳೂ ಇದುವರೆಗೂ ಸಂಭವಿಸಿಲ್ಲ. ಈ ಅರುಣ್-ಸುಜಾತ ದಂಪತಿಗಳಿಗೆ ಯೋಗೇಶ್ವರ್ ಅದು ಹೇಗೆ ಗಂಟುಬಿದ್ದನೋ ಗೊತ್ತಿಲ್ಲ. ಅವರಿಬ್ಬರೂ **11.8.1994** ರಿಂದ **4.3.1996** ರ ತನಕ ಮೆಗಾಸಿಟಿಯ ಮುಖ್ಯಸ್ಥರಾಗಿದ್ದರು. ಬೆಂಗಳೂರಿನ ಆರ್‌ಎಂಸಿ ಬಡಾವಣೆಯಲ್ಲಿರುವ ಈ ದಂಪತಿ ತಾವೀಗ ಮೆಗಾಸಿಟಿಯಲ್ಲಿಲ್ಲ ಅಂತ ಹೇಳಿಕೊಳ್ಳುತ್ತಾರಾದರೂ **1994** ರಿಂದ **1996** ರ ತನಕ ನಡೆದಿರುವ ಅವ್ಯವಹಾರಗಳಿಗೆ ಇವರೂ ಹೊಣೆಯೆಂದು ಇನ್‌ಕಂ ಟ್ಯಾಕ್ಸ್ ಇಲಾಖೆ ಹಾಗೂ ಆರ್ಥಿಕ ಅಪರಾಧಗಳ ತನಿಖಾ ತಂಡ ತನ್ನ ವರದಿಯಲ್ಲಿ ದಾಖಲಿಸಿದೆ. ಸೈಟು ಕೊಡುವುದಾಗಿ ನಂಬಿಸಿ ಅಮಾಯಕರಿಂದ ಹಣ ವಸೂಲಿ ಮಾಡಿದ್ದು, ಹಾಗೆ ಸಂಗ್ರಹಿಸಿದ ಹಣವನ್ನು ದುರುಪಯೋಗವಾಗಲು ಬಿಟ್ಟಿದ್ದೇ ಅರುಣ್-ಸುಜಾತಾರ ತಪ್ಪುಗಳಾಗಿವೆ.

ಇದರಲ್ಲಿ ಬಹುತೇಕ ವಂಚನೆ ಯೋಗೇಶ್ವರನಿಂದ ಆಗಿದೆ. ಆದರೂ ಚರಂತಿಮಠ ದಂಪತಿಯೂ ಸಿಕ್ಕಿಬೀಳುವಂತಾಗಿದೆ.

ಯೋಗಿ ಪಿಎ ಖಾನ್‌ನ ಎತ್ತುವಳಿ ಪುರಾಣ

ವಂಚಕ ಯೋಗೇಶ್ವರನಿಗೆ ಹಠಾತ್ತನೆ ಹೊಡೆದ ಸಚಿವಗಿರಿಯ ಲಾಟರಿ ಗೋತಾ ಹೊಡೆಯುವ, ಆತ ಕಾಯಮ್ಮಾಗಿ ಪರಪ್ಪನ ಅಗ್ರಹಾರ ಸೇರುವ ಸಕಲ ಲಕ್ಷಣಗಳು ಸುಸ್ಪಷ್ಟವಾಗಿ ಗೋಚರಿಸುತ್ತಿವೆ. ಆ ಮುಹೂರ್ತಕ್ಕೆ ಮುನ್ನ ಸಿಕ್ಕಷ್ಟನ್ನು ಗೆಬರಿ ಬಾಯಿಗಿಟ್ಟುಕೊಳ್ಳಲು ಆಸಾಮಿಯೊಬ್ಬ ಶತಪ್ರಯತ್ನ ನಡೆಸುತ್ತಿದ್ದಾನೆ. ಆತ ಯೋಗೇಶ್ವರನ ಪುರಾತನ ಭಂಟ ಮತ್ತು ಹಾಲಿ ಪಿಎ ಖಾನ್.

ಯೋಗೇಶ್ವರ್ ಶಾಸಕನಾಗಿದ್ದ ಸಂದರ್ಭದಲ್ಲೆಲ್ಲಾ ಆತನ ಪರವಾಗಿ ನಿಯತ್ತಿನಿಂದ ತಿರುಪೆ ಎತ್ತುತ್ತಾ ಬಂದವನು ಖಾನ್. ಯೋಗಿ ಸಚಿವನಾದ ಬಳಿಕವಂತೂ ದಣಿವರಿಯದೆ ಭೋಜನಕ್ಕೆ ಕುಂತಿದ್ದ ಖಾನ್ ಪ್ರಮುಖ ಅಧಿಕಾರಿಗಳನ್ನೆಲ್ಲ ಸಪಾಟಾಗಿ ಸುಲಿಯುವ ಕೆಲಸಕ್ಕೆ ಚಾಲನೆ ನೀಡಿದ್ದ, ಇದೀಗ ಯೋಗಿಯ ಸಚಿವಗಿರಿಯ ಕ್ಲೈಮ್ಯಾಕ್ಸ್ ಕ್ಷಣಗಳು ಸನ್ನಿಹಿತವಾಗಿವೆ.

ಖಾನ್‌ನ ಭೋಜನವೂ ಬಿರುಸು ಪಡೆದುಕೊಂಡಿದೆ!

ರಾಮನಗರ ಕೇಂದ್ರ ಸ್ಥಾನದ ಪಿಡಬ್ಲ್ಯುಡಿ ಇಲಾಖೆ, ಜಿಪಂ, ತಾಪಂ, ಇಓ, ಇಂಜಿನಿಯರ್‌ಗಳು, ವಿಭಾಗ ಅಧಿಕಾರಿಗಳಿಂದ ಖಾನ್ ಆರಂಭದಲ್ಲೇ ಅಗಾಧವಾಗಿ ತಿರುಪೆ ಎತ್ತಿದ್ದಾನೆ.

ಈತನ ಎತ್ತುವಳಿ ದರ ಪಟ್ಟಿಯೂ ಗಾಬರಿ ಬೀಳಿಸುವಂತಿದೆ. ಐದರಿಂದ ಇಪ್ಪತ್ತು ಲಕ್ಷದವರೆಗೂ ಖಾನ್‌ನ ತಿರುಪೆ ಕೆಪಾಸಿಟಿ ಹರಡಿಕೊಂಡಿದೆ. ಇನ್ನುಳಿದಂತೆ ಕ್ಲಾಸ್ 1 ಕಂಟ್ರಾಕ್ಟರುಗಳೂ ಈತನ ಎತ್ತುವಳಿ ವ್ಯಾಪ್ತಿಯೊಳಗೆ ಬರುತ್ತಾರೆ. ಈತ ಎಂಥ ಐನಾತಿಯೆಂದರೆ ಎತ್ತಿದ ತಿರುಪೆ ಕಾಸಲ್ಲಿ ತಾನೂ ಒಂದಷ್ಟು ಇಟ್ಟುಕೊಂಡು ಉಳಿಕೆ ಮೊತ್ತವನ್ನು ಯೋಗಿಗೆ ತಲುಪಿಸುತ್ತಾನೆ.

ಹೀಗೆ ಕೋಟ್ಯಂತರ ರೂಪಾಯಿಗಳ ಒಡೆಯನಾಗಿರುವ ಖಾನ್ ಸ್ವತಂತ್ರವಾಗಿ ರಾಜಕೀಯ ಅಸ್ತಿತ್ವ ಕಂಡುಕೊಳ್ಳಲು ಯೋಚಿಸಿದ್ದಾನೆಂಬ ಮಾತುಗಳೂ ಇವೆ. ಇಂಥ ಖಾನ್ ಈಗೊಂದಷ್ಟು ವರ್ಷಗಳ ಹಿಂದೆ ಅಪ್ಪಟ ಅಬ್ಬೇಪಾರಿಯಂತಿದ್ದವನು. ಒಂದು ಕಾಲದಲ್ಲಿ ಕ್ರೀಡಾಪಟುವಾಗಿದ್ದ ಈತನಿಗೆ ಸ್ಥಳೀಯ ಕೆಲ ಪತ್ರಿಕೆಗಳು ಒಂದಷ್ಟು ಪ್ರಚಾರ ನೀಡಿದ್ದವು. ಆ ಸಮಯಕ್ಕೆ ಸರಿಯಾಗಿ ಯೋಗಿ ಪಕ್ಷೇತರನಾಗಿ ಕಣಕ್ಕಿಳಿದಿದ್ದ. ಆದರೆ ರಾಮನಗರದಲ್ಲಿ ನಿರ್ಣಾಯಕರಾಗಿದ್ದ ಮುಸ್ಲಿಮರನ್ನು ಒಲಿಸಿಕೊಳ್ಳಲು ಆತನಿಗೆ ಒಬ್ಬನೇ ಒಬ್ಬ ಮುಸ್ಲಿಂ ಮುಖಂಡನ ಪರಿಚಯವಿರಲಿಲ್ಲ. ಈ ಅಳಲನ್ನು ಯೋಗಿ ರಾಮನಗರದ ಗೌಸಿಯಾ ಕಾಲೇಜಿನಲ್ಲಿ ನೌಕರನಾಗಿದ್ದ ಇಮ್ರಾನ್ ಬಳಿ ತೋಡಿಕೊಂಡಿದ್ದ, ಆ ಸಂದರ್ಭದಲ್ಲಿ ಇಮ್ರಾನ್ ತನ್ನ ಸಂಬಂಧಿ ಖಾನ್‌ನನ್ನು ಯೋಗಿಗೆ ಪರಿಚಯಿಸಿದ್ದ.

ಹಾಗೆ ಯೋಗಿಗೆ ಹತ್ತಿರವಾದ ಖಾನ್ ಆಶ್ಚರ್ಯಕಾರಿಯಾಗಿ ಬೆಳೆದುನಿಂತ. ಎಲ್ಲಾ ಅಧಿಕಾರಿಗಳನ್ನೂ ಪಳಗಿಸಿಕೊಂಡ. ಇಂದು ಯೋಗಿಗೇ ಸೆಡ್ಡು ಹೊಡೆಯುವಂತೆ ಎಲ್ಲ ವಿಧದಲ್ಲೂ ಬೆಳೆದುಬಿಟ್ಟಿದ್ದಾನೆ.

ಪ್ರತೀದಿನ ಬೆಳಗಿನಿಂದ ಸಂಜೆವರೆಗೂ ಡೀಲುಗಳಲ್ಲೇ ಬ್ಯುಸಿಯಾಗಿರುವ ಈತನಿಗೆ ರಾಮನಗರದ ಬೆಂಗಳೂರು-ಮೈಸೂರು ಹೆದ್ದಾರಿಯ ಅರ್ಚಕರಹಳ್ಳಿ ಗೇಟ್ ಬಳಿಯಿರುವ ನಂದಿನಿ ಹೋಟೆಲ್ ಕರ್ಮಭೂಮಿ. ಅಧಿಕಾರಿಗಳನ್ನೆಲ್ಲ ಇಲ್ಲಿಗೇ ಬರಹೇಳಿ ಡೀಲು ಕುದುರಿಸುತ್ತಾನೆ. ಇದಲ್ಲದೆ ಜಿಲ್ಲಾ ಮಟ್ಟದ ಅಧಿಕಾರಿಗಳೆಲ್ಲ ಮಧ್ಯಾಹ್ನದ ಊಟವನ್ನು ಇಲ್ಲೇ ಮಾಡಬೇಕೆಂತಲೂ ಹುಕುಂ ಹೊರಡಿಸಿದ್ದಾನೆ! ಸದರಿ ಹೋಟೆಲ್‌ನ ಮಾಲೀಕ ಖಾನ್‌ಗೆ ಆಪ್ತನಾಗಿರುವುದು, ತಿಂಗತಿಂಗಳು ಒಂದಷ್ಟು ಹಫ್ತಾ ನೀಡುವುದು ಈ ಕಕ್ಕುಲಾತಿಗೆ ಕಾರಣ!

ಒಟ್ಟಾರೆಯಾಗಿ ಯೋಗೇಶ್ವರನ ಪಿಎ ಖಾನ್‌ನ ಹಾವಳಿಯಿಂದ ಬಹುತೇಕ ಅಧಿಕಾರಿಗಳು ಕಂಗಾಲಾಗಿದ್ದಾರೆ.

...ಕೈ ಸೇರಿದ್ದ ಜನರ ದುಡ್ಡನ್ನು ಸಿನಿಮಾ ತೆವಲಿಗೆ ಹಾಗೂ ಎಲೆಕ್ಷನ್ ಚಟಕ್ಕೆ ಸುರಿಯಲು ಶುರು ಮಾಡಿದ. ಉತ್ತರ ಧ್ರುವದಿಂದ ದಕ್ಷಿಣ ಧ್ರುವಕು, ಶಿವಪ್ಪನಾಯಕ, ...ನಿಕ, ಬದರಿ ಮುಂತಾದ ಸಿನಿಮಾಗಳಿಗೆ ದುಡ್ಡು ಸುರಿದು ಕೋಟಿಗಟ್ಟಲೆ ಕಳೆದುಕೊಂಡ. ಪ್ರೀತಿ ನೀ ಇಲ್ಲದೆ ನಾ ಹೇಗಿರಲಿ ಎನ್ನುವ ಸಿನಿಮಾ 2004 ರಲ್ಲಿ ಬರುವಷ್ಟರಲ್ಲಿ ...ವ 'ಸೈಟಿಲ್ಲದೆ ನಾ ಹೇಗಿರಲಿ' ಎನ್ನುತ್ತಾ ಯೋಗೇಶನ ವಿರುದ್ಧ ಕೇಸು ಜಡಿಯಲು ಹೊರಟರು. ಅಷ್ಟರಲ್ಲಿ ಎಲೆಕ್ಷನ್ ಚಟವೂ ಶುರುವಾಗಿ ಇನ್ನಷ್ಟು ಕೋಟಿಗಳನ್ನು ಯೋಗೇಶ್ವರ್ ...ಸು ಮಾಡಿಕೊಂಡ. ಈ ಗದ್ದಲದಲ್ಲಿ ಯಾರಿಂದ ಹಣ ಪಡೆದುಕೊಂಡಿದ್ದನೊ ಅವರಿಗೆ ಸೈಟು ಕೊಡಬೇಕೆಂಬ ...ಚಾರ ಯೋಗನಿಗೆ ಮರೆತೇ ಹೋಗಿತ್ತು.

ಕೇಸಿನ ಮೇಲೆ ಕೇಸು ಬಿತ್ತು

ಇದು 2002 ರಿಂದಲೇ ಶುರುವಾಗಿದೆ. ಮೆಗಾಸಿಟಿಲಿ ಸೈಟು ಬೇಕೆಂದು ಹಣ ಕಟ್ಟಿ ವಂಚನೆಗೊಳಗಾಗಿರುವ ...ರಾರು ಸದಸ್ಯರು ಕನ್‌ಸ್ಯೂಮರ್ ಕೋರ್ಟ್‌ಗೆ ಹೋದರು. ...ಲ್ಲಿ ಅವರೇ ಗೆದ್ದರು. ಇದನ್ನು ಪ್ರಶ್ನಿಸಿ ಯೋಗೇಶ್ವರ್ ...ಹಲಿಯ ನ್ಯಾಷನಲ್ ಕನ್‌ಸ್ಯೂಮರ್ ಕೋರ್ಟ್‌ವರೆಗೂ ಹೋದ. ಅಲ್ಲೂ ಕಪಾಳಮೋಕ್ಷವಾಯಿತು. ಹಣ ಕಟ್ಟಿರುವ ...ತಿಯೊಬ್ಬರಿಗೂ ಪೂರ್ತಿ ಹಣವನ್ನು ವಾರ್ಷಿಕ 18% ...ಡ್ಡಿಯೊಂದಿಗೆ ವಾಪಸ್ ನೀಡುವಂತೆ ಕೋರ್ಟ್ ...ದೇಶಿಸಿದೆ.

ಗ್ರಾಹಕ ರಕ್ಷಣಾ ಕಾಯ್ದೆ 1986 ರ ಸೆಕ್ಷನ್ 25/27 ...ಪ್ರಕಾರ ಕೋರ್ಟ್ ಈ ರೀತಿ ಆದೇಶಿಸಿದೆ.

ಆದರೆ ಯೋಗೇಶ್ವರ್ ಇದನ್ನೇ ನಿರ್ಲಕ್ಷಿಸಿಬಿಟ್ಟ.

ಆಗ ಅಖಾಡಕ್ಕಿಳಿದವರೇ ಇನ್‌ಕಂಟ್ಯಾಕ್ಸ್ ಇಲಾಖೆ!

ಕೋಟ್ಯಂತರ ರೂ. ಲೆಕ್ಕ ಸಿಕ್ಕಿಲ್ಲ

ಈಗ್ಗೆ ಐದು ವರ್ಷಗಳ ಹಿಂದೆ ಯೋಗೇಶ್ವರ್ ಮತ್ತವನ ನೆಂಟರು ಎಂ.ಡಿ.ಬಿ.ಎಲ್.ನಿಂದ ಅನಾಮತ್ತು 37 ಕೋಟಿ ರೂ. ದುರುಪಯೋಗಪಡಿಸಿಕೊಂಡಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ಈ ದುಡ್ಡು ಎಲ್ಲಿದೆ? ಅಂತ ಕೇಳಿದರೆ 'ಜಮೀನು ಖರೀದಿಗಾಗಿ ರೈತರಿಗೆ ಅಡ್ವಾನ್ಸ್ ಕೊಡಲು ಖರ್ಚಾಯಿತು' ಅಂದಿದ್ದಾರೆ. ಹಾಗಂದ ಮೇಲೆ ಅಗ್ರಿಮೆಂಟ್ ಕಾಪಿಗಳಿರಬೇಕಲ್ಲ?

ಯೋಗೇಶ್ವರ ಇನ್‌ಕಂಟ್ಯಾಕ್ಸ್ ಇಲಾಖೆಗೆ ಕೆಲವು ಅಗ್ರಿಮೆಂಟ್ ಕಾಪಿ ಕೊಟ್ಟನಾದರೂ ಅದೆಲ್ಲ ಸೇರಿದರೂ 37 ಕೋಟಿ ರೂ. ಲೆಕ್ಕಕ್ಕೆ ಹೊಂದಲಿಲ್ಲ, ಕೊನೆಗೆ ಐಟಿಯವರೇ 62 ಅಗ್ರಿಮೆಂಟ್ ಕಾಪಿಗಳನ್ನು ಹುಡುಕಿ ತೆಗೆದುನೋಡಿದಾಗ ಅವುಗಳಲ್ಲಿ ಬಹಳಷ್ಟು ನಕಲಿಯಾಗಿದ್ದವು. ಶ್ರೀಮಾನ್ ಯೋಗೇಶ್ವರ್ ಫೋರ್ಜರಿ ಮಾಡಿ ಆ ದಾಖಲೆಗಳನ್ನು ಸೃಷ್ಟಿಸಿದ್ದ. ಕೊನೆಗೆ ಇವೆಲ್ಲ ನಕಲಿ ಎಂದು ಬೆಂಗಳೂರು ದಕ್ಷಿಣ ಹಾಗೂ ರಾಮನಗರ ತಹಶೀಲ್ದಾರ್‌ಗಳೂ ಖಚಿತಪಡಿಸಿಬಿಟ್ಟರು.

ಈಗ ಯೋಗೇಶ್ವರ್ ವಿರುದ್ಧ ಕಂಪನಿ ವ್ಯವಹಾರಗಳ ಕಾಯ್ದೆ 405, 406, 463ರ ಅಡಿ ಮೋಸ, ಹಣ ದುರುಪಯೋಗ, ಫೋರ್ಜರಿ ಕೇಸುಗಳಾಗಿವೆ. ಜೊತೆಗೆ ಐಪಿಸಿ 420 ಸೆಕ್ಷನ್‌ನಡಿಯೂ ಕೇಸುಗಳಾಗಿವೆ.

ಇದಲ್ಲದೆ ಎಂ.ಡಿ.ಬಿ.ಎಲ್‌ನಿಂದ ತಿಂಗಳಿಗೆ 25 ಸಾವಿರ ರೂಪಾಯಿಯಂತೆ ಡ್ರಾ ಮಾಡಿಕೊಂಡು ಯೋಗೇಶ್ವರ ವರ್ಷಗಟ್ಟಲೆ ತಿಂದಿದ್ದಾನೆ. ಮೆಗಾಸಿಟಿಯ ನಿರ್ದೇಶಕರುಗಳು ಒಮ್ಮೆ 44 ಲಕ್ಷ, ಇನ್ನೊಮ್ಮೆ 25 ಕೋಟಿ ರೂ. ಡ್ರಾ ಮಾಡಿ ತಿಂದುಹಾಕಿರುವುದೂ ಈಗ ಪತ್ತೆಯಾಗಿದೆ.

ಬಿಡದಿಯಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಹಾಗೂ ಬೆಂಗಳೂರಿನ ಎಸ್‌ಬಿಎಂ ಹಾಗೂ ಆಂಧ್ರಾ ಬ್ಯಾಂಕ್ ಶಾಖೆಗಳಲ್ಲಿ ಯೋಗೇಶ್ವರ್‌ನ ಹಣಕಾಸು ವ್ಯವಹಾರಗಳಿದ್ದು ಅವೆಲ್ಲಾ ಈಗ ಐಟಿಯವರಿಗೆ ಸಿಕ್ಕುಬಿದ್ದಿವೆ. ಜೊತೆಗೆ ಮೆಗಾಸಿಟಿಯವರು ತಮ್ಮ ಭ್ರಷ್ಟಾಚಾರಗಳನ್ನು ಮರೆಮಾಚಲು 2006, 2007, 2008, 2009ನೇ ಸಾಲಿನ ವಾರ್ಷಿಕ ಹಣಕಾಸು ಲೆಕ್ಕಪತ್ರಗಳನ್ನೇ ಸರ್ಕಾರಕ್ಕೆ ಕೊಟ್ಟಿಲ್ಲ. ಅಷ್ಟೇ ಅಲ್ಲ ಹಣ ಕಟ್ಟಿದ ಜನ ಜಾಡಿಸಿ ಒದ್ದಾರೆಂದು ಹೆದರಿ 2006ರಿಂದ 2009ರ ತನಕ ಮೆಗಾಸಿಟಿಯ ಜನರಲ್ ಬಾಡಿ ಮೀಟಿಂಗ್ ಅನ್ನು ಯೋಗೇಶ್ವರ್ ನಡೆಸಲೇ ಇಲ್ಲ.

ತಪ್ಪಿಸಿಕೊಂಡು ತಿರುಗಿದ

ಕೇಂದ್ರ ಕಾರ್ಪೊರೇಟ್ ಅವ್ಯವಹಾರಗಳ ತನಿಖಾ ಸಂಸ್ಥೆಯು ಯೋಗೇಶ್ವರ್‌ಗೆ ತನ್ನೆದುರು ಹಾಜರಾಗಿ ಲಿಖಿತ ಹೇಳಿಕೆ ನೀಡುವಂತೆ ಅನೇಕ ಬಾರಿ ಸಮನ್ಸ್ ನೀಡಿದ್ದರೂ ಇವನು ತಪ್ಪಿಸಿಕೊಂಡು ತಿರುಗಿದ್ದಾನೆ.

ಮೆಗಾಸಿಟಿ ಕಂಪನಿಯ ಹಣದಲ್ಲಿ ತನ್ನ ಸ್ವಂತ ಹೆಸರಲ್ಲಿ ಒಂದು ಮಹೀಂದ್ರಾ ಬೊಲೆರೊ ಕಾರ್ ಖರೀದಿಸಿದ್ದು, ಭೂಮಿ ಖರೀದಿಗೆಂದು 5 ಕೋಟಿ ರೂ. ತನ್ನ ಹೆಸರಲ್ಲಿ ಡ್ರಾ ಮಾಡಿರುವುದು, ಚಕ್ಕೆರೆಯಲ್ಲಿ ಕಂಪನಿಯ ಹಣದಲ್ಲೇ ಮನೆ ಕಟ್ಟಿಸಿರುವುದು, ಷೇರ್ ಅಪ್ಲಿಕೇಷನ್ ಹೆಸರಿನಲ್ಲಿ ತನ್ನ ಲೆಕ್ಕದಲ್ಲಿ 1.99 ಕೋಟಿ ರೂ. ವ್ಯವಹಾರ ಮಾಡಿದ್ದು ಇವೆಲ್ಲ ಒಂದಾದರೆ 95 ಕೋಟಿ ರೂ.ಗಳ ಹಗರಣ ಇನ್ನೊಂದಿದೆ.

ಪ್ರೆಸ್ಟೀಜ್ ಬಿಡದಿ ಹೋಲ್ಡಿಂಗ್ಸ್ ಪ್ರೈವೇಟ್ ಲಿಮಿಟೆಡ್ ಎಂಬುವವರಿಂದ ಯೋಗೇಶ್ವರ್ 20 ಕೋಟಿ, 26 ಕೋಟಿ ಹಾಗೂ 49 ಕೋಟಿ ರೂ. ಪಡೆದು ನುಂಗಿ ಹಾಕಿದ್ದಾನೆ.

ಈ ಪ್ರೆಸ್ಟೀಜ್ ಬಿಡದಿ ಹೋಲ್ಡಿಂಗ್ಸ್ ಅಂದರೆ ಯಾರು? ಅವರಿಂದ 95 ಕೋಟಿ ರೂ.ಗಳನ್ನು ಯೋಗೇಶ್ವರ್ ಯಾಕೆ? ಹೇಗೆ ಕಿತ್ತ ಎಂಬುದು ಇನ್‌ಕಂ ಟ್ಯಾಕ್ಸ್‌ನವರಿಗೂ ಮೊದಲು ಗೊತ್ತಾಗಿರಲಿಲ್ಲ!

ಇವೆಲ್ಲ ಅವ್ಯವಹಾರಗಳ ಬಗ್ಗೆ ಹೇಳಿಕೆ ಕೊಡೆಂದು ಕರೆದರೆ ಈ ಆಸಾಮಿ ತಪ್ಪಿಸಿಕೊಂಡು ತಿರುಗುತ್ತಿದ್ದಾನೆ. **10-06-2011, 17-06-2011, 27-06-2011, 01-07-2011, 07-07-2011....** ಹೀಗೆ ಇದುವರೆಗೂ ಐದು ಬಾರಿ ಸಮನ್ಸ್ ಜಾರಿಯಾಗಿದ್ದರೂ ಯೋಗೇಶ್ವರ್ ಐಟಿ ತನಿಖಾ ದಳದೆದುರು ಹಾಜರಾಗಿಲ್ಲ.

ಇದೆಲ್ಲಾ ಕಂಪನಿ ಕಾಯ್ದೆಯ ಸೆಕ್ಷನ್ 240ರ ನೇರ ಉಲ್ಲಂಘನೆಯಾಗಿದ್ದು ಯೋಗೇಶ್ವರ್‌ನ ಬುಡಕ್ಕೆ ಬಿಸಿನೀರಾಗಿದೆ.

ವಜ್ರಗಿರಿ ಟೌನ್‌ಶಿಪ್ ನಿರ್ಮಾಣಕ್ಕಾಗಿ ರೈತರಿಂದ ಭೂಮಿ ಖರೀದಿಸಲು ಒಟ್ಟು 450 ಅಗ್ರಿಮೆಂಟ್ ಮಾಡಿಕೊಳ್ಳಲಾಗಿದೆ. ಅದಕ್ಕಾಗಿ 37.22 ಕೋಟಿ ರೂ. ಅಡ್ವಾನ್ಸ್ ಕೊಟ್ಟಿದ್ದೇನೆಂದು ಯೋಗೇಶ್ವರ್ ಹೇಳಿಕೊಂಡರೂ ತನಿಖಾ ಸಂಸ್ಥೆಗೆ ಸಿಕ್ಕಿದ್ದು ಕೇವಲ 62 ಅಗ್ರಿಮೆಂಟ್‌ಗಳು ಮಾತ್ರ. ಅಂದರೆ 388 ಅಗ್ರಿಮೆಂಟ್‌ಗಳು ನಡೆದೇ ಇಲ್ಲ ಅಂತಾಯಿತು. ಆದರೆ ಮೆಂಬರ್‌ಗಳಿಗೆ ಮಾತ್ರ ಭೂಮಿ ಖರೀದಿಯಾಗುತ್ತಿದೆ, ಸೈಟ್ ಇನ್ನೇನು ಕೊಡುತ್ತೇವೆಂದು ಬರೀ ಬೊಗಳೇ ಬಿಟ್ಟಿದ್ದಾನೆ ಈ ಭಡವ.

ಇನ್ನು ಆಶ್ಚರ್ಯ ಏನೆಂದರೆ ಆಗಿವೆ ಎನ್ನಲಾದ ಅಗ್ರಿಮೆಂಟ್‌ಗಳೂ ಫೋರ್ಜರಿ ಆಗಿರುವುದು!

ಉದಾಹರಣೆಗೆ ಸಿ.ವೆಂಕಟರಾಜು, S/o ವೆಂಕಟರಮಣ ಶೆಟ್ಟಿ ಎಂಬುವರಿಗೆ ಶೇಷಗಿರಿಹಳ್ಳಿಯ ಸರ್ವೆ ನಂ.15/2, 15/3, 67/4, 67/6ರಲ್ಲಿ ಒಟ್ಟು 12.09 ಎಕರೆ ಭೂಮಿ ಇದೆ. ಇವರಿಗೆ 84.97 ಲಕ್ಷ ರೂ. ನೀಡಿ ಅಗ್ರಿಮೆಂಟ್ ಮಾಡಿಕೊಂಡಿದ್ದೇನೆಂದು ಯೋಗೇಶ್ವರ್ ಲೆಕ್ಕ ತೋರಿಸಿದ್ದಾನೆ. ಆದರೆ ವೆಂಕಟರಾಜುಗೆ ಇದರ ಮಾಹಿತಿಯೇ ಇಲ್ಲ!

ಕೆಂಗೇರಿಯ ಲಕ್ಷ್ಮಣ ಎಂಬುವರಿಗೆ 26.59 ಲಕ್ಷ ಕೊಟ್ಟೆ ಎಂದು ಲೆಕ್ಕ ತೋರಿಸಿ ಜುಜುಬಿ 5.55 ಲಕ್ಷ ರೂ.ನೀಡಿ ಯೋಗೇಶ್ವರ್ ವಂಚಿಸಿರುವುದೂ ಈಗ ಪತ್ತೆಯಾಗಿದೆ.

ಹಂಪಾಪುರ ಗ್ರಾಮದಲ್ಲಿ ಸತ್ತವರ ಹೆಸರಿನಲ್ಲೆಲ್ಲಾ ಸೇಲ್ ಅಗ್ರಿಮೆಂಟ್ ಮಾಡಿದಂತೆ ನಕಲಿ ದಾಖಲೆ ಸೃಷ್ಟಿಸಿ ಸಿಕ್ಕಿಬಿದ್ದಿದ್ದಾನೆ ಮಾನ್ಯ ಅರಣ್ಯ ಸಚಿವ.

........ಹೀಗೆ ಬರೆಯುತ್ತಾ ಹೋದರೆ ಯೋಗೇಶ್ವರನ ವಂಚನೆಗಳ ಪುರಾಣ ಮುಗಿಯುವುದೇ ಇಲ್ಲ.

ಮೆಗಾಸಿಟಿ ವಂಚಕ ಯೋಗೇಶ್ವರ್ ಜೈಲಿಗೆ ಹೋಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಆದರೆ ಅದಕ್ಕೂ ಮುನ್ನ ಮುಖ್ಯಮಂತ್ರಿ ಸದಾನಂದಗೌಡ ಈ ಅಯೋಗ್ಯನನ್ನು ಸಂಪುಟದಿಂದ ತಕ್ಷಣ ವಜಾ ಮಾಡಿದರೆ ಕನಿಷ್ಠ ಪಕ್ಷ ಅವರ ಮಾನವಾದರೂ ಉಳಿಯಬಹುದೇನೋ? ❦

ಯೋಗೇಶ್ವರನ ಕೈಗೆ ಮಾರಿಷಸ್ ಹಾಗೂ ಸಿಪ್ರಸ್ ದೇಶಗಳ ದುಡ್ಡು!

ಚೆನ್ನಪಟ್ಟಣದ ಚಕ್ಕೆರೆ ಗ್ರಾಮದ ಸಾಧಾರಣ ರೈತ ಯುವಕ, ತೆಂಗಿನ ಕಾಯಿ ವ್ಯಾಪಾರಿ ಯೋಗೇಶ್ವರನೆಲ್ಲಿ, ಮಾರಿಷಸ್ ಹಾಗೂ ಸಿಪ್ರಸ್ ದೇಶಗಳ ದುಡ್ಡೆಲ್ಲಿ.....

ಎತ್ತಣಿಂದೆತ್ತ ಸಂಬಂಧ ಎಂದು ಯಾರಿಗಾದರೂ ಅಚ್ಚರಿಯಾಗುವುದು ಸಹಜ.

ಆದರೆ ಇದು ನಿಜ.

ಮೆಗಾಸಿಟಿ ಟೌನ್‌ಶಿಪ್‌ಗೆಂದು ಅಲ್ಲಲ್ಲಿ ಖರೀದಿಸಿದ್ದ 66 ಎಕರೆ 28 ಗುಂಟೆ ಜಮೀನನ್ನು 2006 ರ ಡಿಸೆಂಬರ್ ಹಾಗೂ 2007 ರ ಮಾರ್ಚ್ ನಡುವೆ ಯೋಗೇಶ್ವರ್ ಅಕ್ರಮವಾಗಿ ಮಾರಿಕೊಂಡಿದ್ದಾನೆ.

ಈ ಡೀಲಿನ ಮೊತ್ತ 26 ಕೋಟಿ 67 ಲಕ್ಷ ರೂಪಾಯಿಗಳು!

ಇದನ್ನು ಕೊಂಡವರು ಪ್ರೆಸ್ಟೀಜ್ ಬಿಡದಿ ಹೋಲ್ಡಿಂಗ್ ಪ್ರೈ....!! ಮತ್ತು ಈ ಡೀಲಿಗಾಗಿ ಹಣ ಬಂದದ್ದು ಮಾರಿಷಸ್ ಹಾಗೂ ಸಿಪ್ರಸ್ ದೇಶಗಳಿಂದ!!!

ಕೇಂದ್ರ ತನಿಖಾ ಆಯೋಗದ ವರದಿಯಲ್ಲಿ ಇದರ ಪೂರ್ಣ ವಿವರಗಳಿವೆ.

ಇದರಲ್ಲಿ ಯೋಗೇಶ್ವರನ ಮೊದಲ ಅಪರಾಧ ಯಾವುದೆಂದರೆ ಮೆಗಾಸಿಟಿ ಸದಸ್ಯರಿಂದ ಸಂಗ್ರಹಿಸಿದ ಹಣದಿಂದ ತನ್ನ ಸ್ವಂತ ಹೆಸರಿನಲ್ಲಿ ಭೂಮಿ ಖರೀದಿಸಿದ್ದು, ನಂತರ ಆ ಭೂಮಿಯಲ್ಲಿ



ಇರ್ಫಾನ್ ರಜಾಕ್

ಲೇಔಟ್ ಮಾಡಿ ಮೆಂಬರ್‌ಗಳಿಗೆ ಹಂಚುವ ಬದಲಾಗಿ ಇಡೀ 66 ಎಕರೆ ಜಮೀನನ್ನೇ ಪ್ರೆಸ್ಟೀಜ್ ಕಂಪನಿಗೆ ಅಕ್ರಮವಾಗಿ ಮಾರಿ ದುಡ್ಡು ಜೇಬಿಗಿಳಿಸಿದ್ದು.


ಇರ್ಫಾನ್ ರಜಾಕ್, ನೋಯಿ ರಜಾಕ್, ರೆಜ್ವಾನ್ ರಜಾಕ್ ಸೋದರರು ಮಾಲೀಕರಾಗಿರುವ ಪ್ರೆಸ್ಟೀಜ್ ಕಂಪನಿಗೆ ಅಂತಾ ಒಳ್ಳೆಯ ಹೆಸರೇನಿಲ್ಲ, ಅಮಾನತ್ ಕೋ-ಆಪರೇಟಿವ್ ಬ್ಯಾಂಕಿನ ಹಗರಣದಲ್ಲೂ ಇವರ ಹೆಸರಿದೆ. ಅದರ ಬಗ್ಗೆ ಸಿಓಡಿ ತನಿಖೆಯೂ ನಡೆಯುತ್ತಿದೆ. ಈ ಪ್ರೆಸ್ಟೀಜ್ ಕಂಪನಿಯವರು ಅದೆಂತಾ ಕಿಲಾಡಿಗಳೆಂದರೆ ಮೆಗಾಸಿಟಿಗೆ ಸೇರಬೇಕಿದ್ದ ಭೂಮಿಯನ್ನು ಯೋಗೇಶ್ವರನ ಮೂಲಕ ಖರೀದಿಸುವಾಗ ಪ್ರೆಸ್ಟೀಜ್ ಬಿಡದಿ ಹೋಲ್ಡಿಂಗ್ಸ್ ಎನ್ನುವ ಹೊಸ ಕಂಪನಿಯನ್ನೇ ಸೃಷ್ಟಿಸಿದ್ದಾರೆ. ದೂರದ ಮಾರಿಷಸ್ ಹಾಗೂ ಯುರೋಪ್‌ನ ಪುಟ್ಟ ದೇಶವಾದ ಸಿಪ್ರಸ್‌ನಿಂದ ಹೂಡಿಕೆದಾರರು ಹಣ ನೀಡಿದಂತೆ ತೋರಿಸಿಕೊಂಡಿದ್ದಾರೆ. ಆದರೆ ಇಲ್ಲಿ ವಿದೇಶಿ ಹಣ ತೊಡಗಿಸುವಾಗ ರಿಸರ್ವ್ ಬ್ಯಾಂಕ್‌ನ ಅನುಮತಿ ಪಡೆಯದೆ ಈಗ ಸಿಕ್ಕಿಬಿದ್ದಿದ್ದಾರೆ.

ಈ ಯೋಗೇಶ್ವರನಾದರೂ ಎಂತವನು.

ಬಿಡದಿ ಹತ್ತಿರದ ಜಮೀನನ್ನು ವಿದೇಶಿ ಹೂಡಿಕೆದಾರರಿಗೆ ಮಾರುವುದೆಂದರೆ ಚನ್ನಪಟ್ಟಣದಿಂದ ತೆಂಗಿನಕಾಯಿ ತಂದು ಬೆಂಗಳೂರಿನಲ್ಲಿ ಮಾರುವಷ್ಟೇ ಸಲೀಸೆಂದು ಭಾವಿಸಿದ್ದನೇನೋ.

ಈಗ ನೋಡಿದರೆ ಕಾನೂನು ಜಾಡಿಸಿ ಒದೆಯುತ್ತಿದೆ. ❦

ಜೀವರಾಜನ ಗೂಂಡಾ ಸಾಮ್ರಾಜ್ಯದಲ್ಲಿ ದನದ ನೆಂಟರ ದಾಂಧಲೆ





ಅಭಿವೃದ್ಧಿಯಿಂದ ಜನರನ್ನು ತಾಕಬಲ್ಲ ಯೋಗ್ಯತೆಯಿಲ್ಲದ ಜನಪ್ರತಿನಿಧಿಯೊಬ್ಬ ಯಾವ್ಯಾವ ಅಡ್ಡಹಾದಿ ಹಿಡಿಯಬಹುದು?

ಈ ಪ್ರಶ್ನೆಗೆ ಶೃಂಗೇರಿ ವಿಧಾನಸಭಾ ಕ್ಷೇತ್ರದ ತುಂಬಾ ತಾಜಾ ಉತ್ತರಗಳು ದಂಡಿದಂಡಿಯಾಗಿ ಸಿಗುತ್ತವೆ. ಇಲ್ಲಿನ ಶಾಸಕ ಜೀವರಾಜ್‌ಗೆ ಅಭಿವೃದ್ಧಿಯೊಂದರಿಂದಲೇ ಜನಮಾನಸಕ್ಕೆ ಹತ್ತಿರಾಗುವ ವಿಪುಲ ಅವಕಾಶ ಗಳಿದ್ದವು. ಅದೆಲ್ಲವನ್ನು ಕಡೆಗಣಿಸಿ ಮುಂದುವರೆದ ಆತನನ್ನೀಗ ಯಾವ ಕ್ಷಣದಲ್ಲಾದರೂ ಎದುರಾಗ ಬಹುದಾದ ಚುನಾವಣೆ ಕಂಗಾಲಾಗಿಸಿದೆ. ಬಜೆಪಿಯ ರಾಜ್ಯನಾಯಕರೇ ಕಳ್ಳರಾಗಿ ಜೈಲು ಪಾಲಾಗುತ್ತಿರುವ ಈಗಿನ ಪರಿಸ್ಥಿತಿ ಯಾವ ಕೋನದಿಂದಲೂ ಆತನ ಗೆಲುವಿಗೆ ಪೂರಕವಾಗಿಲ್ಲ, ಆದರೆ ಅಧಿಕಾರದಾಹದಲ್ಲಿ ಯಡಿಯೂರಪ್ಪನ ಖಾಸಾ ತಮ್ಮನಂತಿರುವ ಜೀವರಾಜ್ ಇನ್ನೊಂದು ಅವಧಿಗೆ ಶಾಸಕನಾಗಿಯೇ ತೀರುವ ಪಣತೊಟ್ಟಿದ್ದಾನೆ. ಅದಕ್ಕಾಗಿ ಆರಿಸಿಕೊಂಡಿರುವ ಹಾದಿ ಮಾತ್ರ ತೀರಾ ಅಮಾನವೀಯವಾದದ್ದು.

ಚುನಾವಣಾ ಸಂದರ್ಭದಲ್ಲಿ ಬೆನ್ನಿಗಿರಲಿ ಎಂಬ ಉದ್ದೇಶದಿಂದಲೇ ಜೀವರಾಜ್ ಭಜರಂಗ ದಳಕ್ಕೆ ಮತ್ತೆ ಉಸಿರು ತುಂಬಿಸಿದ್ದಾನೆ. ಸದರಿ ಸಂಘಟನೆ ಚರ್ಚ್ ದಾಳಿ, ದತ್ತಪೀಠ ವಿವಾದ, ಗೋಹತ್ಯಾ ನಿಷೇಧದಂಥವುಗಳ ಮೂಲಕ ಕರ್ನಾಟಕದ ನೆಮ್ಮದಿಗೆ ಕೊಳ್ಳಿಯಿಟ್ಟದ್ದೀಗ ಇತಿಹಾಸ. ಆದರೆ ಚರ್ಚ್‌ಗಳ ಮೇಲಿನ ದಾಳಿಯ ಮೂಲಕ ಮನುಷ್ಯ ಮನುಷ್ಯರ ನಡುವೆ ಬೆಂಕಿ ಹೊತ್ತಿಸಿದ ಭಜರಂಗ ದಳ ತಾನೇ ಸುಟ್ಟು ಭಸ್ಮವಾಗಿತ್ತು, ಆ ಸಂದರ್ಭದಲ್ಲಿ ಬಜೆಪಿ ಮತ್ತು ಆರೆಸ್ಸೆಸ್ ಹುನ್ನಾರಗಳು ನಿಷ್ಠ ಭಜರಂಗಿಗಳನೇಕರಿಗೆ ಅರಿವಾಗಿ ಹೊರನಡೆದು ಬಚಾವಾಗಿದ್ದರು.

ಆ ನಂತರದಿಂದ ಈವರೆಗೆ ಮಲೆನಾಡು ನಿಜಕ್ಕೂ ಶಾಂತವಾಗಿತ್ತು, ಘಾಸಿಗೊಂಡ ಮನಸ್ಸುಗಳೆಲ್ಲಾ ಮರಳಿ ಮೊದಲಿನಂತಾಗಿದ್ದವು. ಆದರೆ ಜೀವರಾಜ್ ತನ್ನ ತೆವಲಿಗೆ ಅಂತಹುದೊಂದು ಆರೋಗ್ಯವಂತ ವಾತಾವರಣವನ್ನು ಹಾಳುಗೆಡವಿದ್ದಾನೆ. ಇದೀಗ ಭಜರಂಗದಳ ಅಂತ ಹೇಳಿಕೊಳ್ಳುತ್ತಿರುವ ಸಂಘಟನೆಯಲ್ಲಿ ಹಳೇ ತಲೆಗಳು ಅಷ್ಟಾಗಿ ಕಾಣಿಸುತ್ತಿಲ್ಲ. ದಂಧೆಕೋರರು, ಬಡ್ಡಿ ಮಾಫಿಯಾ ಕುಳಗಳು ಮತ್ತು ಹಿಂದೆ ಭಜರಂಗದಳದಲ್ಲಿದ್ದು ಎತ್ತುವಳಿ ನಡೆಸಿ ಹೊರದಬ್ಬಿಸಿಕೊಂಡ ದಗಲ್ಬಾಜಿಗಳೇ ಸಂಚಾಲಕರಾಗಿ, ಮುಖ್ಯಸ್ಥರಾಗಿ ಮೆರೆದಾಡುತ್ತಿದ್ದಾರೆ. ಇವರ ತೆವಲನ್ನು ಅರ್ಥೈಸಿಕೊಳ್ಳಲಾಗದ ಅಮಾಯಕರೊಂದಷ್ಟು ಮಂದಿ ಸಮಾಜದ ಸ್ವಾಸ್ಥ ಕೆಡಿಸಿ, ತಮ್ಮದೇ ಭವಿಷ್ಯಕ್ಕೆ ಕೊಳ್ಳಿಯಿಟ್ಟುಕೊಳ್ಳುತ್ತಿದ್ದಾರೆ.





ಹಲ್ಲೆಗೊಳಗಾದವರು


ಸದ್ಯ ಈ ಹೊಸಾ ಭಜರಂಗದಳ ಶೃಂಗೇರಿ ವಿಧಾನಸಭಾ ಕ್ಷೇತ್ರದ ತುಂಬಾ ಶಾಖೆ ತೆರೆದುಕೊಂಡಿದೆ. ಕೊಪ್ಪ ನಗರ ಸಂಚಾಲಕ ರಾಜೇಶ್ ಭಟ್ಟ, ತಾಲ್ಲೂಕು ಸಂಚಾಲಕ ಶ್ರೀನಿವಾಸ ಶೆಟ್ಟಿ, ವಿಜಯೇಂದ್ರ, ಸುಧಾಕರ ಭಟ್ಟ ಮೊದಲಾವರ ದುಷ್ಟಕೂಟ ಕಳೆದ ತಿಂಗಳೊಂದರಲ್ಲೇ ಮೂರು ಪ್ರತ್ಯೇಕ ದಾಂಧಲೆ ನಡೆಸಿ ಅಮಾಯಕರನ್ನು ಸಾಯಬಡಿದಿದ್ದಾರೆ. ಇದರ ಸತ್ಯಾಸತ್ಯತೆ ಹುಡುಕುತ್ತಾ ಹೋದರೆ ಈ ಅಡ್ನಾಡಿಗಳ ಭಯಾನಕ ಮುಖದ ನಗ್ನದರ್ಶನವಾಗುತ್ತದೆ.

ಕ್ಷೇತ್ರದ ಶಾಂತಿ ಕದಡಲು ಜೀವರಾಜ್‌ನಿಂದ ದುರ್ದಾನ ಪಡೆದುಕೊಂಡ ಸದರಿ ದುಷ್ಟಕೂಟಕ್ಕೆ ದಾಂಧಲೆಯೆಬ್ಬಿಸಲು ಶಾಂತ ಮಲೆನಾಡಿನಲ್ಲಿ ಬೇರ್‍ಯಾವ ವಿಚಾರಗಳೂ ಸಿಕ್ಕಿಲ್ಲ. ಈ ಸಂದರ್ಭದಲ್ಲಿ ಭಜರಂಗಿಗಳು ಮತ್ತೆ ದನದ ವಿಚಾರಕ್ಕೆ ಮರಳಿದ್ದಾರೆ. ತಕ್ಷಣ ದನ ತಿನ್ನುವವರನ್ನ ಟಾರ್ಗೆಟ್ ಮಾಡಿಕೊಂಡು ಬೀದಿಗಿಳಿದಿದ್ದಾರೆ. ಆ ಬಳಿಕ ನಡೆದ ಒಂದೊಂದು ಘಟನೆಯೂ ಭಜರಂಗಿಗಳ ಸರ್ವಾಧಿಕಾರಿ ಧೋರಣೆಗೆ, ಅಮಾನವೀಯತೆಗೆ ಹಾಗೂ ಒಂದಿಡೀ ಪೊಲೀಸ್ ಇಲಾಖೆಯೇ ದುಷ್ಟರ ಮರ್ಜಿಗೆ ಬಿದ್ದ ದಾರುಣಕ್ಕೆ ಪಕ್ಕಾ ಉದಾಹರಣೆಯಂತಿದೆ.

ಕಳೆದ ತಿಂಗಳ ಇಪ್ಪತ್ಮೂರರಂದು ಶ್ರೀನಿವಾಸ್ ಶೆಟ್ಟಿ, ರಾಜೇಶ್ ಭಟ್ಟ, ವಿಜಯೇಂದ್ರ, ಸುನೀಲ್ ಮತ್ತು ಸುಧಾಕರ ಭಟ್ಟನ ಪಾಪಿ ಪಡೆ ನಿರ್ಣಾಯಕವಾಗಿ ಬೀದಿಗಿಳಿದಿತ್ತು, ಇವರ ಪೈಶಾಚಿಕತೆ ಮೊದಲು ಬಲಿಬಿದ್ದಾತ ಕೊಪ್ಪ ತಾಲ್ಲೂಕಿನ ಬಪ್ಪುಂಜೆ ಕೈಮರದ ಬಡ ಲಾರಿ ಚಾಲಕ ಮಹಮ್ಮದ್. ಏಕಾಏಕಿ ಮಹಮ್ಮದ್ ಮನೆಗೆ ದಾಂಗುಡಿಯಿಟ್ಟ ಭಜರಂಗಿಗಳು ಆತನ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದಾರೆ. ಕಾಲಿನ ಮೂಳೆ ಮುರಿದುಹೋಗುವಂತೆ ರಾಡಿನಿಂದ ಬಾರಿಸಿದ್ದಾರೆ. ಈ ಹಲ್ಲೆ ಎಷ್ಟು ಮಾರಣಾಂತಿಕವಾಗಿತ್ತೆಂದರೆ ಮಹಮ್ಮದ್ ಪ್ರಜ್ಞಾಹೀನರಾಗಿ ಕುಸಿದುಬಿದ್ದರು. ತದನಂತರ ಅಂಥ ಸ್ಥಿತಿಯಲ್ಲಿದ್ದ ಮಹಮ್ಮದ್‌ರನ್ನು ಪೊಲೀಸರಿಗೊಪ್ಪಿಸಿ ಭಜರಂಗಿ ಪಡೆ ವಿಜಯೋತ್ಸಾಹದಿಂದ ಬೀಗಿತು. ತದನಂತರ ಇಲ್ಲಿಯವನೇ ಆದ ದಲಿತ ಪಂಗಡದ ಬಾಬು ಎಂಬಾತನಿಗೂ ಅಟ್ಟಾಡಿಸಿ ಹೊಡೆದು ಪೊಲೀಸರಿಗೊಪ್ಪಿಸಿ 'ಅವರು ದನದ ಮಾಂಸ ಬೇಯಿಸುತ್ತಿದ್ದರು' ಅಂತ ಘೋಷಿಸಿದರು. ಪೊಲೀಸರು ಅದನ್ನೇ ಮನಸಾರೆ ನಂಬಿ ಏಟು ತಿಂದು ಹೈರಾಣುಗೊಂಡವರ ಮೇಲೆ ಕೇಸು ಜಡಿದು ಲಾಕಪ್ಪಿಗೆ ಗದುಮಿ ತೆಪ್ಪಗಾದರು!

ಇದರಿಂದ ಪ್ರೇರಿತಗೊಂಡ ಭಜರಂಗಿ ಪಡೆ ಮತ್ತೊಂದು ಸುತ್ತಿನಲ್ಲಿ ಅಖಾಡಕ್ಕಿಳಿದದ್ದು ಕಳೆದ ತಿಂಗಳ ಕೊನೆಯಲ್ಲಿ, ಕೊಪ್ಪದ ನಾಗರಮಕ್ಕಿಯ ದುರ್ಗಾಪರಮೇಶ್ವರಿ ದೇಗುಲದ ಪಕ್ಕದಲ್ಲೇ ಭಜರಂಗಿಗಳು ನಡೆಸಿದ ವಂಚನೆ ನಿಜಕ್ಕೂ ಅಮಾನವೀಯ. ಭಜರಂಗಿಗಳಾದ ಹೇಮಂತ್ ಮತ್ತು ಸತೀಶ್ ಆಟೋ ಚಾಲಕ ಸಫ್ರುದ್ದೀನ್‌ನನ್ನು ಅಡ್ಡಗಟ್ಟಿ ಕುದುರೇಗುಂಡಿಗೆ ಹೋಗಬೇಕಾಗಿ ಹೇಳಿದ್ದಾರೆ. ಆಟೋ ಕುದುರೇಗುಂಡಿಗೆ ತಲುಪುವ ಹೊತ್ತಿಗಾಗಲೇ ಶ್ರೀನಿವಾಸಶೆಟ್ಟಿ, ರಾಜೇಶ್ ಭಟ್ಟ ಮುಂತಾದವರು ಅಲ್ಲಿ ಜಮೆಯಾಗಿದ್ದರು. ಆ ಹೊತ್ತಿಗಾಗಲೇ ಹೇಮಂತ್ ಮತ್ತು ಸತೀಶ್ ತಮ್ಮದೇ ಚೀಲದಲ್ಲಿ ತಂದಿದ್ದ ದನದ ಮಾಂಸವನ್ನು ಆಟೋದೊಳಗಿಟ್ಟು ಸಹಚರರಿಗೆ ಸುದ್ದಿ ಮುಟ್ಟಿಸಿದ ಆಟೋ ಕುದುರೇಗುಂಡಿ ಬಸ್‌ಸ್ಟಾಪ್ ಹತ್ತಿರ ಬರುತ್ ಶ್ರೀನಿವಾಸ ಶೆಟ್ಟಿಯ ಗುಂಪು ಸಫ್ರುದ್ದೀನ್‌ನ ಹೊರಗೆಳೆದು ಹಿಗ್ಗಾಮುಗ್ಗಾ ಹೊಡೆದಿದೆ.





ಇನ್ನು ಕೊಪ್ಪ ತಾಲ್ಲೂಕಿನ ಗುಡ್ಡೇತೋಟದಲ್ಲಿಯ ಭಜರಂಗಿಗಳ ಕಡೆಯಿಂದ ಇಂತಹುದೇ ದಾಂಧಲೇ ನಡೆದಿ ಜಯಪುರ ಹಾಗೂ ಸ್ಥಳೀಯ ಕಾರ್ಯಕರ್ತರು ಚಿ ಪ್ರಕಾಶ್, ತಂಗರಾಜ್ ಎಂಬುವವರನ್ನು ಹೀನಾಮ ಹೊಡೆದಿದ್ದಾರೆ. ಚಿನ್ನ ಎಂಬಾತನ ಕಾಲು ಮುರಿ ಹೋಗಿದೆ. ಭಜರಂಗಿಗಳು ಅದೆಷ್ಟು ರಾಕ್ಷಸರಾಗಿದ್ದಾರೆಂದ ಕೈಗೆ ಸಿಕ್ಕ ಮೂವರು ಬಡಪಾಯಿಗಳನ್ನು ಹೊಳೆನೀರಿನ ಅದುಮಿ ಹಿಡಿದು ಉಸಿರುಗಟ್ಟಿಸಲೆತ್ನಿಸಿದ್ದರು. ನಾಚಿಕೆಗೇಡಿ ಸಂಗತಿಯೆಂದರೆ ಇದೆಲ್ಲ ನಡೆಯುವಾಗ , ಖುದ್ದು ಪೊಲೀ ಮಂದಿಯೇ ಮೂಕಪ್ರೇಕ್ಷಕರಾಗಿದ್ದರು. ಬಿಜೆಪಿ ಬಾ ಹಿಡಿದು ಅಡ್ಡಾಡುತ್ತಲೇ ಭಜರಂಗದಲ್ಲೂ ಸಕ್ರಿಯವಾಗಿರು ಕೆಲ ತಲೆಮಾಸದ ಪಡಪೋಶಿಗಳೂ ಅಲ್ಲಿದ್ದವು. ಇದ ತಿಳಿದರೂ ಸಹ ಕೈಕಾಲು ಮುರಿದುಕೊಂಡವರ ಮೇ ಕೇಸು ಜಡಿದ ಜಯಪುರ ಠಾಣಾ ಪೊಲೀಸರು ಭಜರ ಗಳಿಗೆ ಮನಸಾರೆ ಸಹಕರಿಸಿದರು. ಒಂದಷ್ಟು ಮಂ ಎಚ್ಚೆತ್ತುಕೊಂಡ ಪರಿಣಾಮವೆಂಬಂತೆ ದಾಂಧಲೆ ನಡೆಸಿ ಕೆಲ ಭಜರಂಗಿಗಳ ಮೇಲೆ ಕೇಸು ದಾಖಲಾಗಿದ್ದು ನಿ ಆದರೆ ಯಾರೊಬ್ಬರ ಮೇಲೂ ಕ್ರಮ ಜರುಗಿಸಿಲ್ಲ, ಹಿಂದೆ ಚಿಕ್ಕಪುಟ್ಟ ವೈಯಕ್ತಿಕ ಮಟ್ಟದ ವ್ಯಾಜ್ಯಕ್ಕೂ ಅಟ್ರಾಸಿಟಿಯನ್ ಅಸ್ತ್ರವಾಗಿಸಿಕೊಳ್ಳುತ್ತಿದ್ದ. ಈ ಭಾಗದ ದಲಿತ ನಾಯಕರ ದಲಿತನ ಮೇಲೆಯೇ ಈ ರೀತಿ ಹಲ್ಲೆಗೊಳಗಾದರು ಅಕ್ಷರಶಃ ನರಸತ್ತವರಂತೆ ವರ್ತಿಸಿದ್ದು ಅಕ್ಷಮ್ಯ.

ಬಪ್ಪುಂಜೆಯಲ್ಲಿ ನಡೆದ ಘಟನೆಗೆ ಸಂಬಂಧಿಸಿದಂ ಹಲ್ಲೆಗೊಳಗಾದ ಮಹಮ್ಮದ್ ಕೊಪ್ಪ ಠಾಣೆಯಲ್ಲಿ ದೂರ ನೀಡಲು ಹರಸಾಹಸ ನಡೆಸಿದರು. ಆದರೆ ಖುದ ಪೊಲೀಸರೇ 'ಕೇಸುಗೀಸು ಅಂತೆಲ್ಲ ಹೋದ್ರೆ ನಿಂಗೆ ತೊಂದ್ರೆ ಆಗುತ್ತೆ, ಅವ್ರು ತಿರುಗಿಬೀಳ್ತಾರೆ. ರಕ್ಷಣೆ ಕೊ ಅಂತ ಬೇಕಾದ್ರೆ ಬರ್ರೊಡು, ಮರದಿಂದ ಬಿದ್ದೆ ಅನ್ನು ಎಂಬಿತ್ಯಾದಿ ಪುಗಸಟ್ಟೆ ಸಲಹೆ ಕೊಟ್ಟು ಹಾ ತಪ್ಪಿಸಲೆತ್ನಿಸಿದರು. ಇದರ ನಡುವೆಯೂ ಸದರಿ ಘಟನೆಗ ಸಂಬಂಧಿಸಿದಂತೆ ಒಂಬತ್ತು ಮಂದಿಯ ವಿರುದ್ಧ ದೂರು ದಾಖಲಾಗಿದೆ. ಆದ ಪ್ರಮುಖ ಆರೋಪಿ ಕಂ ದಂಧೆಕೋರ ರಾಜೇಶ್ ಭಟ್ಟನ ಹೆಸರನ್ನೇ ಕೈಬಿ ಲಾಗಿದೆ. ಹೆಸರಿದ್ದವರೂ ರಾಜಾರೋ ವಾಗಿ ಓಡಾಡಿಕೊಂಡಿದ್ದಾರೆ.

ಇದು ಜೀವರಾಜ್‌ನ ಕ್ಷೇತ್ರ ಅದೆಷ್ಟು ಕುಲಗೆಟ್ಟು ಹೋಗಿದೆಯೆಂಬುದಕ್ಕೆ ಸ್ಪಷ್ಟ ಉದಾಹರಣೆ. ಈತ ಪೊಲೀಸ್ ಇಲಾಖೆಯನ್ನೇ ಅದು ಹೇಗೆ ಹತೋಟಿಯಲ್ಲಿಟ್ಟುಕೊಂಡಿದ್ದಾನೆಂಬುದ ನಿದರ್ಶನವೂ ಹೌದು. ಈತ ತನ್ನದೇ ಕೂಸಾದ ಭಜರಂಗದಳದವರ ಕೂದಲು ಕೊಂಕದಂತೆ ಮುತುವರ್ಜಿ ವಹಿಸುತ್ತಿದ್ದಾನೆ. ಇದಕ್ಕೆ ಕೇಸು ಜಡಿಸಿಕೊಂಡರೂ ಆರಾಮವಾಗಿ ಪೇಟೆಯ ತುಂಬಾ ಓಡಾಡಿಕೊಂಡಿರುವ ಐನಾತಿಗಳೇ ಸಾಕ್ಷಿ. ಹೀಗೆ ಭಜರಂಗಿಗಳ ಪರವಾಗಿ ನಡೆದುಕೊಂಡಿರುವ ಕೊಪ್ಪ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಮಹೇಶ್ ಹೆಸರು ಕೆಡಿಸಿಕೊಂಡವರಲ್ಲ, ಚಿಕ್ಕಪುಟ್ಟ ವಿಚಾರಗಳಲ್ಲೂ ಹೀರೋ ಆಗಲು ಹವಣಿಸುವ ಖಯಾಲಿಯೊಂದನ್ನು ಹೊರತುಪಡಿಸಿದರೆ ಈತ ಒಂದಷ್ಟು ಖಡಕ್ ನಿಲುವಿನ ಅಧಿಕಾರಿ. ಇಂಥವರೇ ಯಾಕೆ ಭಜರಂಗಿಗಳ ಪರವೆಂಬಂತೆ ವರ್ತಿಸುತ್ತಿದ್ದಾರೆ ಎಂಬುದಕ್ಕೆ ರೋಚಕವಾದುದೊಂದು ಕಾರಣವೂ ಇದೆ. (ಬಾಕ್ಸ್ ನೋಡಿ) ಇದು ಸಣ್ಣಪುಟ್ಟ ವೀಕ್‌ನೆಸ್‌ಗಳನ್ನು ಹಿಡಿದುಕೊಂಡು ಭಜರಂಗಿಗಳು ಹೇಗೆ ಆಟ ಕಟ್ಟುತ್ತಾರೆಂಬುದಕ್ಕೆ ಭಯಾನಕ ಉದಾಹರಣೆ.

ಇನ್ನು ಜೀವರಾಜ್ ಪಿತೃ ಸ್ಥಾನದಲ್ಲಿ ನಿಂತು ಪೊರೆಯುತ್ತಿರುವ ಇಂದಿನ ಭಜರಂಗದಳ ಹಾಗೂ ಅದರ ಹೆಸರಲ್ಲಿ ಮೆರೆದಾಡುತ್ತಿರುವವರ ಜಾತಕ ಜಾಲಾಡಿದರೆ ನಿಜಕ್ಕೂ ಕಂಗಾಲಾಗುತ್ತದೆ. ಭಜರಂಗದಳದ ಕೊಪ್ಪ ನಗರ ಸಂಚಾಲಕನಾಗಿರುವಾತ ರಾಜೇಶ್ ಭಟ್ಟ, ಲಾಗಾಯ್ತಿನಿಂದ ಬಡ್ಡಿ ದಂಧೆ ನಡೆಸುತ್ತಿರುವ ಭಟ್ಟನ ಹೆಸರೆತ್ತಿದರೆ ಬೆಚ್ಚಿಬೀಳುವವರ ಸಂಖ್ಯೆ ದೊಡ್ಡದಿದೆ. ಈತನ ಬಡ್ಡಿ ಏಟಿಗೆ ಬರ್ಬಾದಾದವರ ಕರುಣಾಜನಕ ಕಥೆಗಳೂ ಧಾರಾಳವಾಗಿ ಸಿಗುತ್ತವೆ.

ಈಗ ಪುಟಗೋಸಿಯೊಳಗೆ ಕಟ್ಟಿರುವ ಹೊಕ್ಕನಂತೆ ಎಗರಾಡುತ್ತಿರುವ ರಾಜೇಶ್ ಭಟ್ಟ ಮೂಲತಃ

ಎಸ್ಸೈ ಮುಲಾಜಿಗೆ ಕಾರಣ ಲಾಕಪ್‌ಡೆತ್!

ಪಕ್ಷಪಾತದಿಂದ ವರ್ತಿಸಿದ ಕಮ್ಮಬುಕ್ಕಿಗಳು ಕೊಪ್ಪ ಠಾಣೆಯ ಎಸ್ಸೈ ಮಹೇಶರ ವೃತ್ತಿ ಬದುಕಿನಲ್ಲಿ ಕಾಣಸಿಗುವುದಿಲ್ಲ, ಇಂಥ ಅಧಿಕಾರಿ ಯಾಕೆ ಭಜರಂಗಿಗಳ ಪುಂಡಾಟ ಕಂಡೂಕಾಣದಂತಿದ್ದಾರೆ ಅಂತೊಂದು ಪ್ರಶ್ನೆ ಹುಟ್ಟುವುದು ಸಹಜ. ಇದಕ್ಕೆ ಉತ್ತರ ಹುಡುಕುತ್ತಾ ಸಾಗಿದರೆ ಇತ್ತೀಚೆಗೆ ನಡೆದ ಒಂದು ಲಾಕಪ್‌ಡೆತ್ ಪ್ರಕರಣದ ಮೂಲಕ ಅಸಲಿಯತ್ತುಗಳು ಬಿಚ್ಚಿಕೊಳ್ಳಲಾರಂಭಿಸುತ್ತವೆ.

ಕೆಲದಿನಗಳ ಹಿಂದೆ ನಗರದ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ತಮ್ಮಯ್ಯ ಎಂಬ ಸಭ್ಯಹುಡುಗ ಅದೇನೋ ಪ್ರಕರಣಕ್ಕೆ ಸಿಕ್ಕಿ ಕೊಪ್ಪ ಠಾಣೆ ಹೊಕ್ಕವನು ಹೆಣವಾಗಿ ಹೊರಬಂದಿದ್ದ. ರಾತ್ರಿ ಕಳೆಯುವುದರೊಳಗೆ ನಡೆದ ಈ ಅಮಾನವೀಯ ಘಟನೆ ಬೆಳಗಿನ ಹೊತ್ತಿಗೆ ಸಂಪೂರ್ಣ ಮುಚ್ಚಿಹೋಗಿತ್ತು.

ತಮ್ಮಯ್ಯ ಕೊಪ್ಪದ ಸಭ್ಯ ಹಮಾಲಿ ವೆಂಕಟೇಶ್ ಎಂಬಾತನ ಪುತ್ರ. ಈ ವೆಂಕಟೇಶ್‌ನ ಪ್ರಾಮಾಣಿಕತೆ, ಸ್ವಾಭಿಮಾನಸ್ಸಾಗಿ ಜೆಸಿ ಸಂಸ್ಥೆ ವರ್ಷದ ಬಹುಮಾನವನ್ನೂ ಕೊಡಮಾಡಿತ್ತು, ಅಪ್ಪನಂತೆಯೇ ಒಳ್ಳೆತನ ಹೊಂದಿದ್ದ ತಮ್ಮಯ್ಯನಿಗೆ ಕುಡಿಯುವ ಚಟವಿತ್ತು, ಆದರೆ ಎಂದೂ ಗಲಾಟೆಯಂಥದ್ದನ್ನು ಮಾಡಿಕೊಂಡಿದ್ದಿಲ್ಲ, ಇಂಥವನು ಇಲ್ಲಿಯವನೇ ಆದ ನವೀನನೊಂದಿಗೆ ಲೈಟಾಗಿ ಎಣ್ಣೆಹೊಡೆದು ಬಸ್ಟ್ಯಾಂಡ್ ಪಕ್ಕ ಮಾತಾಡುತ್ತಾ ನಿಂತಿದ್ದ, ಈ ಸಂದರ್ಭದಲ್ಲಿ ಸಿವಿಲ್ ಡ್ರೆಸ್‌ನಲ್ಲಿ ಬಂದು ವಿಚಾರಿಸಿದ ಪೊಲೀಸೊಬ್ಬರಿಗೆ ನವೀನ್ ಹೊಡೆದುಬಿಟ್ಟ. ಅದರಲ್ಲಿ ತಮ್ಮಯ್ಯನದ್ದೇನೂ ತಪ್ಪಿರಲಿಲ್ಲ, ನಡೆದದ್ದಿಷ್ಟು.

ಆದರೆ ತಕ್ಷಣ ಠಾಣೆಗೆ ಮಾಹಿತಿ ನೀಡಿದ ಆ ಪೊಲೀಸ್ ನವೀನನನ್ನು ಹಿಡಿದು ಲಾಕಪ್ಪಿಗೆ ತಳ್ಳಿ ಬೆಂಡೆತ್ತಿದ್ದರು. ತದನಂತರ ಜೊತೆಗಿದ್ದನೆಂಬ ಏಕೈಕ ಕಾರಣಕ್ಕೆ ಆದಾಗಲೇ ತಪ್ಪಿಸಿಕೊಂಡಿದ್ದ ತಮ್ಮಯ್ಯನನ್ನು ಆತ ಮನೆಯಿಂದಲೇ ಹಿಡಿದು ತಂದರು. ಅದೆಂಥಾ ಮನಸ್ಥಿತಿಯಿತ್ತೋ; ಪಾಪದ ತಮ್ಮಯ್ಯನಿಗೆ ಹೇಗೆ ಬಾರಿಸಿದರೆಂದರೆ ಆತ ಸ್ವಲ್ಪ ಸಮಯದಲ್ಲಿ ಸತ್ತೇಹೋಗಿದ್ದ.

ಈ ವಿಚಾರ ಭಜರಂಗಿಗಳಿಗೆ ಗೊತ್ತಾದದ್ದೇ ಠಾಣೆಯ ಬಳಿ ಒಟ್ಟೊಟ್ಟಾಗಿ ಅವತರಿಸಲು ಶುರುವಿಟ್ಟರು. ಹೇಗೋ ನಡೆದುಹೋದ ಈ ದುರ್ಘಟನೆ ಹೊರಬಿದ್ದರೆ ವೃತ್ತಿಬದುಕೇ ಅಲ್ಲಾಡುವುದರಿಂದ ಎಸ್ಸೈ ಮಹೇಶ್ ಸಹಜವಾಗಿ ಬೆದರಿಹೋಗಿದ್ದರು. ಇದನ್ನು ಸರಿಯಾಗಿ ಬಳಸಿಕೊಂಡ ಭಜರಂಗಿಗಳು ಎಲ್ಲವನ್ನೂ ತಾವೇ ಮುಂದೆ ನಿಂತು ಥಂಡಾ ಹೊಡೆಸಿದರು.

ಈಗ ಆ ಮುಲಾಜು ಮಹೇಶ್ ಮೇಲಿದೆ. ಭಜರಂಗಿಗಳಿಗೂ ಅವರ ಮೇಲೆ ಹಿಡಿತವಿದೆ. ಪಾಪ, ಖಡಕ್ ಅಧಿಕಾರಿ ಮಹೇಶ್ ಕಮಂಗಿಗಳ ಕೈಗೆ ಸಿಕ್ಕು ನರಳುತ್ತಿದ್ದಾರೆ. ಆತ ಬೇಗ ಚೇತರಿಸಿಕೊಂಡು ಖಾಕಿಯ ಮಾನ, ಬಡಪಾಯಿಗಳ ಬದುಕನ್ನು ಕಾಪಾಡುವಂತಾಗಲಿ....

...ಕೇಹೊನ್ನೂರಿನ ಕಟ್ಟಿನಮನೆಯುವನು. ಕೊಂಕಣಿ ...ಹ್ಮಣ. ಅಲ್ಲಿ ಸಾಗವಾನಿ-ಬೀಟೆ ನಾಟಾ ಮಾರಾಟ ...ಧ ನಡೆಸುತ್ತಿದ್ದವನು ವಿಪರೀತ ಕಿರಿಕ್ ಮಾಡಿಕೊಂಡಿದ್ದ ...ಥ ಭಟ್ಟನಿಗೆ ಕೆಲ ಮಂದಿ ಅಟ್ಟಾಡಿಸಿ ಹೊಡೆದಿದ್ದರೆಂಬ ...ತುಗಳಿವೆ. ಇನ್ನು ಅಲ್ಲಿದ್ದರೆ ಉಳಿಗಾಲವಿಲ್ಲ ಎಂದರಿತ ... ಆಸ್ತಿಪಾಸ್ತಿ ಮಾರಿ 2004ರಲ್ಲಿ ಸೀದಾ ಕೊಪ್ಪಕ್ಕೆ ...ರಿಕೊಂಡ. ಕೈಯಲ್ಲಿ ಆಸ್ತಿ ಮಾರಿದ ಒಂದಷ್ಟು ...ತ್ತಲ್ಲಾ? ಅದನ್ನೇ ಬಡ್ಡಿಗೆ ಬಿಡಲಾರಂಭಿಸಿದ. ಮೊದಲು ...ದರಿಂದ ಮೂರು ಪರ್ಸೆಂಟ್ ಇದ್ದ ಬಡ್ಡಿ ಮೀಟರು ...ಬರುತ್ತಾ ಹತ್ತು ಹನ್ನೆರಡಕ್ಕೇರಿತು. ಇತ್ತೀಚೆಗೆ ಇಪ್ಪತ್ತಕ್ಕೆ ...ದು ನೆಲೆಗೊಂಡ ವರ್ತಮಾನಗಳಿವೆ.

... ಈತ ಮೊದಲು ಬಡ್ಡಿ ದಂಧೆಗೆ ಆರಿಸಿಕೊಳ್ಳುತ್ತಿದ್ದದ್ದು ...ಪಾಯಿ ಬ್ರಾಹ್ಮಣರನ್ನು. ಮಲೆನಾಡು ಭಾಗದ ...ತೇಕರಂತೆ ಬ್ರಾಹ್ಮಣರು ಕೂಡ ಸಾಧುಗಳು. ...ಡೆದಾಟ ಬಡಿದಾಟಗಳಿಗೆ ನಿಲ್ಲುವವರಲ್ಲ. ರಾಜೇಶ್ ...ಟ್ಟನ ಪಾಲಿಗೆ ಈ ಮುಗ್ಧತೆಯೇ ಬಂಡವಾಳ. ಸಾಲ ...ಡುವುದಕ್ಕಿಂತ ಮೊದಲು ಮನೆಪತ್ರ, ಚೆಕ್ ಮುಂತಾದ ...ರಿಟಿ ತೆಗೆದುಕೊಂಡು ಸಾಲ ತೀರಿದ ಬಳಿಕವೂ ...ಡಿಸುವುದು ಈತನ ಪುರಾತನ ಖಯಾಲಿ. ಈಗೊಂದು ...ಡು ವರ್ಷದ ಹಿಂದೆ ಈತನ ಬಡ್ಡಿ ದಾಹದ ವಿರುದ್ಧ ...ದಷ್ಟು ಮಂದಿ ತಿರುಗಿಬಿದ್ದಿದ್ದರು. ತದನಂತರವೂ ...ರಲ್ಲೇ ಮುಂದುವರೆದ ಭಟ್ಟ ಮುಸ್ಲಿಮರಿಗೂ ಬಡ್ಡಿಗೆ ... ಕೊಟ್ಟು ಮುಂಡಾಯಿಸುವ ಪರಿಪಾಠ ಬೆಳೆಸಿಕೊಂಡ. ...ಲಿಯ ವಿಚಾರದಲ್ಲಿ ಈತ ಎಂಥಾ ರಾಕ್ಷಸನೆಂದರೆ ...ಾ ಸಾಲಗಾರರ ಹೆಂಡತಿಯರ ಮಾಂಗಲ್ಯಕ್ಕೂ ಕೈಹಾಕಿದ ...ದಾಹರಣೆಗಳು ಸಾಕಷ್ಟಿವೆ. ಇಂಥ ವಂಚನೆಗಳನ್ನೆಲ್ಲ ...ಸಿಕೊಳ್ಳಲು ಈತನಿಗೊಂದು ನೆರಳು ಬೇಕೇಬೇಕಿತ್ತು. ...ಲ್ಲದೆ ಹೋದರೆ ಜೈಲು ಗ್ಯಾರಂಟಿಯೆಂದರಿತ ಭಟ್ಟ ...ರಂಗದಳದ ನಗರ ಸಂಚಾಲಕನಾಗಿ ಅವತರಿಸಿ ಹಿಂದೂ ...ರ್ಮ, ಗೋಸಂಕುಲದ ರಕ್ಷಕನಂತೆ ಪೋಸು ಕೊಡುತ್ತಿದ್ದಾನೆ.

... ಇನ್ನು ಇಡೀ ಕೊಪ್ಪ ತಾಲ್ಲೂಕಿನ ಭಜರಂಗ ದಳಕ್ಕೆ ...ಚಾಲಕನಾಗಿರುವಾತ ಶ್ರೀನಿವಾಸ ಶೆಟ್ಟಿ. ಈತನ ಹೆಂಡತಿ ...ಳ್ಳೂರು ಠಾಣೆಯಲ್ಲಿ ಎಎಸ್‌ಐ ಆಗಿದ್ದಾರೆ. ಆರಂಭದಲ್ಲಿ ...ಜರಂಗದಳ ಸೇರಿಕೊಂಡಿದ್ದ ಈತ ಮೆಲ್ಲಗೆ ...ಟ್ಟುವಳಿಗಿಳಿದು ಹೊರದಬ್ಬಿಸಿಕೊಂಡಿದ್ದ. ಆ ಬಳಿಕ ...ಜರಂಗ ದಳವನ್ನು ಶಪಿಸುತ್ತಾ ಓಡಾಡಲಾರಂಭಿಸಿ ಸಣ್ಣಪುಟ್ಟ ...ತ್ತಿಗೆ ಕೆಲಸ, ವ್ಯಾಜ್ಯ ಪರಿಹಾರ ಅಂತೆಲ್ಲ ಮಾಡಿಕೊಂಡು ...ಯಾಗಿದ್ದ. ಜನ ಕೂಡಾ ಈತನನ್ನು ಗೌರವಿಸ...ಡಗಿದ್ದರು. ಚೆಂದಗೆ ಬದುಕುವ ಎಲ್ಲಾ ಅವಕಾಶಗಳೂ ...ತನೆದುರಿಗಿದ್ದವು. ಆದರೀಗ ತಾನೇ ತಾನಾಗಿ ...ಜರಂಗದಳವೆಂಬ ಖೆಡ್ಡಾಕ್ಕೆ ಕಾಲಿರಿಸಿದ್ದಾನೆ. ಒಂದು ...ದಲ್ಲಿ ಭಜರಂಗದಳದಲ್ಲಿ ಮೆರೆದಾಡಿದ ಮಹೇಂದ್ರ ...ಮಾರ್ ಉದಾಹರಣೆ ಈತನ ಕಣ್ಣೆದುರೇ ಇದೆ. ...ಪರೀತನಿಗೆ ಕೇಡುಗಾಲಕ್ಕೊಂಬಂತೆ ದನಗಳ ರಕ್ಷಣೆಯ ...ಖಬು ಹತ್ತಿಕೊಂಡಿದೆ.

ಇಂಥ ಹಿನ್ನೆಲೆಯಿರುವ ರಾಜೇಶ್ ಭಟ್ಟ, ಶ್ರೀನಿವಾಸ ...ಟ್ಟಿಯಂಥವರು ಭಜರಂಗದಳವನ್ನು ಯಾವರೀತಿ ...ಸಿಕೊಳ್ಳುತ್ತಾರೆ, ಅವರ ಉದ್ದೇಶಗಳೇನೆಂಬುದು ಎಂಥ ...ರಿಗಾದರೂ ಅರ್ಥವಾಗುತ್ತದೆ. ಆದರೆ ದನಗಳನ್ನು ...ಸುವ ಉಮೇದಿಗೆ ಬಿದ್ದು ಮೆದುಳನ್ನೇ ...ಣೆಯಂತಾಗಿಸಿಕೊಂಡವರಿಗೆ ಇದು ಅರ್ಥವಾಗುತ್ತಲೇ ...ಲ್ಲ. ಅದಾಗದಿದ್ದರೆ ಮುಂದಾಗುವ ಅನಾಹುತಗಳಿಗೆ ...ವರೇ ತಲೆಕೊಡಬೇಕಾಗುವುದನ್ನು ಯಾರಿಂದಲೂ ...ಸಲು ಸಾಧ್ಯವಿಲ್ಲ. ಯಾಕೆಂದರೆ ಭಜರಂಗದಳ, ಆರೆಸ್ಸೆಸ್, ...ಜೆಪಿಗಳ ಬೆನ್ನ ಹಿಂದೆ ಅಮಾಯಕರನ್ನು ಬಲಿಯಾಗಿಸಿದ ...ಹಾಸ ಸಾಕಷ್ಟಿದೆ.

ಒಟ್ಟಾರೆಯಾಗಿ ಜೀವರಾಜ್ ಮಹಾ ಅನಾಹುತ ...ಂದಕ್ಕೆ, ಭಜರಂಗದಳದ ಮೂಲಕ ಮುನ್ನುಡಿ ...ದಿದ್ದಾನೆ. ತನ್ನ ಕ್ಷೇತ್ರದ ನೆಮ್ಮದಿಯನ್ನೇ ಪಣಕ್ಕಿಟ್ಟಾದರೂ ...ಲ್ಲುವಂಥ ಜೀವರಾಜ್‌ನ ಮನಸ್ಥಿತಿ ನಿಜಕ್ಕೂ ಅಸಹ್ಯ ...ಟ್ಟಿಸುತ್ತದೆ. ಬೀದಾಡಿ ನಾಯಿ ಬೇಧಿ ಮಾಡಿಕೊಂಡಂತೆ ...ಲ್ಲಿ ಒಂದಷ್ಟು ಕಾಂಕ್ರೀಟ್ ರಸ್ತೆಗಳು, ಒಂದೇ ಒಂದು ...ಳೆಯನ್ನೂ ತಡೆಕೊಳ್ಳಲಾಗದ ಟಾರ್ ...ಡುಗಳು-ಜೀವರಾಜ್ ಪಾಲಿಗೆ ಇದೇ ಅಭಿವೃದ್ಧಿ. ...ತನ ಹಿಂಬಾಲಕರು ಅದನ್ನೇ ಕ್ರಾಂತಿಯೆಂಬಂತೆ ...ಳಿಕೊಂಡು ಸುತ್ತಾಡುತ್ತಾರೆ. ಆದರೆ ಮತದಾರರು ...ರ್ಖರಲ್ಲವಲ್ಲಾ?


ಜೀವರಾಜ್ ಈ ಕೂಡಲೇ ಎಚ್ಚೆತ್ತುಕೊಂಡು ...ಜರಂಗಿಗಳನ್ನ ಹದ್ದುಬಸ್ತಿನಲ್ಲಿಡದಿದ್ದರೆ ಅದರ ಕರಿನೆರಳು ...ತಪದ್ದೇ ರಾಜಕೀಯ ಬದುಕನ್ನು ಆಪೋಶನ ...ಗೆದುಕೊಳ್ಳುವುದರಲ್ಲಿ ಸಂಶಯವಿಲ್ಲ. ಜಾತಿಧರ್ಮಗಳ ...ಡುವೆ, ಮನಸುಗಳ ನಡುವೆ ಒಡಕು ಮೂಡಿಸುವುದು, ...ಮಾಯಕರ ಬದುಕಿಗೆ ಬೆಂಕಿ ಹಚ್ಚುವುದು ಖಂಡಿತಾ ...ಸ್ಥ ರಾಜಕೀಯವಲ್ಲ, ಅದು ಶಾಶ್ವತವೂ ಅಲ್ಲ.

ಈ ಸತ್ಯವನ್ನು ಜೀವರಾಜ್ ಅರ್ಥೈಸಿಕೊಂಡರೆ ಒಳಿತು.

• ಸಂತೋಷ್ ಬಾಗಿಲಗದ್ದೆ


ಕೊಪ್ಪಳ: ತೆನೆ ಹೊತ್ತವಳ ಆರ್ಭಟ - 'ಕೈ' ಗೂ ಪ್ರಾಣಸಂಕಟ

ಕರೆಂಟ್ ಹೊಡೆದ ಕಾಗೆಯಾದ ಕರಡಿ ಸಂಗಣ್ಣ!




ರೆಡ್ಡಿ ಜೈಲಿಗೆ, ಯಡ್ಡಿ ಕೋರ್ಟಿಗೆ, ರಾಮುಲು ಬೀದಿಗೆ ಬಿದ್ದ ಎಫೆಕ್ಟಿಗೆ ಕರಡಿ ಸಂಗಣ್ಣ ಅಕ್ಷರಶಃ ಕರೆಂಟ್ ಹೊಡೆದ ಕಾಗೆಯಾಗಿದ್ದಾನೆ. ಕೊಪ್ಪಳದ ಹಳೆಯ ಬಿಜೆಪಿಗಳು ಇವನ ಸೋಲಿಗೆ ಶ್ರಮ ಹಾಕುತ್ತಿದ್ದಾರೆ ಎಂಬುದಕ್ಕಿಂತ ಇಲ್ಲಿಯ ಮತದಾರರೆ ಈ ನಿರ್ಣಯಕ್ಕೆ ಬಂದು ನಿಂತಿದ್ದಾರೆ ಎಂಬುದೀಗ ಸ್ಪಷ್ಟವಾಗಿದೆ. ಜನ ಕೊಟ್ಟಿದ್ದ ಒಂದು ಅವಕಾಶವನ್ನು ಲೂಟಿಗಾಗಿ ಮುಡಿಪಾಗಿಟ್ಟು ಸೋತು ಮನೆ ಸೇರಿರುವ ಕಾಂಗ್ರೆಸ್ಸಿನ ಅಭ್ಯರ್ಥಿ ಬಸವರಾಜ ಹಿಟ್ನಾಳ ರಾಜಕೀಯದ ಗಂಧಗಾಳಿಯೂ ಇಲ್ಲದ ತನ್ನ ಹಿರಿ ಮಗನನ್ನು ಮುಂದೆ ಬಿಟ್ಟು ಇದ್ದದ್ದನ್ನೂ ಗಬ್ಬೆಬ್ಬಿಸಿಕೊಂಡು ಕುಳಿತಿದ್ದಾನೆ. ಸಂಗಣ್ಣ ಕರಡಿ ಪಕ್ಷಕ್ಕೆ ಕೈ ಕೊಟ್ಟಿದ್ದನ್ನೆ ಅಸ್ತ್ರವನ್ನಾಗಿಸಿ ಹೊಸ ಮುಖದೊಂದಿಗೆ ಫೀಲ್ಡಿಗಿಳಿದಿರುವ ಜೆಡಿಎಸ್ ತಿಂದವರನ್ನು ತೆಗೆಯಿರಿ ಹೊಸಬರಿಗೆ ಅವಕಾಶ ಕೊಡಿ ಎಂಬ ಸ್ಲೋಗನ್ ಹಿಡಿದು ಹೊರಟಿದೆ.

ಒಂದು ಕಾಲದಲ್ಲಿ ಕೊಪ್ಪಳದ ಶಾಸಕರಾಗಿದ್ದ ಕವಲೂರಿನ ಆಗರ್ಭ ಶ್ರೀಮಂತ ವಿರುಪಾಕ್ಷಗೌಡರ ಪುತ್ರ ಪ್ರದೀಪ್‌ಗೌಡನನ್ನು ಅಭ್ಯರ್ಥಿ ಎಂದು ಜೆಡಿಎಸ್ ಘೋಷಿಸಿದಾಗಲೇ ಕರಡಿ ಕಂಗಾಲಾಗಿದ್ದ. ಅಲ್ಪ ಸ್ವಲ್ಪ ರಾಜಕಾರಣ ಮಾಡಿಕೊಂಡಿದ್ದ ಪ್ರದೀಪಗೌಡ, ಹಿಟ್ನಾಳ್ ಮತ್ತು ಕರಡಿಯ ಜಾತಕ ಕೈಯ್ಯಲ್ಲಿ ಇಟ್ಟುಕೊಂಡೇ ಕ್ಯಾಂಪೇನಿಗೆ ಇಳಿದಿದ್ದಾನೆ. ಜನಮಾತ್ರ ಗಪ್‌ಚುಪ್ ಆಗಿ ಇವರ ಆಟಗಳನ್ನು ನೋಡುತ್ತಾ ಮಜಾ ತೆಗೆದುಕೊಳ್ಳುತ್ತಿದ್ದಾರೆ ಹೊರತು ಗುಟ್ಟು ಬಿಟ್ಟುಕೊಡುತ್ತಿಲ್ಲ.




ಹಿಟ್ನಾಳ್




ರಾಯರೆಡ್ಡಿ

ಕರಡಿಗೆ ತಮ್ಮವರದೆ ಚಿಂತೆ

ಕರಡಿ ಜೆಡಿಎಸ್‌ನಿಂದ ಬಿಜೆಪಿ ಅಂಗಳಕ್ಕೆ ಕಾಲಿಟ್ಟಾಗಲೇ ಎದ್ದಿದ್ದ ಭಿನ್ನಮತ ಈಗ ಎತ್ತರಕ್ಕೆ ಬೆಳೆದುನಿಂತಿದೆ. ಪಕ್ಷಾಂತರದ ವೇಳೆ ಈತನ ಹಿಂದೆ ಬಂದ ಖದೀಮ ಪುಢಾರಿಗಳು ಇತ್ತ ಬಿಜೆಪಿಗಳ ಮೇಲೆ ದಬ್ಬಾಳಿಕೆ ಶುರು ಮಾಡಿದ್ದೆ ಇಂದು ಕರಡಿಯ ಕುತ್ತಿಗೆಗೆ ಬಂದು ನಿಂತಿದೆ. ಇವನ ವಿರುದ್ಧ ಕತ್ತಿ ಮಸೆಯುತ್ತಿರುವ ಹಳೇ ಚೆಡ್ಡಿಗಳು ಈತ ಸೋಲೋದು ಗ್ಯಾರಂಟಿ ಎಂದು ಬೆಟ್ಟಿಂಗ್ ಶುರು ಹಚ್ಚಿದ್ದಾರೆ. ಇದನ್ನೆಲ್ಲಾ ಕಂಡು ಬೆಚ್ಚಿಬಿದ್ದಿರುವ ಸಂಗಣ್ಣ ಏಕಾಂಗಿಯಾಗಿ ಪ್ರಚಾರ ಆರಂಭಿಸಿದ್ದಾನೆ. ತನ್ನ 30 ವರ್ಷದ ರಾಜಕಾರಣದಲ್ಲಿ ತಾನು ನಡೆದಿದ್ದೇ ದಾರಿ ಎಂಬಂತೆ ಬಂದ ಈತ ಬಿಜೆಪಿಯಲ್ಲೂ ಅದನ್ನೇ ಪ್ರಯೋಗಿಸಲು ಹೋಗಿ ಮುಗ್ಗರಿಸಿದ್ದಾನೆ. ತನ್ನ ಸ್ವಜಾತಿ ಪಂಚಮಸಾಲಿಗಳು ತನ್ನನ್ನು ಗೆಲ್ಲಿಸುತ್ತಾರೆ ಎಂಬ ಭ್ರಮೆಯಲ್ಲಿರುವ ಕರಡಿಯನ್ನು ಕ್ಷೇತ್ರದ 20 ಸಾವಿರ ಪಂಚಮಸಾಲಿಗಳು ನಂಬುತ್ತಿಲ್ಲ.



ಬಸವರಾಜ್



ಶಿವರಾಮೇಗೌಡ

ಪಂಚಮಸಾಲಿಗಳು ಕರಡಿಯನ್ನು ನಂಬದಿರಲು ಕಾರಣವಾಗಿರುವ ಚಿಕ್ಕದೊಂದು ಸ್ಟೋರಿ ಕೂಡಾ ಇದೆ. ಈ ಹಿಂದೆ 2004ರಲ್ಲಿ ಸಂಗಣ್ಣ ಬಡ ಪಂಚಮಸಾಲಿ ವಿದ್ಯಾರ್ಥಿಗಳಿಗಾಗಿ ವಸತಿನಿಲಯ ಮತ್ತು ಶಿಕ್ಷಣ ಸಂಸ್ಥೆ ಪ್ರಾರಂಭಿಸಲು 2 ಎಕರೆ ಜಮೀನು ಕೊಡಿಸುವುದಾಗಿ ಹೇಳಿ 8 ವರ್ಷ ಗತಿಸಿದೆ. ಪಂಚಮಸಾಲಿ ಸಂಘದ ಮುಖಂಡರು ಇದಕ್ಕಾಗಿ ಇವನನ್ನು ಹಿಡಿದು ಕೇಳಿಕೇಳಿ ಸುಸ್ತಾಗಿದ್ದರು. ಇನ್ನು ಜಿಲ್ಲಾಧ್ಯಕ್ಷ ಗಿರಿಗೌಡ ಮತ್ತು ತಾಲೂಕಾ ಅಧ್ಯಕ್ಷ ಫಕೀರಪ್ಪ ಪಾರ್ಟಿ ಫಂಡ್‌ನಲ್ಲೆ ಬೆಚ್ಚಗಾಗಿ ಬಯಲಿಗೆ ಬೀಳಲು ಹಿಂದೇಟು ಹಾಕುತ್ತಿದ್ದಾರೆ. ಬಣಜಿಗರ 15 ಸಾವಿರ ಮತಗಳನ್ನು ಬಿಜೆಪಿಗೆ ಬಿಡಲ್ಲ ಎನ್ನುವ ಅಂದಣ್ಣ ಅಗಡಿ, ತನ್ನ ಹೆಂಡತಿಯ ಅಣ್ಣ ಎಂ.ಎ. ಪಾಟೀಲನಿಗೆ ಟಿಕೆಟ್ ಕೈತಪ್ಪಿದ್ದಕ್ಕೆ ಅಸಮಾಧಾನಗೊಂಡಿರುವ ಸಂಸದ ಶಿವರಾಮೇಗೌಡ, ಗಂಗಾವತಿಯಲ್ಲಿ ಹಾಸಿಗೆ ಹಿಡಿದಿರುವ ಶಾಸಕ ಈಶಣ್ಣ ಗುಳಗಣ್ಣನವರ, ಯಲಬುರ್ಗಾದ ಹಾಲಪ್ಪ ಆಚಾರ್‌ನಂತಹವರು ಸದ್ದಿಲ್ಲದೆ ಕರಡಿ ಗೆಲುವನ್ನು ಅಲ್ಲೇ ಅದುಮುತ್ತಿದ್ದಾರೆ.

ಕರಡಿ ಜೆಡಿಎಸ್‌ನಿಂದ ಬಿಜೆಪಿ ಅಂಗಳಕ್ಕೆ ಕಾಲಿಟ್ಟಾಗಲೇ ಎದ್ದಿದ್ದ ಭಿನ್ನಮತ ಈಗ ಎತ್ತರಕ್ಕೆ ಬೆಳೆದುನಿಂತಿದೆ. ಪಕ್ಷಾಂತರದ ವೇಳೆ ಈತನ ಹಿಂದೆ ಬಂದ ಖದೀಮ ಪುಢಾರಿಗಳು ಇತ್ತ ಬಿಜೆಪಿಗಳ ಮೇಲೆ ದಬ್ಬಾಳಿಕೆ ಶುರು ಮಾಡಿದ್ದೆ ಇಂದು ಕರಡಿಯ ಕುತ್ತಿಗೆಗೆ ಬಂದು ನಿಂತಿದೆ. ಇವನ ವಿರುದ್ಧ ಕತ್ತಿ ಮಸೆಯುತ್ತಿರುವ ಹಳೇ ಚೆಡ್ಡಿಗಳು ಈತ ಸೋಲೋದು ಗ್ಯಾರಂಟಿ ಎಂದು ಬೆಟ್ಟಿಂಗ್ ಶುರು ಹಚ್ಚಿದ್ದಾರೆ.


ಹಿಟ್ನಾಳನನ್ನ ಕಾಪಾಡೋರ್ಯಾರು?

ಕೊಪ್ಪಳ ಕ್ಷೇತ್ರದ ಇತಿಹಾಸದಲ್ಲಿ ಐದು ಬಾರಿ ತನ್ನ ಸಾಂಪ್ರದಾಯಿಕ ಎದುರಾಳಿ ಸಂಗಣ್ಣ ಕರಡಿಯನ್ನು ಎದುರಿಸಿರುವ ಕಾಂಗ್ರೆಸ್‌ನ ಬಸವರಾಜ ಹಿಟ್ನಾಳ್ ಗೆದ್ದಿದ್ದು ಒಂದೇ ಬಾರಿ. ಅದೂ ತನ್ನ ಸ್ವಂತ ವರ್ಚಸ್ಸಿನಿಂದಲ್ಲ ಬದಲಿಗೆ ಕರಡಿ ಮೇಲಿನ ಸಿಟ್ಟಿನಿಂದ ಜನ ಈತನನ್ನು ವಿಧಾನಸೌಧಕ್ಕೆ ಕಳಿಸಿದರು. ಆಗಲೂ ಈತ ಕ್ಷೇತ್ರದ ಅಭಿವೃದ್ಧಿಗೆ ಕಡಿದು ಗುಡ್ಡೆ ಹಾಕಿದ್ದು ಅಷ್ಟಕ್ಕಷ್ಟೇ. ಈಗ ಕರಡಿ ಮೇಲಿನ ಸೇಡಿಗೆ ಜನ ತನ್ನನ್ನು ಗೆಲ್ಲಿಸುತ್ತಾರೆ ಎನ್ನುತ್ತಾ ಬುದ್ಧಿಮಾಂದ್ಯನಂತಾಡುತ್ತಿದ್ದಾನೆ.


ಪಕ್ಕಾ ಜಾತಿವಾದಿಯಾಗಿರುವ ಹಿಟ್ನಾಳನ ವರ್ತನೆಯಿಂದ ಬೇಸತ್ತಿರುವ ದಲಿತ, ಮುಸ್ಲಿಂ ಸಮುದಾಯದ ಮತಗಳು ಈ ಬಾರಿ ಕಾಂಗ್ರೆಸ್ಸಿಗೆ ಕೈಕೊಡಲಿವೆ. ಗೆಲುವಿಗಾಗಿ ಓಟು ತಂದು ಗುಡ್ಡೆ ಹಾಕುವ ಲೀಡರ್‌ಗಳ್ಯಾರೂ ಹಿಟ್ನಾಳನ ಹಿಂದಿಲ್ಲ. ಏಳು ವರ್ಷದಿಂದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷನಾಗಿರುವ ಎಸ್.ಬಿ. ನಾಗರಾಳ ಕೈ ಸನ್ನೆಯಲ್ಲೇ ಕಾಲ ಕಳೆದವನು. ಮೈಕ್ ಹಿಡಿದು ಎಂದೂ ಮಾತಾಡಿದವನಲ್ಲ. ನಗರ ಘಟಕದ ಅಧ್ಯಕ್ಷ ಮರದಾನಸಾಬನ ಮಾತು ಕೇಳುವರಿಲ್ಲ. ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಶಕುಂತಲಾ ಹುಡೇಜಾಲಿ ಆಗೊಮ್ಮೆ ಈಗೊಮ್ಮೆ ಪಾರ್ಟಿ ಆಫೀಸಿಗೆ ಕಾಲಿಟ್ಟು ಸೀರೆ ಜಾಡಿಸಿ ಹೋದಳೆಂದರೆ ತಿರುಗಿ ಯಾರದಾದರೂ ಪುಣ್ಯತಿಥಿ ಕಾರ್ಯಕ್ರಮದಲ್ಲೇ ಕಾಣಬೇಕು. ಇಂಥವರನೆಲ್ಲ ಸಾಕಿರುವ ಬಸವರಾಜ ಹಿಟ್ನಾಳನನ್ನು ಅದ್ಯಾರು ಕಾಪಾಡುತ್ತಾರೋ?

ತೆನೆ ಹೊತ್ತವಳ ಆರ್ಭಟ


ಕೊಪ್ಪಳದಲ್ಲಿ ತೆನೆ ಹೊತ್ತ ಮಹಿಳೆ ಇನ್ನೂ ಉಸಿರಾಡುತ್ತಿದ್ದಾಳೆ. ಸಂಗಣ್ಣ ಪಕ್ಷಕ್ಕೆ ಗುಡ್‌ಬೈ ಹೇಳಿದಾಕ್ಷಣ ಕ್ಷೇತ್ರದಲ್ಲಿ ಜೆಡಿಎಸ್ ಸತ್ತೇ ಹೋಯಿತು ಎಂಬ ಮಾತು ಕೇಳಿಬಂದಿತ್ತು. ಅದು ಈಗ ಸುಳ್ಳಾಗಿದೆ. ಅಸಲಿಗೆ ಸಂಗಣ್ಣನಿಂದ ನಿಷ್ಠಾವಂತ ಜೆಡಿಎಸ್ ಕಾರ್ಯಕರ್ತರ್‍ಯಾರೂ ಪಾರ್ಟಿ ಬಿಟ್ಟಿರಲಿಲ್ಲ. ಬದಲಿಗೆ ಇವನ ಪಲಾಯನದಿಂದ ಎರಡನೇ ದರ್ಜೆಯ ಲೀಡರ್‌ಗಳಿಗೆ ಪ್ರಮೋಷನ್ ಸಿಕ್ಕಂತಾಯ್ತು ಅಷ್ಟೆ. ಕಳೆದ ಚುನಾವಣೆಯಲ್ಲಿ ಸಂಗಣ್ಣನ ಗೆಲುವಿನ ಹಿಂದೆ ಅವನ ವರ್ಚಸ್ಸಿಗಿಂತ ಪಾರ್ಟಿ ಓಟುಗಳೇ ಹೆಚ್ಚು ಕೆಲಸ ಮಾಡಿತ್ತು. ಸಂಗಣ್ಣ ಕೈಕೊಟ್ಟ ಎನ್ನುವ ಅನುಕಂಪ ಕೂಡ ಜೆಡಿಎಸ್‌ಗೆ ನೆರವಾಗಲಿದೆ. ಹೀಗಾಗೇ ಹಳೇ ಮುಖಗಳಿಗೆ ಮಣೆ ಹಾಕದೆ, ಮಾಜಿ ಶಾಸಕ ವಿರೂಪಾಕ್ಷ ಗೌಡರ ಮಗ ಪ್ರದೀಪ ಗೌಡನನ್ನು ಕಣಕ್ಕೆ ಇಳಿಸಿದ್ದು.




ಗಿರಿಗೌಡ



ಅಂದಣ್ಣ




ಈಶಣ್ಣ



ಪ್ರದೀಪ್ ಗೌಡ


ಸ್ವಲ್ಪ ದಿನ ಕಾಂಗ್ರೆಸ್ಸಿನಲ್ಲಿ ಕಾಣಿಸಿಕೊಂಡಿದ್ದ ಪ್ರದೀಪಗೌಡ ಹಿಟ್ನಾಳನ ದರ್ಪದಿಂದ ಬೇಸತ್ತು ತಟಸ್ಥವಾಗಿ ಉಳಿದಿದ್ದ. ಕುಟುಂಬದಿಂದ ಸಿರಿವಂತನಾಗಿರುವ ಈತನಿಗೆ ಅಹಂಕಾರವಿಲ್ಲ. ಸದಾ ಯುವಕರನ್ನು ಕಟ್ಟಿಕೊಂಡು ಜನರ ಬಳಿ ಸೇರುತ್ತಿದ್ದ. ಇವನ ತಂದೆ ಕಾಲದಿಂದಲೂ ಜನರಿಗೆ ನಿಲುಕುವ ರಾಜಕಾರಣಿ ಎಂಬ ಮಾತಿದೆ. ಕೊಪ್ಪಳದ ಹಳವಂಡಿಯಿಂದ ಹಿಡಿದು ಗದಗ ಜಿಲ್ಲೆಗೆ ತಾಗುವ ಗಡಿವರೆಗಿನ ಸುಮಾರು 5000 ಎಕರೆ ಜಮೀನನ್ನು ಬಡ ರೈತರಿಗೆ ಈ ಹಿಂದೆ ಇವರು ಬಿಟ್ಟುಕೊಟ್ಟಿದ್ದರಂತೆ. ಇದು ಈಗ ಓಟಾಗಿ ಪರಿವರ್ತನೆಯಾಗುತ್ತಿದೆ. ಕವಲೂರು ಭಾಗದಲ್ಲಿ ಬರುವ ಸುಮಾರು 8 ಸಾವಿರ ರೆಡ್ಡಿ ಜನಾಂಗದ ಮತಗಳನ್ನು ಹಿಂದಿನ ಚುನಾವಣೆಗಳಲ್ಲಿ ಕರಡಿಗೆ ಇದೇ ಪ್ರದೀಪಗೌಡ ಹಾಕಿಸಿದ್ದ. ಅವು ಈಗ ಬಿಜೆಪಿಗೆ ಕೈಕೊಡಲಿವೆ. ಲಿಂಗಾಯತರು ಸದ್ದಿಲ್ಲದೇ ಹೊರಳುತ್ತಿದ್ದಾರೆ. ಇದನ್ನೆಲ್ಲಾ ಗಮನಿಸಿದರೆ ತೆನೆ ಹೊತ್ತವಳು ಕೈ- ಕಮಲವನ್ನು ಕೆಸರಿಗೆ ಹಾಕಿದರೂ ಆಶ್ಚರ್ಯಪಡಬೇಕಿಲ್ಲ. ಒಟ್ಟಿನಲ್ಲಿ ಕೊಪ್ಪಳಕ್ಕೆ ಹಳಬರೋ... ಹೊಸಬರೋ... ಎಂಬುದೇ ಈಗ ಪ್ರಶ್ನೆಯಾಗಿದೆ.



• ಹುರಳಿಕುಪ್ಪಿ ವಿನಯ

ಸಿದ್ಧಗಂಗಾ: ಕಟಕಟೆಯಿಂದ ಪಾರಾಗುವ ನಾಟಕ

ಸಿದ್ದಗಂಗಾ ಮಠದೊಳಗೆ ಅಖಂಡ ಎರಡು ದಶಕಗಳಿಂದ ನಡೆಯುತ್ತಿರುವ ವಿವಾದವೊಂದರ ಅರಿವಿರುವ ಮಂದಿ ಅಚ್ಚರಿ ಪಡುವಂಥ ಘಟನೆಯೊಂದು ನಡೆದಿದೆ. ಶಿವಕುಮಾರ ಸ್ವಾಮಿ ಹಾಗೂ ಗೌರೀಶಂಕರ ಸ್ವಾಮಿಗಳೆಂಬ ಗುರುಶಿಷ್ಯರು ಇಪ್ಪತ್ತೂರು ವರ್ಷಗಳ ಬಳಿಕ ಮೊದಲ ಸಲ ಮುಖಾಮುಖಿಯಾಗಿರುವುದು ಇದಕ್ಕೆ ಕಾರಣ. ಈ ಸಂಗಮದ ಕುರಿತಾಗಿ ತರಹೇವಾರಿ ರೀತಿಯ ವಿಶ್ಲೇಷಣೆಗಳು ಕೇಳಿಬರುತ್ತಿವೆ. ಶಿವಕುಮಾರ ಸ್ವಾಮಿಗೆ ಸತ್ಯದ ಅರಿವಾಗಿ ಗೌರೀಶಂಕರರ ಬಗ್ಗೆ ಕನಿಕರ ಹುಟ್ಟಿದೆ ಎಂಬುದು ಕೆಲವರ ಅಂಬೋಣ. ಆದರೆ ಇದು 'ನಡೆದಾಡುವ ದೇವರು' ಕಟಕಟೆಯಲ್ಲಿ ನಿಲ್ಲುವುದನ್ನು ತಡೆಯಲು ನಡೆಸಿರುವ ಬೃಹನ್ನಾಟಕವೆಂಬುದು ಸತ್ಯ!



ಇದೇ ತಿಂಗಳ ನಾಲ್ಕನೇ ತಾರೀಖಿನಂದು ತುಮಕೂರಿನ ಚಿಕ್ಕತೊಟ್ಲುವಿನಲ್ಲಿರುವ ಅಟವಿ ಮಠದ ವೇದಿಕೆಯಲ್ಲಿ ಸದರಿ ನಾಟಕ ಸಮಾಪ್ತಿಗೊಂಡಿದೆ. ಈ ಅವಧಿಯಾದ್ಯಂತ ಗೌರೀಶಂಕರ ಮುಗ್ಧತೆ, ಸಿದ್ಧಗಂಗಾ ಮಠದಲ್ಲೇ ಸೇವೆ ಮಾಡಿಕೊಂಡಿರಲು ಬಿಡಿ ಎಂಬ ಅಸಹಾಯಕತೆ ಮಿಶ್ರಿತ ಪಟ್ಟು ಹಾಗೂ ಅಚಲ ಗುರುಭಕ್ತಿಗಳು ಅನಾವರಣಗೊಂಡಿವೆ. ಆದರೆ ಶಿವಕುಮಾರ ಸ್ವಾಮಿಗಳು ಅರ್ಥಾತ್ ಅವರ ಹಿಂಬಾಲಕರ ಕಡೆಯಿಂದ ಅದಕ್ಕೆ ಪೂರಕವಾದ ಯಾವುದೇ ನಿರ್ಣಯಗಳೂ ಹೊರಬಿದ್ದಿಲ್ಲ. ಗೌರೀಶಂಕರರು ಶಿವಕುಮಾರ ಸ್ವಾಮಿಗಳ ಮೇಲೆ ಅತೀವ ಭಕ್ತಿಯಿಟ್ಟುಕೊಂಡು ಮುಂದಿಟ್ಟದ್ದು ಒಂದೇ ಬೇಡಿಕೆ; ಸಿದ್ಧಗಂಗಾ ಮಠದಲ್ಲಿದ್ದುಕೊಂಡು ಕಡೇತನಕ ನಿಮ್ಮ ಪಾದಪೂಜೆ ಮಾಡಿಕೊಂಡಿರಲು ಅವಕಾಶ ಕೊಡಿ. ಆದರೆ ಶಿವಕುಮಾರರು ನೀನು ಗೊಲ್ಲಹಳ್ಳಿ ಮಠದಲ್ಲೇ ಬದ್ದಿರು ಎಂಬುದನ್ನು ಅತ್ಯಂತ ಸಾತ್ವಿಕ ಶೈಲಿಯಲ್ಲಿ, ಧಾರ್ಮಿಕ ಪರಿಭಾಷೆಯ ಚೌಕಟ್ಟಿನಲ್ಲಿ ಹೇಳಿ ಮುಗಿಸಿದ್ದಾರೆ.

ಇದು ಸದರಿ ಸಂಧಾನದ ಅಸಲಿ ಉದ್ದೇಶಗಳನ್ನು ಬಹಿರಂಗಗೊಳಿಸುವಂತಿದೆ. ಶಿವಕುಮಾರರ ದರ್ಶನದ ಮೂಲಕ ಗೌರೀಶಂಕರರನ್ನ ಎಮೋಷನಲ್ ಬ್ಲಾಕ್‌ಮೇಲ್‌ಗೊಳಪಡಿಸಿ ಇದೀಗ ಕೋರ್ಟ್‌ನಲ್ಲಿರುವ ಉತ್ತರಾಧಿಕಾರಿ ವಿವಾದ ಬಟ್ಟೆಗೆ ಹೊಸಾ ಅಪೀಲುಗಳು ಸೇರದಂತೆ ತಡೆಯುವುದು ಅಸಲಿ ಉದ್ದೇಶ. ಉತ್ತರಾಧಿಕಾರಿ ವಿವಾದದ ಕುರಿತ ವಿವಾದ ವಿಚಾರಣೆಯ ಹಂತದಲ್ಲಿರುವಾಗಲೇ ಗೌರೀಶಂಕರರನ್ನ ಕಡೆಗಣಿಸಿದ ಶಿವಕುಮಾರಸ್ವಾಮಿಗಳು ಸಿದ್ಧಲಿಂಗಸ್ವಾಮಿಗಳನ್ನು ಉತ್ತರಾಧಿಕಾರಿಯಾಗಿ ಸ್ವೀಕರಿಸಿದ್ದಾರೆ. ಇದರಿಂದ ತಲ್ಲಣಿಸಿದ ಗೌರೀಶಂಕರರು ಮತ್ತೆ ಕೋರ್ಟ್ ಮೊರೆ ಹೋಗಿದ್ದರು. ಅದು ಉತ್ತರಾಧಿಕಾರಿ ವಿವಾದದಲ್ಲೇ ಸೇರಿಕೊಂಡು ಮುಂಬರುವ ವಿಚಾರಣಾ ಸಂದರ್ಭದಲ್ಲಿ ಶಿವಕುಮಾರ ಸ್ವಾಮಿಗಳು ಕಟಕಟೆಯಲ್ಲಿ ನಿಲ್ಲಲೇಬೇಕಾದ ಸಂದರ್ಭ ಎದುರಾಗಿತ್ತು.

ಆಶ್ಚರ್ಯವೆಂದರೆ ಇಷ್ಟು ವರ್ಷಗಳಿಂದ ವಿವಾದ ಕೋರ್ಟ್‌ನಲ್ಲಿದ್ದರೂ ಶಿವಕುಮಾರ ಸ್ವಾಮಿಗಳು ಒಂದು ಸಲವೂ ಸ್ವತಃ ವಿಚಾರಣೆ ಎದುರಿಸಿಲ್ಲ. ತೀರಾ ಶ್ರೀಗಳೇ ಕಟಕಟೆಯಲ್ಲಿ ನಿಂತರೆ ಅವರ ಹಾಗೂ ಮಠದ ಚಾರಿತ್ರ್ಯಕ್ಕೆ ಧಕ್ಕೆ ಬರುತ್ತದೆಂಬುದು ಅದಕ್ಕೆ ಕಾರಣ. ಆದರೆ ಸ್ವಾಮಿಗಳಿಗೆ ಇಂದು ಎದುರಾಗಿರುವ ಇಕ್ಕಟ್ಟಿನ ಸ್ಥಿತಿಗೆ ಅವರ ಆಸುಪಾಸಲ್ಲಿ ಠಳಾಯಿಸುತ್ತಿರುವವರೇ

> ತನ್ನದಲ್ಲದ ತಪ್ಪಿಗೆ ಶಿಕ್ಷೆಗೂ ತಲೆ ಕೊಟ್ಟು ಬಂದ ಗೌರೀಶಂಕರರೀಗ ಹೈರಾಣಾಗಿದ್ದಾರೆ. ಶಿವಕುಮಾರ ಸ್ವಾಮೀಜಿಗಳ ಬೆನ್ನಿಗಿರುವ ಭಟ್ಟಂಗಿಗಳು ಒಂದರ್ಥದಲ್ಲಿ ಅವರನ್ನು ಕೊಂದು ಹಾಕಿದ್ದಾರೆ. ಆದರೀಗ ಪರಿಸ್ಥಿತಿ ತಿಳಿಯಾಗಿದೆ. ಗೌರೀಶಂಕರ ನಿರಪರಾಧಿ ಎಂಬುದೂ ಸಾಬೀತಾಗಿದೆ. ಈ ಸಂದರ್ಭದಲ್ಲಾದರೂ ಶಿವಕುಮಾರ ಸ್ವಾಮಿಗಳು ಭಟ್ಟಂಗಿಗಳ ಮಾತಿಗೆ ಕಿವಿಗೊಡದೆ ಅಂತರಾತ್ಮದ ಮಾತು ಕೇಳಬಹುದಿತ್ತು. ವಿನಾಕಾರಣ ಶಿಕ್ಷೆಗೆ ಗುರಿಯಾಗಿ ಜರ್ಜರಿತರಾದ ಗೌರೀಶಂಕರರಿಗೆ ನ್ಯಾಯ ದೊರಕಿಸಬಹುದಿತ್ತು.

ರೈತ ಮತ್ತು ಹಸಿವೂ, ಟೊಮ್ಯಾಟೋ ಹಬ್ಬವೂ

ಮೊನ್ನೆ ಮೊನ್ನೆಯಷ್ಟೆ ರೈತರ ಗುಂಪೊಂದು ತಾವೇ ಬೆಳೆದ ಈರುಳ್ಳಿ, ಟೊಮ್ಯಾಟೋಗಳನ್ನು ಬೀದಿಗೆಸೆದು ರೋದಿಸಿದ್ದು ಇನ್ನು ನಮ್ಮ ಕಣ್ಮುಂದಿರುವಾಗಲೆ ಈಗ ಇನ್ನೊಂದು ತಂಡ ಬೆಂಗಳೂರಿನಲ್ಲಿ ಟೊಮ್ಯಾಟೋಗಳನ್ನು ಎಸೆದಾಡುವ ಪ್ರಯತ್ನಕ್ಕೆ ಮುಂದಾಗಿದೆ. ಮೊದಲನೇ ಎಸೆದಾಟದಲ್ಲಿ ರೈತನ ಹತಾಶೆ ಇತ್ತು, ಶ್ರಮಕ್ಕೆ ಸೂಕ್ತ ಬೆಲೆಸಿಗದ ಆಕ್ರೋಶವಿತ್ತು, ಆದರೆ ಈ ಚೆಲ್ಲಾಟದಲ್ಲಿ ಭರ್ತಿ ಮೋಜಿರುತ್ತೆ ರೈತ ಹಾಗೂ ಹಸಿವಿನ ಬಗ್ಗೆ ಆಳವಾದ ಅಸಡ್ಡೆ ಇರುತ್ತೆ, ದುಡ್ಡಿರುವ ಮಂದಿ ತಮ್ಮ ಏಕತಾನತೆಯ ನೆಪವಿಟ್ಟು ಪಾರ್ಟಿ ಮಾಡಿಕೊಳ್ಳುವುದೇನೂ ತೀರಾ ಹೊಸದಲ್ಲ, ಆದರೆ ಇಷ್ಟು ದಿನಗಳ ಅವರ ಮೋಜುಗಳು ಕಾಂಚಾಣದ ಮದದಿಂದ ಕೂಡಿರುತ್ತಿದ್ದವು, ಸಾಮಾಜಿಕ ಅಸಮಾನತೆಯ ಬಗ್ಗೆ ದಿವ್ಯ ನಿರ್ಲಕ್ಷ್ಯದಿಂದ ತುಳುಕುತ್ತಿದ್ದವು. ಅವು ಅವರ ವೈಯಕ್ತಿಕ ಸ್ವಾತಂತ್ರ್ಯದ ಪರಿಧಿಯಲ್ಲೆ ಇರುತ್ತಿದ್ದರಿಂದ ಹೆಚ್ಚೆಂದರೆ ಟೀಕಿಸಬಹುದಾಗಿತ್ತೆ ಹೊರತು ಮತ್ತೇನೂ ಮಾಡುವಂತಿರಲಿಲ್ಲ. ಆದರೀಗ ಲಾ ಟೊಮ್ಯಾಟಿನೊ ಎಂಬ ಪಾಶ್ಚಾತ್ಯ ಅನುಕರಣೆಯ ಹಬ್ಬ ಮಾಡಲು ಮುಂದಾಗಿರುವುದು ಮಾತ್ರ ಸಾಮಾನ್ಯರೆಲ್ಲರೂ ಪ್ರತಿಭಟಿಸಲೇಬೇಕಾದ ಸಂದಿಗ್ಧತೆಯನ್ನು ತಂದೊಡ್ಡಿದೆ. ಇದರಿಂದ ಉಂಟಾಗಬಹುದಾದ ಸಾಮಾಜಿಕ, ಆರ್ಥಿಕ ಹಾಗೂ ಆಹಾರ ಭದ್ರತೆಯ ಅಸಮತೋಲನಗಳನ್ನು ಸ್ಥೂಲವಾಗಿ ಗಮನಿಸಿದಾಗ ಇದೆಂತಹ ಕಳವಳಕಾರಿ ಸಂಗತಿ ಎಂಬುದು ಮನದಟ್ಟಾಗುತ್ತದೆ.



ಅಸಲಿಗೆ ಈ ಟೊಮ್ಯಾಟೊ ಹಬ್ಬದ ವಿಶೇಷತೆ ಎಂದರೆ ಲೋಡುಗಟ್ಟಲೆ ಟೊಮ್ಯಾಟೊಗಳನ್ನು ಲಾರಿಯಲ್ಲಿ ತುಂಬಿಕೊಂಡು ಒಬ್ಬರತ್ತ ಒಬ್ಬರು ಎಸೆದಾಡಿಕೊಳ್ಳುತ್ತಾ ಮಜಾ ಉಡಾಯಿಸುವುದಾಗಿರುತ್ತೆ, ಹಾಗೆ ಮೈತುಂಬಾ ಟೊಮ್ಯಾಟೊ ರಸ ಮೆತ್ತಿಸಿಕೊಂಡವರಿಗೆ ಭರ್ಜರಿ ಖುಷಿ, ಯಾಕೆಂದರೆ ಅವರ್‍ಯಾರೂ ಬಯಲಲ್ಲಿ ಆ ಹಸಿ ತರಕಾರಿಗಳನ್ನು ಎತ್ತಾಡಿದ ಕಲ್ಪನೆಗಳೆ ಇರದ ಐಷರಾಮಿ ಜನ. ಇದು ಮೂಲತಃ ಸ್ಪೈನ್ ದೇಶದ ಸಂಪ್ರದಾಯ, ಅಲ್ಲಿ ಪ್ರತಿ ಆಗಸ್ಟ್ ಕೊನೆಯ ವಾರದಲ್ಲಿ ಲಾ ಟೊಮ್ಯಾಟಿನೊ ಅನ್ನೋ ಇಂತಹ ಹಬ್ಬವನ್ನು ಆಚರಿಸುತ್ತಾರೆ. ಸ್ವತಃ ಅಲ್ಲಿಯ ಸರ್ಕಾರವೇ ತನ್ನ ಪ್ರವಾಸಿಗರನ್ನು ಸೆಳೆಯಲು ಇದಕ್ಕೆ ಪರ್ಮಿಟ್ಟು ನೀಡಿದೆ. ನಮ್ಮವರಿಗೇನಿದ್ದರೂ ಪ್ರಪಂಚ ಪರ್ಯಟನೆಯಲ್ಲಿ ಅದರ ಕುರಿತು ನೋಡಿ ಕೇಳಿದ್ದಷ್ಟೆ ನೆನಪು. ಹಾಗೆ ನೋಡಿದಾಗಲೂ ಇದೆಂತಹ ವೇಸ್ಟು ಮೋಜಿನಾಟವಪ್ಪ ಎಂಬ ಉದ್ಗಾರಗಳೆ ನಮ್ಮಲ್ಲಿ ಮೂಡುತ್ತಿದ್ದ ಕಾರಣ ನಾವೆಲ್ಲ ಹಸಿವನ್ನು ಹತ್ತಿರದಿಂದ ನೋಡಿದವರು. ಸದ್ಯ ಇಂತಹ ಆಚರಣೆ ನಮ್ಮಲ್ಲಿಲ್ಲವಲ್ಲ ಎಂದು ನಿಟ್ಟುಸಿರು ಬಿಡುವ ಮುನ್ನವೆ ನಮ್ಮ ದೇಶದಲ್ಲೆ, ಅದರಲ್ಲೂ ನಮ್ಮದೇ ಬೆಂಗಳೂರಿನಲ್ಲಿ ನಡೆಯಲು ಸಜ್ಜಾಗಿ ಕುಳಿತಿದೆ.

ಬೆಂಗಳೂರಿನ ಪ್ಯಾಲೇಸ್ ಗ್ರೌಂಡೆಂದರೆ ಸಾಮಾನ್ಯರ್‍ಯಾರಿಗೂ ಅತ್ತ ಪ್ರವೇಶವಿಲ್ಲ ಎಂಬ ಭಾವನೆಯನ್ನೇ ಪೋಷಿಸಿಕೊಂಡು ಬಂದಿದೆ. ರಾಜಕೀಯ ಪಕ್ಷಗಳ ರ್‍ಯಾಲಿಯೋ ಅಥವಾ ಸಿನಿಮಾದವರ ಕಾರ್ಯಕ್ರಮಗಳೋ ನಡೆದಾಗ ಮಾತ್ರ ನೂಕುನುಗ್ಗಲಿನಲ್ಲಿ ಅಲ್ಲಿ ಸಾಮಾನ್ಯರೆನಿಸಿಕೊಂಡವರು ಹೋಗಿ ಬರಬಹುದಷ್ಟೆ, ಇನ್ನುಳಿದಂತೆ ಸಿರಿವಂತರ ಮದುವೆ ಮುಂಜಿಗಳಿಗೆ ಮಾತ್ರ ಅದು ಸೀಮಿತವಾಗಿದ್ದುಬಿಡುತ್ತದೆ. ಅಲ್ಲಿನ ಸುಮಾರು ನಾಲ್ಕು ಸಾವಿರ ಚದರಡಿಗಳಷ್ಟು ವಿಸ್ತೀರ್ಣದಲ್ಲಿ ಹರಡಿಕೊಂಡಿರುವ ಎಮೆರಾಲ್ಡ್ ಗ್ರೀನ್ ಅಂಗಳದಲ್ಲಿ ಇದೆ ಸೆಪ್ಟೆಂಬರ್ 18 ರಂದು ಟೊಮ್ಯಾಟೊ ವೇಸ್ಟು ಮಾಡುವ ಹಬ್ಬಕ್ಕೆ ಆಯೋಜಕರು ಎಲ್ಲ ಸಿದ್ಧಮಾಡಿಕೊಂಡಿದ್ದಾರೆ.

ಐಷಾರಾಮಿ ಎಂಬ ಒಂದೇ ಕಾರಣಕ್ಕೆ ಇದರ ವಿರುದ್ಧ ತಪ್ಪು, ತಪ್ಪು ಅನ್ನೊ ಬ್ಯಾನರುಗಳನ್ನಿಡಿದರೆ ಅದು ಸಮಂಜಸವೆನಿಸದು. ಅದಕ್ಕಾಗೆ ಸದ್ಯ ನಮ್ಮ ಭಾರತದ ಸ್ಥಿತಿಗತಿಗಳನ್ನು ಗಮನಿಸುವುದು ಒಳಿತು. ನಾವೇನೋ ಅಭಿವೃದ್ಧಿಶೀಲತೆ ಕಲ್ಪನೆಯಲ್ಲಿ ಎಲ್ಲಾ ಸರಿಯಾಗಿದೆ ಎಂದುಕೊಂಡಿರಬಹುದು. ಆದರೆ 2011 ರ ವಿಶ್ವ ಆಹಾರ ಕಾರ್ಯಕ್ರಮ (WFP) ಇತ್ತೀಚೆಗಷ್ಟೆ ಸಲ್ಲಿಸಿದ ತನ್ನ ವರದಿಯಲ್ಲಿ ಪ್ರಪಂಚದ ಹಸಿವಿನ ಶೇಕಡಾ 25 ರಷ್ಟು ಪ್ರಮಾಣವಿನ್ನು ಭಾರತದಲ್ಲೆ ಬೀಡುಬಿಟ್ಟಿದೆ ಮತ್ತು ನಮ್ಮ ದೇಶದ ಶೇ. 43ರಷ್ಟು ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದಾರೆಂಬ ಆಘಾತಗಳನ್ನು ಬಹಿರಂಗಗೊಳಿಸಿದೆ. ಇವು ಕೇವಲ ಅಧಿಕೃತ ಅಂಕಿ-ಅಂಶಗಳಷ್ಟೆ, ಅದರ ಹೊರತಾಗಿ ಅನ್ನ ಹೀಗಿರಬಹುದೇನೊ ಎಂಬ ಕಲ್ಪನೆಯಲ್ಲೆ ತಮ್ಮ ಚರ್ಮಗಳನ್ನು ಮೂಳೆಗಂಟಿಸಿಕೊಂಡು ಕೊರಗುತ್ತಿರುವ ಸಹಸ್ರಾರು ದೇಹಗಳು ಲೆಕ್ಕಕ್ಕೇ ಸಿಗುವುದಿಲ್ಲ, ಇದು ಹಸಿವಿನ ವಿಷಯವಾದರೆ, ರೈತನ ಬವಣೆಯದು ಮತ್ತೊಂದು ದುರಂತ. ಎಲ್ಲಾ ಕಡೆಯಿಂದಲೂ ಶೋಷಣೆಗೊಳಗಾಗುವ ವರ್ಗವಂತೇನಾದರು ಇದ್ದರೆ ಅದು ಭಾರತೀಯ ರೈತರು ಮಾತ್ರವಿರಬೇಕೇನೊ. ಆಳುವ ಸರ್ಕಾರಗಳಿಂದಲೇ ಉಳುವ ತಮ್ಮ ಭೂಮಿಗೆ ಕುತ್ತು ಬಂದಿದ್ದರೂ, ನೆಲಕ್ಕೆ ನೇಗಿಲೂಡುವ ಕಾಯಕಕ್ಕಿನ್ನು ಅವರು ವಿದಾಯ ಹೇಳಿಲ್ಲ, ಗೊಬ್ಬರ, ಗುಣೆ, ಕಳೆ, ಮಳೆ, ಪೈರು ಎಂಬಂತಹ ಮಂತ್ರಗಳನ್ನೆ ಪಸೆ ಆರಿದ ಗಂಟಲುಗಳಿಂದ ಪಠಿಸಿ ಮಾರುಕಟ್ಟೆಯತ್ತ ಮುಖ ಮಾಡಿದರೆ ಅಲ್ಲೂ ಆತನಿಗೆ ನಿರಾಶೆಯೆ ಜೊತೆಯಾಗುತ್ತಿದೆ. ಇದಕ್ಕೆಲ್ಲಾ ಆತ ಆತ್ಮಹತ್ಯೆಯನ್ನು ಪರಿಹಾರವಾಗಿಸಿಕೊಂಡಿರುವುದು ಮಾತ್ರ ಇಡೀ ಸಮಾಜವೇ ತಲೆ ತಗ್ಗಿಸುವಂತಹ ಸಮಸ್ಯೆ. ಮಾನವ ಹಕ್ಕು ಮತ್ತು ಜಾಗತಿಕ ನ್ಯಾಯ ಕೇಂದ್ರವು ಇತ್ತೀಚೆಗಷ್ಟೆ 'ಭಾರತದಲ್ಲಿ ಪ್ರತಿ ಅರ್ಧಗಂಟೆಗೊಮ್ಮೆ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದು ಸರ್ಕಾರಗಳು ಇದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳುವ ಪ್ರಯತ್ನಕ್ಕೆ ಮುಂದಾಗುತ್ತಿಲ್ಲ' ಅಂತ ಛೀಮಾರಿ ಹಾಕಿದೆ.

ಇಷ್ಟೆಲ್ಲ ಭಯಂಕರ ಸತ್ಯಗಳಿರುವಾಗ ಯಾರೋ ಕೆಲ ಹಣವಂತರು ಮೋಜಿನ ಹೆಸರಿನಲ್ಲಿ ಟೊಮ್ಯಾಟೊವನ್ನು ಕಾಲಡಿ ಹಾಕಿ ತುಳಿದಾಡುವುದು ಅದೆಷ್ಟರ ಮಟ್ಟಿಗೆ ಸರಿಯೆನಿಸುತ್ತದೆ. ಇಂತಹ ವಿಚಿತ್ರ ಕಾರ್ಯಕ್ರಮ ಆಯೋಜನೆಯಾಗುತ್ತಿದೆ ಎಂಬುದು ತಿಳಿಯುತ್ತಿದ್ದಂತೆಯೆ ಸಾವಿರಾರು ಪ್ರತಿಭಟನೆಯ ಕೂಗುಗಳು ಕೇಳಿಬಂದಿವೆ. ತಮ್ಮ ಘನ ಘೋರ ಕೃತ್ಯಕ್ಕೆ ಅಪಾಲಜಿಯೆಂಬಂತೆ ಸಂಘಟಕರು ಆರೋಪಗಳಿಗೆಲ್ಲ ಸಬೂಬು ಕೊಡಲು ಮುಂದಾಗುತ್ತಿದ್ದಾರಾದರೂ ಅವ್ಯಾವೂ ಎದುರಾಗುವ ಅಸಮತೋಲನವನ್ನು ಸರಿಗೊಳಿಸುವಷ್ಟು ಸಮರ್ಥತೆಯನ್ನು ಪ್ರದರ್ಶಿಸುತ್ತಿಲ್ಲ. ಮೊಟ್ಟಮೊದಲನೆಯದಾಗಿ ರೈತನ ಶ್ರಮ ಹಾಗೂ ಹಸಿವಿನ ಕೂಗುಗಳನ್ನು ಅವರು ಅಣಕಿಸುತ್ತಿರುವುದೇ ಒಪ್ಪುವಂತದ್ದಲ್ಲ. ಇನ್ನು ರೈತರಿಂದ ನೇರವಾಗಿ ತಾವು ಟೊಮ್ಯಾಟೊವನ್ನು ಖರೀದಿಸುತ್ತೇವೆ. ಆದ್ದರಿಂದ ರೈತರಿಗೆ ಅನುಕೂಲವಾಗುವುದೆಂಬ ಅವರ ಹೇಳಿಕೆ ಅರ್ಧ ಸತ್ಯದಂತಿದೆ. ಹೋಗಲಿ, ಅವರು ಹೇಳುವಂತೆಯೇ ರೈತನಿಗೆ ಬೆಲೆಯ ದೃಷ್ಟಿಯಿಂದ ಸಹಾಯವಾಗುತ್ತದೆ ಎಂದು ಭಾವಿಸೋಣ, ಆದರೆ ಅವರ ಕೆಲವೇ ಗಂಟೆಗಳ ಹಬ್ಬ ಮುಗಿದ ನಂತರದ ಅರಿವೇನಾದರು ಅವರಿಗಿದೆಯೇ? ಪ್ರಪಂಚದ ಸರಾಸರಿ ಟೊಮ್ಯಾಟೊ ಉತ್ಪಾದನೆ ಪ್ರತಿ ಹೆಕ್ಟೇರ್‌ಗೆ 23 ಟನ್ ಇದ್ದರೆ ನಮ್ಮದು ಕೇವಲ 9.6 ಟನ್ ಮಾತ್ರ. ಇಲ್ಲಿಗೆ ಏಳು ವರ್ಷಗಳ ಹಿಂದಿನ ಗಣನೆಯಂತೆಯೇ ಉತ್ತರಭಾರತದಲ್ಲಿ ಪ್ರತಿ ವರ್ಷ ಗ್ರಾಹಕರ ಟೊಮ್ಯಾಟೊ ಬೇಡಿಕೆ 10,000-12,000 ಮೆಟ್ರಿಕ್ ಟನ್‌ಗಳಿದ್ದರೆ ಉತ್ಪಾದನೆ ಕೇವಲ 4000-5000 ಮೆಟ್ರಿಕ್ ಟನ್‌ನಷ್ಟಿತ್ತು, ಅಲ್ಲಿಗೆ ತೃಪ್ತಿಕರವಾದ ಉತ್ಪಾದನೆ ನಮ್ಮಲ್ಲಿಲ್ಲವೆಂಬುದು ಸ್ಪಷ್ಟವಾದಂತಾಯಿತು. ಹೀಗಿರುವಾಗ ಈ ಜನ ಏಕಾಏಕಿ ಸಾವಿರಾರು ಟನ್ ಟೊಮ್ಯಾಟೊಗಳನ್ನು ತುಳಿದಾಡಿಬಿಟ್ಟರೆ ತದನಂತರ ಕಾಣಿಸಿಕೊಳ್ಳುವ ಟೊಮ್ಯಾಟೊ ಅಭಾವದಿಂದ ದರ ಸಿಕ್ಕಾಪಟ್ಟೆ ಹೆಚ್ಚಾಗುವುದು ಶತಸಿದ್ಧ. ಆಗ ಸಾಮಾನ್ಯ ಜನತೆ ಬೆಲೆ ತೆರಬೇಕಾಗುವುದು, ಅದರಲ್ಲಿ ಇದೇ ರೈತರೂ ಸೇರಿಕೊಂಡಿರುತ್ತಾರೆ. ಆದರೆ ಅದು ಇವರಿಗೆ ಬೇಡದ ಸಂಗತಿ, ಯಾಕೆಂದರೆ ಇವರಿಗೆಲ್ಲ ಆ ಬೆಲೆ ದೊಡ್ಡ ವಿಷಯವಾಗಿರುವುದಿಲ್ಲ.

ಣ. ಈ ತಂಡ ಶ್ರೀಗಳನ್ನು ಹೆಜ್ಜೆ ಹೆಜ್ಜೆಗೂ ಹಾದಿ ಸುತ್ತಿದೆ. ಈ ಕ್ಷಣಕ್ಕೂ ಅದೇ ಕೆಲಸ ನಡೆಸುತ್ತಿದೆ. ವದೊಳಗಿನ ಖದೀಮರ ಸಂಚಿನಿಂದಾಗಿ ಗಕಾಮದ ಆರೋಪಕ್ಕೆ ಗುರಿಯಾದ ೀಶಂಕರರು ಜೈಲಿನ ಬದುಕನ್ನೂ ಕಂಡಿದ್ದಾರೆ. ರೆ ಸುಪ್ರೀಂಕೋರ್ಟ್ ಅವರನ್ನು ನಿರಪರಾಧಿ ದು ಘೋಷಿಸಿದೆ. ಈ ಸತ್ಯ ಅರಿವಾದ ಲಾದರೂ ಗೌರೀಶಂಕರರನ್ನು ಉತ್ತರಾಧಿಕಾರಿ ಡಬಹುದಿತ್ತಲ್ಲಾ? ಇದಕ್ಕೆ ಯಾವ ಅಡೆತಡೆಗಳಿವೆ?

ಇಂಥಾ ಪ್ರಶ್ನೆಗಳಿಗೆಲ್ಲಾ ಉತ್ತರ ಬೇಕೆಂದರೆ, ಮುಗ್ಧ ೀಶಂಕರರ ವಿರುದ್ಧ 1983ಕ್ಕಿಂತ ಮುಂಚಿತವಾಗಿ ಭಗೊಂಡ ಷಡ್ಯಂತ್ರಗಳನ್ನು ಪ್ರಸ್ತಾಪಿಸಲೇಬೇಕು. 1975 ಶಿವಕುಮಾರ ಸ್ವಾಮೀಜಿ ಗೌರೀಶಂಕರರನ್ನು ತ್ತರಾಧಿಕಾರಿಯೆಂದು ಘೋಷಿಸಿದ್ದರು. ಈ ಹೊತ್ತಿಗಾಗಲೇ ವದೊಳಗೆ ಕಳ್ಳರ ಹಾವಳಿ ವಿಪರೀತವಾಗಿತ್ತು. ಇದು ೀಶಂಕರರ ಅರಿವಿಗೂ ಬಂದಿತ್ತು. ಸಹಜವಾಗಿಯೇ ವಂಚನೆ ಅವರೊಳಗೆ ನೋವುಂಟು ಮಾಡಿತ್ತು. ಅವರು ತ್ತರಾಧಿಕಾರಿಯಾದ ಬಳಿಕವೂ ಸಿದ್ಧಗಂಗಾ ತಾಂತ್ರಿಕ ಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಕೆಲಸ ಮಾಡುತ್ತಾ ದ ಸಂಬಳವನ್ನೂ ಮಠದ ಹುಂಡಿಗೆ ಹಾಕಿ ಳರಾಗುತ್ತಿದ್ದ ಪ್ರಾಮಾಣಿಕ. ಇಂಥವರು ಸಹಜವಾಗಿಯೇ ಠದೊಳಗಿನ ಕಳ್ಳತನ ನಿಲ್ಲಿಸಲು ಕಠಿಣ ಕ್ರಮ ುಸರಿಸತೊಡಗಿದರು. ಇದರಿಂದಾಗಿ ಮಠದೊಳಗಿನ ್ಬಾಜಿಗಳು ಕುದ್ದು ಹೋಗಿ ಗೌರೀಶಂಕರರ ವಿರುದ್ಧ ಸ್ಥಿತ ಸಂಚೊಂದನ್ನು ಹೆಣೆದರು.

ಅದರ ಭಾಗವೆಂಬಂತೆ ದೀಪಕ್ ಸಿಂಗ್ ಎಂಬಾತ ೀಶಂಕರ ತನ್ನನ್ನು ಸಲಿಂಗಕಾಮಕ್ಕೆ ಗುರಿಪಡಿಸಿದರೆಂದು ೋಪಿಸಿ ಪೊಲೀಸರಿಗೆ ದೂರು ನೀಡಿದ. ಈ ಲೆಯಲ್ಲೇ 1988 ರಲ್ಲಿ ಗೌರೀಶಂಕರರನ್ನು ಮಠದಿಂದ ಹೊರ ದಬ್ಬಲಾಯ್ತು. ಕೆಲ ಭಕ್ತರಿಗೆ ಗೌರೀಶಂಕರರ ಪ್ರಾಮಾಣಿಕತೆಯ ಅರಿವಿದ್ದುದರಿಂದ ಗೊಲ್ಲರಹಳ್ಳಿಯಲ್ಲೊಂದು ಮಠ ಸ್ಥಾಪಿಸಿಕೊಟ್ಟರು. ಈ ಹೊತ್ತಿಗಾಗಲೇ ಸಲಿಂಗ ಕಾಮದ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿ ಗೌರೀಶಂಕರರು ಅಪರಾಧಿಯೆಂಬ ತೀರ್ಪು ಹೊರಬಿತ್ತು. ಗೌರೀಶಂಕರ ಜೈಲು ಪಾಲಾದರು. ಆದರೆ ಭಕ್ತರಗುಂಪೊಂದು ಗೌರೀಶಂಕರರ ಪರವಾಗಿ ಸುಪ್ರೀಂಕೋರ್ಟ್ ಮೊರೆ ಹೋದರು. ಆ ವಿಚಾರಣೆಯ ಬಳಿಕ ಗೌರೀಶಂಕರ ನಿರ್ದೋಷಿಯೆಂಬ ಸುಪ್ರೀಂಕೋರ್ಟ್ ತೀರ್ಪು ನೀಡಿತು.

ಹೀಗೆ ತನ್ನದಲ್ಲದ ತಪ್ಪಿಗೆ ಶಿಕ್ಷೆಗೂ ತಲೆ ಕೊಟ್ಟು ಬಂದ ಗೌರಿಶಂಕರರೀಗ ಹೈರಾಣಾಗಿದ್ದಾರೆ. ಶಿವಕುಮಾರ ಸ್ವಾಮೀಜಿಗಳ ಬೆನ್ನಿಗಿರುವ ಭಟ್ಟಂಗಿಗಳು ಒಂದರ್ಥದಲ್ಲಿ ಅವರನ್ನು ಕೊಂದು ಹಾಕಿದ್ದಾರೆ. ಆದರೀಗ ಪರಿಸ್ಥಿತಿ ತಿಳಿಯಾಗಿದೆ. ಗೌರೀಶಂಕರ ನಿರಪರಾಧಿ ಎಂಬುದೂ ಸಾಬೀತಾಗಿದೆ. ಈ ಸಂದರ್ಭದಲ್ಲಾದರೂ ಶಿವಕುಮಾರ ಸ್ವಾಮಿಗಳು ಭಟ್ಟಂಗಿಗಳ ಮಾತಿಗೆ ಕಿವಿಗೊಡದೆ ಅಂತರಾತ್ಮದ ಮಾತು ಕೇಳಬಹುದಿತ್ತು. ವಿನಾಕಾರಣ ಶಿಕ್ಷೆಗೆ ಗುರಿಯಾಗಿ ಜರ್ಜರಿತರಾದ ಗೌರೀಶಂಕರರಿಗೆ ನ್ಯಾಯ ದೊರಕಿಸಬಹುದಿತ್ತು.

ಆದರೆ ಶಿವಕುಮಾರರಿಗೆ ಆ ಇಂಗಿತ ಇದ್ದಂತಿಲ್ಲ. ಒಂದು ವೇಳೆ ಅದಿದ್ದರೂ ಅವರ ಸುತ್ತಲಿರುವ ಖದೀಮರು ಅವಕಾಶ ಕೊಡುತ್ತಿಲ್ಲ. ಇಂಥಾದ್ದರ ನಡುವೆಯೇ ನಡೆದಿರುವ ಸಂಧಾನ ನಾಟಕವಲ್ಲದೇ ಮತ್ತಿನ್ನೇನು?

ಈ ಕ್ಷಣಕ್ಕೂ ಗೌರೀಶಂಕರರ ಕಡೆಗೊಂದು ಕಕ್ಕುಲಾತಿ ತೋರಿಸುವ ಅವಕಾಶ ಶಿವಕುಮಾರರಿಗಿದೆ. ಅದೊಂದನ್ನೇ ನೊಂದ ಜೀವ ನಿರೀಕ್ಷಿಸುತ್ತಿದೆ. ಮಠದ ನಿಷ್ಠ ಭಕ್ತರೂ ಅದನ್ನೇ ಬಯಸುತ್ತಿದ್ದಾರೆ. ನಡೆದಾಡುವ ದೇವರು ಎತ್ತ ಹೆಜ್ಜೆ ಕದಲಿಸುತ್ತಾರೋ.....

❖

ತಾವು ರೈತರಿಂದ ಕೊಳೆತ ಮತ್ತು ಮಾಗಿದ, ಅಡುಗೆಗೆ ಸಲು ಯೋಗ್ಯವಲ್ಲದ ಟೊಮ್ಯಾಟೊಗಳನ್ನು ಮಾತ್ರ ೀದಿಸುತ್ತೇವೆ ಅಂತ ಹಸಿ ಸುಳ್ಳೊಂದನ್ನು ಸಂಘಟಕರು ಸುತ್ತಿದ್ದಾರೆ. ಆ ಕಾರ್ಯಕ್ರಮದ ಪ್ರವೇಶಕ್ಕೆ ನಿಗದಿಪಡಿಸಿ



ಿ ದರಗಳತ್ತ ಒಮ್ಮೆ ಕಣ್ಣಾಡಿಸಿದರೆ ಸಾಕು ಅವರ ್ಳು ತಾನೇತಾನಾಗಿ ಬಯಲಾಗುತ್ತದೆ. ಟಿಕೆಟ್‌ನ ರೇಟು ಮನುಷ್ಯನಿಗೆ ರೂ.1199/-, ಜೋಡಿಗೆಂದರೆ .1999/-, ಇನ್ನು ವಿಐಪಿ ಪಾಸ್‌ಗೆಂದರೆ ಐದು ಬರವನ್ನೂ ದಾಟುತ್ತದೆ. ಈ ಪರಿಯ ದುಡ್ಡು ಕೊಟ್ಟ ದಿ ಕೊಳೆತ ಟೊಮ್ಯಾಟೊಗಳನ್ನು ಮೈಗೆ ಮೆತ್ತಿಕೊಳ್ಳಲು ಪಡುತ್ತಾರೆಯೆ. ಜನರ ತುತ್ತುಗಳಲ್ಲಿ ಅವರು ಆಟ ುವುದು ಎಂಬುದರಲ್ಲಿ ಎರಡು ಮಾತು ಬೇಡ.

ರೈತನಿಂದ ಖರೀದಿಸುವುದನ್ನೆ ದೊಡ್ಡ ಉಪಕಾರದ ತಿನಂತಾಡುವ ಇವರಿಗೆ ರೈತನ ಕಾಳಜಿಯ ಅರಿವೇ . ಆತ ಬೆಳೆಯುವಾಗ ಒಂದೊಂದು ಕಾಳು ಅಥವಾ ್ಣು ಹಾಳಾದಾಗಲು ವ್ಯಥೆಯಿಂದಲೇ ಅದನ್ನು ಆಚೆಗೆ ದಿರುತ್ತಾನೆ. ಮೇಲ್ನೋಟಕ್ಕಿದು ವ್ಯಾವಹಾರಿಕ ಪ್ರಜ್ಞೆ ಸಬಹುದು, ಆದರೆ ಚಪ್ಪಲಿಯನ್ನು ಬದುವಿನಲ್ಲಿಯೇ ್ಟು ಹೊಲಕ್ಕಿಳಿಯುವ ಅವನದು ಮಾತ್ರ ತನ್ನ ಶ್ರಮ ರ್ಥವಾದುದರ ಬಗೆಗಿನ ವೇದನೆ ಅದಾಗಿರುತ್ತದೆ. ಗಿರುವಾಗ ಕೇವಲ ದುಡ್ಡು ದೊರೆತ ಮಾತ್ರಕ್ಕೆ ರೈತ ತನ್ನ ಶ್ರಮ ಹೀಗೆಲ್ಲಾ ಅನ್ಯಾಯಕ್ಕೊಳಗಾಗುವುದನ್ನು ಸ್ವೀಕರಿಸುತ್ತಾನೆಯೆ. ಇದೆಲ್ಲಾ ಅರ್ಥವಾಗುವಷ್ಟು ಮನಸ್ಸಿನವರಾಗಿದ್ದಿದ್ದರೆ ಭಾರತದಂತಹ ದೇಶದಲ್ಲಿ ಅದನ್ನು ಆಯೋಜಿಸುವ ಯೋಚನೆಯನ್ನೆ ಅವರು ಮಾಡುತ್ತಿರಲಿಲ್ಲ.


ಸ್ಪೇನ್ ದೇಶದ ಟೊಮ್ಯಾಟಿನೋ ಉತ್ಸವವನ್ನು ನಮ್ಮಲ್ಲಿ ಆಯೋಜಿಸುತ್ತಿರುವುದು ಇದೇ ಮೊದಲೇನಲ್ಲ. ಈ ಹಿಂದೆ ದೆಹಲಿಯಲ್ಲಿ ನಡೆಸಲು ಇಂತದೇ ಐಷಾರಾಮಿ ಸಂಘಟಕರು ಸಿದ್ಧತೆ ಮಾಡಿಕೊಂಡಿದ್ದಾಗ ಜನ ಬೀದಿಗಿಳಿದು ಪ್ರತಿಭಟಿಸಿದ್ದರು. ಆಗ ಸರ್ಕಾರವೆ ಅದನ್ನು ಬ್ಯಾನ್ ಮಾಡಿತ್ತು. ನಂತರ ಇತ್ತೀಚಿಗಷ್ಟೆ ಯಾವ ಸದ್ದು ಗದ್ದಲವೂ ಇಲ್ಲದೆ ಹೈದ್ರಾಬಾದ್‌ನಲ್ಲಿ ಆಚರಿಸಿಬಿಟ್ಟಿದ್ದಾರೆ. ಅಲ್ಲಿನ ಹುಮ್ಮಸ್ಸೆ



ಇದೀಗ ಬೆಂಗಳೂರಿನಲ್ಲಿ ಆಯೋಜಿಸುವಂತೆ ಪ್ರೇರೇಪಿಸಿರಬೇಕು. ದೆಹಲಿಯ ಮಾದರಿಯಂತೆ ಇಲ್ಲೂ ಒಂದು ಅಪಸ್ವರ ಹೇಳದಿದ್ದರೆ ಸದ್ಯದಲ್ಲೇ ಮೈಸೂರಿನಲ್ಲೂ ಟೊಮ್ಯಾಟೊಗಳನ್ನು ಮೈಗೊರೆಸಿಕೊಳ್ಳುವ ಯೋಜನೆಯಲ್ಲಿದ್ದಾರೆ. ಇದರ ವಿರುದ್ಧ ಮೊನ್ನೆ ಆನ್‌ಲೈನ್ ಸಹಿ ಸಂಗ್ರಹಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಐದೇ ದಿನದಲ್ಲಿ ಐದು ಸಾವಿರ ಸಹಿಗಳು ಸಂಗ್ರಹವಾಗಿದ್ದವು. ಈ ಸಹಿಗಳೆಲ್ಲ ಬೀದಿ ಧ್ವನಿಯಾಗುವ ಮುನ್ನ ಸರ್ಕಾರವೇ ಇದರತ್ತ ಗಮನಹರಿಸುವುದು ಕ್ಷೇಮ.

-ಗಿರೀಶ್ ತಾಳೀಕಟ್ಟೆ

ಐಸಿಯುನಲ್ಲಿ ಬಾಲಗಂಗಾಧರನಾಥ



ಒಕ್ಕಲಿಗರ ಧಾರ್ಮಿಕ ಸಾಮ್ರಾಜ್ಯದಂತಿರುವ ಆದಿಚುಂಚನಗಿರಿ ಸಂಸ್ಥಾನದ ಅನಭಿಷಕ್ತ ಸ್ವಾಮೀಜಿ ಬಾಲಗಂಗಾಧರರಿಗೆ ಮತ್ತೊಮ್ಮೆ ಆರೋಗ್ಯ ಕೈಕೊಟ್ಟಿದೆ. ಈ ಸ್ವಾಮೀಜಿಗೆ ಆರೋಗ್ಯ ಕೈಕೊಡುತ್ತಿರುವುದು ಇದು ಮೊದಲಲ್ಲ. ವೃದ್ಧಾಪ್ಯ, ಅರುಳುಮರುಳು, ಈಗ ಆವರಿಸಿರುವುದೂ ಸೇರಿದಂತೆ ಬಾಲಗಂಗಾಧರರಿಗಿರುವ ಕಾಯಿಲೆಗಳು ಒಂದೆರಡಲ್ಲ! ಈ ಕಾರಣಗಳಿಂದಾಗಿಯೇ ಕಳೆದ ವಾರ ಬೆಂಗಳೂರಿನ ಬಿಜಿಎಸ್ ಅಪೋಲೋ ಆಸ್ಪತ್ರೆಯ ಐಸಿಯುಗೆ ತುರ್ತು ಚಿಕಿತ್ಸೆಗಾಗಿ ಸೇರಿದ ಬಾಲಗಂಗಾಧರರು ಬದುಕಿ ವಾಪಸ್ ಬರುತ್ತಾರೆಂಬ ಬಗ್ಗೆ ಖುದ್ದು ಆದಿಚುಂಚನಗಿರಿ ಮಠದೊಳಗೇ ಅನುಮಾನಗಳು ಹೊಗೆಯಾಡುತ್ತಿವೆ.

ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಮಠ ಹೆಸರೇ ಹೇಳುವಂತೆ ಶೂದ್ರ ಹಿನ್ನೆಲೆಯ ಅವೈದಿಕ ನಾಥಪರಂಪರೆಗೆ ಹೆಸರಾದ ಮಠ. ಆದರೆ ಈಗ ಇದರ ಕುರುಹೂ ಕೂಡ ಉಳಿದಿಲ್ಲ. ಬದಲಿಗೆ ಬಾಲಗಂಗಾಧರರು ಆದಿಚುಂಚನಗಿರಿಗೆ 71ನೇ ಮಠಾಧೀಶರಾಗಿ ಅಧಿಕಾರ ವಹಿಸಿಕೊಂಡ ನಂತರ ವೈದಿಕ ಪರಂಪರೆಯ ಅನುಕರಣೆಗೆ ಬಿದ್ದುದಲ್ಲದೆ ಆರ್.ಎಸ್.ಎಸ್. ಮತ್ತು ವಿಶ್ವ ಹಿಂದೂ ಪರಿಷತ್‌ಗಳ ಸಹವಾಸ ಮಾಡಿ ಶೂದ್ರರ ಆರಾಧ್ಯ ದೈವ ಕಾಲಬೈರವನಿಗೂ ಚಿಡ್ಡಿ ತೊಡಿಸಿಬಿಟ್ಟರು.



ಡಾ.ಹೆಚ್.ಎಲ್.ನಾಗರಾಜು

ಒಂದುಕಾಲದಲ್ಲಿ ಒಂದು ಜೊತೆ ಎತ್ತು ಮತ್ತು ಗಾಡಿ, ಕೆಲ ಚೀಲಗಳಷ್ಟು ದವಸಧಾನ್ಯಗಳನ್ನಷ್ಟೇ ಹೊಂದಿದ್ದ ಆದಿಚುಂಚನಗಿರಿ ಮಠ ಇಂದು ಇಪ್ಪತ್ತು ಸಾವಿರಕೋಟಿ ಬೆಲೆಯ ಆಸ್ತಿಪಾಸ್ತಿಗಳನ್ನೂ ಮತ್ತು ಓಡಾಡಲು ಸ್ವಂತ ಎರಡು ಹೆಲಿಕಾಪ್ಟರ್‌ಗಳನ್ನು ಹೊಂದಿರುವ ಶ್ರೀಮಂತ ಮಠವಾಗಿದೆ. ಇಷ್ಟೊಂದು ಆಸ್ತಿ ಬೆಳೆಯಲು ಕಾರಣರಾಗಿದ್ದು ಇಂದು ಬಿಜಿಎಸ್ ಎಂದು ತನ್ನದೇ ಹೆಸರಿನ ಆಸ್ಪತ್ರೆ ಮಾಡಿಕೊಂಡು ಅದೇ ಆಸ್ಪತ್ರೆಯ ಐಸಿಯೂನಲ್ಲಿ ಸಾವುಬದುಕಿನ ನಡುವೆ ವಿಲವಿಲ ಒದ್ದಾಡುತ್ತಿರುವ ಬಾಲಗಂಗಾಧರರೇ, ಈ ರೀತಿ ಶೂದ್ರ ಮಠ ಬೆಳೆಯಲು ಮಾಡಿದ ಘನ ಕಾರ್ಯಗಳ ಮಾರ್ಗಗಳ ಬಗ್ಗೆ ಖ್ಯಾತಿ ಮತ್ತು ಕುಖ್ಯಾತಿಗಳೆರಡೂ ತಳುಕುಹಾಕಿಕೊಂಡಿರುವುದನ್ನ ಮರೆಯುವಂತಿಲ್ಲ.

ಬಾಲಗಂಗಾಧರರಿಗೆ 20 ವರ್ಷಗಳ ಹಿಂದೆಯೇ ಹೃದಯಕ್ಕೆ ಸಂಬಂಧಪಟ್ಟ ಗಂಭೀರ ಕಾಯಿಲೆ ಕಾಣಿಸಿಕೊಂಡಿತ್ತು. ಆನಂತರ ಅವರ ಎರಡು ಕಿಡ್ನಿಗಳೂ ಕೈಕೊಟ್ಟವು. ಇತ್ತೀಚೆಗೆ ಹಲವು ಬಗೆಯ ಚರ್ಮ ಮತ್ತು ರಕ್ತಸಂಬಂಧಿ ರೋಗಗಳು ಕಾಣಿಸಿಕೊಂಡಿವೆ. ಕಾಲಬೈರವನನ್ನು ಬಿಟ್ಟರೆ ತಾನೇ ದೇವಮಾನವ ಎನ್ನುತ್ತಿದ್ದ ಬಾಲಗಂಗಾಧರಸ್ವಾಮಿಗಳು ಈಗ ಸಾಮಾನ್ಯ ಮನುಷ್ಯನಂತೆ ರೋಗಪೀಡನೆಗೆ ಒಳಗಾಗಿದ್ದಾರೆ.

ಬಿಜಿಎಸ್ ಹಾಸಿಗೆ ಹಿಡಿದಂದಿನಿಂದ ಮಠದ ಸಮಸ್ತ ವ್ಯವಹಾರಗಳನ್ನು ವಹಿಸಿಕೊಂಡಿದ್ದು ನಾಗಮಂಗಲದ ಡಿ.ಕೋಡಿಹಳ್ಳಿಯ ಶೇಖರ್ ಅಲಿಯಾಸ್ ಪ್ರಕಾಶಾನಂದ ಸ್ವಾಮಿ! ಈತ ಬಂದು ಯಾವಾಗ ಒಕ್ಕರಿಸಿಕೊಂಡನೋ ಇಡೀ ಆದಿಚುಂಚನಗಿರಿ ಮಠಕ್ಕೆ ಸೇರಬೇಕಾಗಿದ್ದ ಆಸ್ತಿಪಾಸ್ತಿಗಳನ್ನು ತನ್ನ ಹೆಸರಿನಲ್ಲಿರುವಂತೆ ನೋಡಿಕೊಂಡ. ಈತನನ್ನು ಹತ್ತಿರದಿಂದ ನೋಡಿದ ಮಠದ ಕೆಲ ಕಿಲಾಡಿ ಕಿರಿಸ್ವಾಮಿಗಳು ರೌಡಿ ಸ್ವಾಮಿ, ಪೈಲೆಟ್ ಸ್ವಾಮಿ ಎಂತಲೂ ಮರುನಾಮಕರಣ ಮಾಡಿಕೊಂಡಿದ್ದಾರಂತೆ! ಈತ ಅಂತಹ ಘನಕಾರ್ಯಗಳನ್ನ ಮಾಡಿದ್ದಾನೆ!

ಬಾಲಗಂಗಾಧರರು ಹಾಸಿಗೆ ಹಿಡಿದು ವೈದ್ಯರ ನೆರವನ್ನ ಬಯಸಿ ಆಸ್ಪತ್ರೆ ಸೇರುತ್ತಿದ್ದಾಗಲೆಲ್ಲ ಪ್ರದರ್ಶನ ಕೊಟ್ಟು ಬಿಜಿಎಸ್ ಗುಣಮುಖರಾಗಿದ್ದಾರೆ ಎಂದು ಪುಂಗಿ ಊದತೊಡಗಿದವ ಈ ಶೇಖರ್. ಆದರೆ ಹಿಂದಿನಂತೆ ಈ ಬಾರಿ ಈತ ಎಲ್ಲೂ ಕಾಣಿಸಿಕೊಂಡಿಲ್ಲದಿದ್ದರೂ ಈತ ಸುಮ್ಮನಿಲ್ಲ. ಬದಲಿಗೆ ಭಕ್ತಾದಿಗಳು ಮಠಕ್ಕೆ ನೀಡಿದ ಆಸ್ತಿಯನ್ನು ನುಂಗತೊಡಗಿದ್ದಾನೆ. ಇಷ್ಟೇ ಅಲ್ಲದೆ ನಾಗಮಂಗಲದ ಮತ್ತೊಬ್ಬ ಗುಳುಂ ಗಿರಾಕಿ ಪ್ರಾಥಮಿಕ ಶಾಲಾಶಿಕ್ಷಕ ಕಂ ಹರಿಕಥೆದಾಸ ಜವರನಹಳ್ಳಿ ರಾಮಕೃಷ್ಣೇಗೌಡ ಎಂಬುವವನೊಡಗೂಡಿ ಈ ಸಂದರ್ಭವನ್ನ ಚೆನ್ನಾಗಿ ಬಳಸಿಕೊಂಡು ತಮ್ಮ ಕೈಚಳಕವನ್ನ ಮೆರೆಯುತ್ತಿದ್ದಾರೆ.


ಆದಿಚುಂಚನಗಿರಿಯ ಮಠಾಧೀಶ ಬಿಜಿಎಸ್‌ರ ಆರೋಗ್ಯದ ಪರಿಸ್ಥಿತಿ ತೀರಾ ಹದಗೆಡುತ್ತಿರುವ ಸಂದರ್ಭದಲ್ಲೇ ಮಠದ ಮುಂದಿನ ಉತ್ತರಾಧಿಕಾರಕ್ಕಾಗಿ ಪೈಪೋಟಿಯೂ ಹೆಚ್ಚಾಗತೊಡಗಿದೆ. ಅದರಲ್ಲಿ ಪುರುಷೋತ್ತಮಾನಂದ ಸ್ವಾಮಿ ಎಂಬುವ ಎರಡನೇ ಹಿರಿಯ, ಇದ್ದುದರಲ್ಲಿ ಪ್ರಾಮಾಣಿಕ. ಆದರೆ ಈತನ ಮೇಲೆ ಇಲ್ಲಸಲ್ಲದ ಭ್ರಷ್ಟಾಚಾರದ ಆರೋಪಗಳನ್ನ ಹೊರಿಸಿ ಮೂಲೆಗುಂಪು ಮಾಡಲಾಗಿದೆ.

ಉತ್ತರಾಧಿಕಾರಿ ಸ್ಥಾನದ ಮೇಲೆ ಕಣ್ಣಿಟ್ಟಿರುವವ ಇನ್ನೊಬ್ಬಾತ ಶಿವಮೊಗ್ಗ ಮೂಲದ ಪ್ರಸನ್ನನಾಥಸ್ವಾಮಿ. ಈತನಿಗೆ ಅಂತಹ ಕಳಂಕಗಳಿಲ್ಲದಿದ್ದರೂ ಮಠದೊಳಗೆ ಹಿಡಿತವಿಲ್ಲ ಮತ್ತು ಬೆಂಬಲವಿಲ್ಲ. ಉಳಿದವರೇ ಈ ರೌಡಿ ಎಲಿಮೆಂಟ್ ಶೇಖರ್ ಸ್ವಾಮಿ ಮತ್ತು ಗೆಬರುವ ಗಿರಾಕಿ ರಾಮಕೃಷ್ಣೇಗೌಡ ಎಂಬ ಹಕ್ಕಬುಕ್ಕರು. ಇವರಲ್ಲಿ ಯಾರಾದರೊಬ್ಬರು ಉತ್ತರಾಧಿಕಾರಿಯಾದರೂ ಈ ಮಠದ ಕಥೆ ಮುಗಿಸಿ ಇಡೀ ಮಠದ ಆಸ್ತಿಪಾಸ್ತಿಗಳನ್ನ ತಾವೇ ಜೀರ್ಣಿಸಿಕೊಳ್ಳುತ್ತಾರೆ ಎಂಬುದರಲ್ಲಿ ಎರಡು ಮಾತಿಲ್ಲ.

ಬಿಜಿಎಸ್ ನೆನಪಿನ ಶಕ್ತಿಯನ್ನ ಕಳೆದುಕೊಂಡು ಆರೋಗ್ಯ ಹದಗೆಡುತ್ತಿರುವ ಸಂದರ್ಭಕ್ಕೆ ನಾಗಮಂಗಲದಲ್ಲಿ ತಹಶೀಲ್ದಾರ್ ಆಗಿದ್ದ ಹಾಲಿ ಕೆ.ಆರ್.ಪೇಟೆಯ ಪ್ರಾಮಾಣಿಕ ತಹಶೀಲ್ದಾರ್ ಡಾ.ಹೆಚ್.ಎಲ್.ನಾಗರಾಜುವನ್ನು ಮುಂದಿನ ಉತ್ತರಾಧಿಕಾರಿಯನ್ನಾಗಿ ಮಾಡಲು ಆತುರಾತುರವಾಗಿ ಕಳೆದ ತಿಂಗಳು ಕಾವಿ ದೀಕ್ಷೆಯನ್ನ ಮಾಡಲಾಯಿತು. ಆದರೆ ಕಾವಿತೊಟ್ಟು ಮಠದೊಳಗೆ ಹೋದ ನಾಗರಾಜು ಅಲ್ಲಿ ನಡೆಯುತ್ತಿರುವ ಭಟ್ಟಂಗಿತನ, ಭ್ರಷ್ಟಾಚಾರ, ಗುಂಪುಗಾರಿಕೆಯನ್ನ ಹತ್ತಿರದಿಂದ ನೋಡಿದ ನಂತರ ಕಾವಿ ಬಿಚ್ಚಿಟ್ಟು ಮತ್ತೆ ತಹಶೀಲ್ದಾರ್ ಆಗಿ ಮುಂದುವರಿಯುತ್ತಿದ್ದಾರೆ. ಇದ್ದುದರಲ್ಲಿ ಈತ ನಿಜವಾಗಲೂ ಮುಂದಿನ ಉತ್ತರಾಧಿಕಾರಿಯಾಗಿದ್ದರೆ ಮಠದ ಸಮಸ್ತ ಆಸ್ತಿ ಕನಿಷ್ಠ ಒಕ್ಕಲಿಗರಿಗೆ ಅನುಕೂಲಕರವಾಗಿ ಬದಲಾಗುತಿತ್ತೇನೊ?

ಬಾಲಗಂಗಾಧರರ ಸ್ಥಿತಿ ಈಗ ತೀರಾ ಹದಗೆಟ್ಟಿದ್ದು ಈ ಬಾರಿ ತನ್ನದೇ ಬಿಜಿಎಸ್ ಆಸ್ಪತ್ರೆಯ ಐಸಿಯೂನಿಂದ ಗುಣಮುಖರಾಗಿ ಬರುವುದು ಕಷ್ಟ ಎಂದು ಮಠದ ಮೂಲಗಳೇ ಹೇಳತೊಡಗಿವೆ. ದೇವಮಾನವ ಎಂದು ಕರೆಸಿಕೊಳ್ಳುತ್ತಿದ್ದ ಬಾಲಗಂಗಾಧರರ ಆರೋಗ್ಯವನ್ನ ಆದಿಚುಂಚನಗಿರಿಯ ಕಾಲಬೈರವನೇ ಕಾಪಾಡಬೇಕಿದೆ.

• ಲಕ್ಷ್ಮಣ್ ಚೀರನಹಳ್ಳಿ



ಕ್ರೂರಿ

ಅಭಿಮಾನಿಗಳನ್ನು ಸೇರಿಸಿ ಗಲಾಟೆ ಮಾಡಿಸಿಬಿಟ್ಟರೆ ಪೊಲೀಸರು ತನ್ನನ್ನು ಬಿಟ್ಟು ಬಿಡುತ್ತಾರೆಂಬ ದರ್ಶನ್‌ನ ಹುನ್ನಾರ ಆತನಿಗೇ ಉಲ್ಟಾ ಹೊಡೆದಿತ್ತು. ಅಂಬರೀಷ್ ಆಸ್ಪತ್ರೆಗೆ ಬಂದು ವಿಜಯಲಕ್ಷ್ಮಿಯ ಮೇಲೆ ಒತ್ತಡ ಹೇರಿದ್ದು, ಈ ಕುರಿತು ಪತ್ರಿಕೆಗಳಲ್ಲಿ ಬಂದ ವರದಿ ಎಲ್ಲವನ್ನೂ ಗಮನಿಸಿದ ನ್ಯಾಯಾಲಯ ದರ್ಶನ್‌ನ ಜಾಮೀನು ಅರ್ಜಿಯನ್ನು ಮುಲಾಜಿಲ್ಲದೆ ವಜಾ ಮಾಡಿತ್ತು. ಉಪ್ಪು ತಿಂದವನು ನೀರು ಕುಡಿಯಲೇಬೇಕಲ್ಲವೆ?

• ರಾ. ಸೋಮನಾಥ್

ಉಲ್ಬಣಿಸಿದ ಜಾಂಡಿಸ್ ಜೊತೆಗೆ ಅಸ್ತಮಾ ರೋಗವೂ ಏಕಾಏಕಿ ಕೆರಳಿ ಅತ್ತ ಹೃದ್ರೋಗ ಆಸ್ಪತ್ರೆಯಲ್ಲಿ ದರ್ಶನ್ ಅಲೆಬಂಧಿಯಾಗಿ ಹಣೆಹಣೆ ಚಚ್ಚಿಕೊಳ್ಳುತ್ತಿದ್ದರೆ, ಇತ್ತ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ನ್ಯಾಯಾಧೀಶರು ಆತನ ಜಾಮೀನು ಅರ್ಜಿಯನ್ನು ತಿರಸ್ಕರಿಸಿ 'ನಿನಗೆ ಜೈಲೇ ಲಾಯಕ್ಕು' ಎಂಬುದನ್ನು ನಿಕ್ಕಿಗೊಳಿಸಿದ್ದಾರೆ. ಸೆಪ್ಟೆಂಬರ್ 14 ರ ಬುಧವಾರ ಸೆಷನ್ಸ್ ಕೋರ್ಟಿನಲ್ಲಾದರೂ ಜಾಮೀನು ದೊರಕಬಹುದೆಂಬ ದರ್ಶನ್‌ನ ನಿರೀಕ್ಷೆ ಸುಳ್ಳಾಗಿದೆ. ಪತ್ನಿ ವಿಜಯಲಕ್ಷ್ಮಿ ತಾನು ಬಚ್ಚಲಲ್ಲಿ ಜಾರಿಬಿದ್ದೆ, ಗಂಡ ನನ್ನನ್ನು ಥಳಿಸಲೇ ಇಲ್ಲ ಎಂದು ಏನೇ ತಿಪ್ಪೆ ಸಾರಿಸ ಹೊರಟರೂ ಅದನ್ನು ಕೋರ್ಟು ನಂಬುತ್ತಿಲ್ಲ. ಏಕೆಂದರೆ ಜಪ್ತಿಯಾಗಿರುವುದು ದರ್ಶನ್‌ನ ಖಾಸಾ ಬಳಕೆಯ ರಿವಾಲ್ವರ್. ಪತ್ನಿ ವಿಜಯಲಕ್ಷ್ಮಿಯ ಕಿವಿ ಹರಿದಿದ್ದು, ಮೈಮೇಲಿನ ಸುಟ್ಟ ಗಾಯಗಳು, ಮುಖದ ಸುತ್ತ ಹೆಪ್ಪುಗಟ್ಟಿದ ರಕ್ತ, ಅಂಗೈನ ಎರಡು ಬೆರಳುಗಳು ಅಕ್ಷರಶಃ ಮುರಿದಿರುವುದು; ಎತ್ತಿಂದೆತ್ತ ನೋಡಿದರೂ ದರ್ಶನ್ ಎಂಥಾ ಕ್ರೂರಿಯೆಂಬುದಕ್ಕೆ ಪುರಾವೆ ಸಿಕ್ಕಿಬಿಡುತ್ತದೆ.

ಬಹುಶಃ ಸೆಪ್ಟೆಂಬರ್ 19ಕ್ಕೆ ಸೆಷನ್ಸ್ ಕೋರ್ಟಿನಲ್ಲೇನಾದರೂ ಆತನ ಜಾಮೀನು ಅರ್ಜಿ ವಜಾಗೊಂಡಿತೆಂದರೆ ಸದ್ಯಕ್ಕಾತ ಜೈಲಿಂದ ಹೊರಬರಲಾರ. ಪತ್ರಿಕೆ 2011 ಜೂನ್ 8ರ ಸಂಚಿಕೆಯಲ್ಲಿ ದರ್ಶನ್-ನಿಖಿತಾ ರೋಮಾನ್ಸ್ ಮತ್ತು ಆತ ಪತ್ನಿಗೆ ನೀಡುತ್ತಿದ್ದ ಕಿರುಕುಳದ ಬಗ್ಗೆ ಬರೆದಿತ್ತು. ಕಳೆದೊಂದು ವರ್ಷದಿಂದ ಪತ್ನಿ ವಿಜಯಲಕ್ಷ್ಮಿ, ಆಕೆಯ ತಾಯಿ, ಮಗು ದರ್ಶನ್‌ನಿಂದಾಗಿ ಪಟ್ಟ ಹಿಂಸೆಯದ್ದೇ ಭಯಾನಕ ಕಥಾನಕ. ಅಷ್ಟಕ್ಕೂ ದರ್ಶನ್ ವಿಜಯಲಕ್ಷ್ಮಿಯನ್ನು ಪ್ರೀತಿಸಿ ಮದುವೆಯಾಗಿದ್ದ. ಏನೇನಕ್ಕೂ ಗತಿಯಿಲ್ಲದೆ ಅವಕಾಶಕ್ಕಾಗಿ ಗಾಂಧಿನಗರದ ಪುಡಿಪುಡಿ ನಿರ್ಮಾಪಕರೆದುರು ಕೈಕಟ್ಟಿ ನಿಲ್ಲುತ್ತಿದ್ದ ಕಾಲಕ್ಕೆ ಆತನ ಕೈಹಿಡಿದವಳು ವಿಜಯಲಕ್ಷ್ಮಿ. ದರ್ಶನ್ ಆಗಿನ್ನೂ ಮೈಸೂರಿನ ಸಿದ್ಧಾರ್ಥ ಲೇಔಟಿನಲ್ಲಿ ಮೂರ್ನಾಲ್ಕು ಹಸು ಕಟ್ಟಿ ಅದರ ಸಗಣಿ ಎತ್ತಿ ಸೈಕಲ್ಲೇರಿ ಮನೆಮನೆಗೂ ಹಾಲು ಹಾಕುತ್ತಿದ್ದ. ಆಗ ಉದಯ ಟೀವಿಯ ನಿರೂಪಕಿಯಾಗಿದ್ದ ವಿಜಯಲಕ್ಷ್ಮಿ ಮೈಸೂರಿನಿಂದ ಬೆಂಗಳೂರಿಗೆ ಟ್ರೇನ್ ಖರ್ಚು, ಗಾಂಧಿನಗರದಲ್ಲಿ ಚಿತ್ರಾನ್ನದ ಖರ್ಚು ನೋಡಿಕೊಂಡ ಫಲವಾಗೇ ದರ್ಶನ್ ಹೀರೋ ಪಟ್ಟಕ್ಕೇರಿದ.

ಆದರೆ ದುಡ್ಡು ಮತ್ತು ಜನಪ್ರಿಯತೆ ಏಕಕಾಲಕ್ಕೆ ಬಂತಲ್ಲ; ದರ್ಶನ್ ಪಿತ್ಥ ನೆತ್ತಿಗೇರಿತು. ಮೊದಲು ತಾಯಿಯನ್ನು ಮನೆಯಿಂದ ಹೊರದಬ್ಬಿದ. ದುಡ್ಡು ಬರುತ್ತದೆ ಎಂದರೆ ತಾನು ಕಾಚಾದಲ್ಲಿ ಬೇಕಾದ್ರೂ ನಟಿಸಲು ಸಿದ್ಧ ಎಂದು ಲಜ್ಜೆಗೆಟ್ಟು ಹೇಳಿಕೆ ಕೊಟ್ಟ. ಅದೇನು ಲೆಕ್ಕಾಚಾರವಿತ್ತೋ, ಮೈಸೂರಿನ ತೋಟವನ್ನು ಮಾತ್ರ ತಾಯಿ ಮೀನಾ ತೂಗುದೀಪರ ಹೆಸರಿಗೆ ಮಾಡಿದ ದರ್ಶನ್ ತನ್ನ ಮಿಕ್ಕೆಲ್ಲಾ ಆಸ್ತಿಯನ್ನು ಪತ್ನಿ ವಿಜಯಲಕ್ಷ್ಮಿಯ ಹೆಸರಲ್ಲೇ ಒಂದೊಂದಾಗಿ ಖರೀದಿಸತೊಡಗಿದ. ಮೊದಲು ರಾಜರಾಜೇಶ್ವರಿನಗರದಲ್ಲೊಂದು ಭರ್ಜರಿ ಸೈಟು ಖರೀದಿಸಿ ಅಲ್ಲೊಂದು ಬಂಗಲೆ ಕಟ್ಟಿಸಿದ. ಆನಂತರ ಪ್ರತಿಷ್ಠಿತ ಎಚ್.ಎಸ್.ಆರ್. ಬಡಾವಣೆಯಲ್ಲಿ 40x80 ಅಳತೆಯ ಇನ್ನೆರಡು ಸೈಟುಗಳನ್ನು ಖರೀದಿಸಿ ಅದನ್ನೂ ಪತ್ನಿ ಹೆಸರಿಗೇ ಮಾಡಿದ. ರಾಜಾಜಿನಗರದಲ್ಲಿ ಭಾರೀ ಕಮರ್ಷಿಯಲ್ ಕಾಂಪ್ಲೆಕ್ಸ್ ಒಂದನ್ನು ಕೊಂಡು ಅದನ್ನೂ ಪತ್ನಿ ಹೆಸರಿಗೇ ಮಾಡಿದ. ತಿಂಗಳೊಂದಕ್ಕೆ ಈ ಕಾಂಪ್ಲೆಕ್ಸ್‌ನ ಮಳಿಗೆಗಳ ಬಾಡಿಗೆಯೇ ಎರಡು ಲಕ್ಷದಷ್ಟು ಉತ್ಪತ್ತಿಯಿದೆ.

ಇಷ್ಟಲ್ಲದೇ ಕುಖ್ಯಾತ ಲ್ಯಾಂಡ್ ಗ್ರಾಬರ್ ಮತ್ತು ಗಂಧಿನಗರದ ಚೇತನ್ ಇಂಟರ್‌ನ್ಯಾಷನಲ್ ಹೋಟೆಲಿನ ಮಾಲೀಕ ಭೈರೇಗೌಡ ತನ್ನ 'ಅಯ್ಯ' ಚಿತ್ರದಲ್ಲಿ ಸಂಭಾವನೆ ರೂಪದಲ್ಲಿ ಕೊಟ್ಟಿದ್ದ ನಾಗರಬಾವಿಯ ಒಂದು ಕೋಟಿಯ ಸೈಟು ಮತ್ತು ಮನೆಯನ್ನು ಕೂಡ ದರ್ಶನ್ ತನ್ನ ಪತ್ನಿಯ ಹೆಸರಲ್ಲೇ ಖರೀದಿಸಿದ್ದ. ಈ ಎಲ್ಲಾ ಆಸ್ತಿಯನ್ನು ಒಟ್ಟಿಗೆ ಗುಡ್ಡೆ ಹಾಕಿದರೆ ಅದೇ ಸರಿಸುಮಾರು 20 ಕೋಟಿಯ ಸೊತ್ತಾಗುತ್ತದೆ. ಪತ್ನಿಯ ಹೆಸರಿಗೆ ತಾನೇ ಬಯಸಿ ಖರೀದಿಸಿದ ಇಷ್ಟೆಲ್ಲಾ ಸೊತ್ತನ್ನು ಈಗ ಏಕೆ ದರ್ಶನ್ ಮತ್ತೆ ತನ್ನ ಹೆಸರಿಗೆ ವರ್ಗಾಯಿಸುವಂತೆ ಪೀಡಿಸುತ್ತಿದ್ದಾನೆ? ಕೈಹಿಡಿದ ಮಡದಿಯ ಹೆಸರಲ್ಲೇ ಇಷ್ಟೆಲ್ಲಾ ಆಸ್ತಿಯಿದ್ದರೆ ಅದರಿಂದ ದರ್ಶನ್‌ಗಾಗುವ ನಷ್ಟವೇನು? ಹಾಗೊಮ್ಮೆ ಮಾರಬೇಕೆಂದರೆ ಪತ್ನಿಯ ಮೂಲಕವೇ ಮಾರಬಹುದಿತ್ತಲ್ಲವೇ? ಮಾರಲು ಇಷ್ಟವಿಲ್ಲ ಆದರೆ ಪತ್ನಿಯ ಹೆಸರಿನಲ್ಲಿರುವುದೂ ಬೇಡ ಎಂದರೆ ಏನರ್ಥ?

ಅಲ್ಲಿಗೆ ದರ್ಶನ್ ತನ್ನ ಪತ್ನಿಯನ್ನು ಬೀದಿಗೆ ದಬ್ಬಲು ಯತ್ನಿಸುತ್ತಿದ್ದನೆಂದೇ ಅರ್ಥ ತಾನೆ? ಪತ್ನಿಯನ್ನು ಹೊರಗಟ್ಟಿ ದರ್ಶನ್ ಇನ್ಯಾರ ಜೊತೆ ಸಂಸಾರ ಶುರುಹಚ್ಚಿಕೊಳ್ಳಲು ಯೋಚಿಸಿದ್ದ? ಏಕೆ ದರ್ಶನ್ ಪತ್ನಿ ವಿಜಯಲಕ್ಷ್ಮಿ ಕಳೆದೊಂದು ವರ್ಷದಿಂದ ನಟಿ ಶಿವಣ್ಣ, ತನ್ನ ಗೆಳತಿ ವಿದ್ಯಾ, ತವರೂರು, ಪರಿಚಿತರ ಮನೆಗಳಲ್ಲಿ ಪದೇಪದೇ ತಿಂಗಳಾನುಗಟ್ಟಲೇ ತಂಗುತ್ತಿದ್ದಾಳೆ? ದರ್ಶನ್‌ನ ಜೊತೆ ವಾಸಿಸುವುದು ಅಷ್ಟೊಂದು ಯಮಯಾತನೆಯೇ? ಅಥವಾ ತನ್ನ ಹೆಸರಿನಲ್ಲಿರುವ ಆಸ್ತಿಯನ್ನು ದರ್ಶನ್ ಎಲ್ಲಿ ಕಿತ್ತುಕೊಂಡ ತನ್ನನ್ನು ಹೊರಗಟ್ಟುತ್ತಾನೆ ಎಂಬ ಭೀತಿಯೆ?



ಇಂಥ ಎಲ್ಲಾ ಪ್ರಶ್ನೆಗಳ ಸಾರಾಂಶವೊಂದೆ. ಅದು ತನ್ನ 20 ಕೋಟಿಯ ಆಸ್ತಿಯನ್ನು ಪತ್ನಿಯ ವಶದಿಂದ ಕಿತ್ತುಕೊಂಡು ಆನಂತರ ಆಕೆಯನ್ನು ಮನೆಯಿಂದ ಹೊರದಬ್ಬಲು ದರ್ಶನ್ 'ಮಿಸ್ಟರ್ ಕ್ರೂರಿ' ಆಗಿ ರೂಪುಗೊಂಡಿದ್ದ. ಇದು ಶುರುವಾಗಿದ್ದು ನಿಖಿತಾ ಎಂಬ ಮುಂಬಯಿ ಬೆಡಗಿಯ ಜೊತೆ ದರ್ಶನ್ ಚಕ್ಕಂದ ಶುರುಹಚ್ಚಿಕೊಂಡ ನಂತರ. ಮೊದಲು 'ಯೋಧ' ಚಿತ್ರದಲ್ಲಿ ಶುರುವಾದ, ನಿಖಿತಾ-ದರ್ಶನ್ ಸಲ್ಲಾಪ ದಿನೇದಿನೇ ಎಷ್ಟೊಂದು ಗಾಢವಾಯಿತೆಂದರೆ ಮುಂದೆ 'ಪ್ರಿನ್ಸ್' ಚಿತ್ರಕ್ಕೆ ಕಾಲ್‌ಶೀಟ್ ಕೊಡುವಾಗಲೇ 'ನಿಖಿತಾಳನ್ನು ಹೀರೋಯಿನ್ ಮಾಡಿದರಷ್ಟೇ ತಾನು ಕಾಲ್‌ಶೀಟ್ ಕೊಡ್ತೀನಿ' ಎಂದು ಷರತ್ತು ವಿಧಿಸಿದ್ದ. ತದನಂತರ ನಿರ್ದೇಶಕ ನಾಗಣ್ಣ 'ಸಂಗೊಳ್ಳಿ ರಾಯಣ್ಣ' ಚಿತ್ರದ ಕಾಲ್‌ಶೀಟ್ ಕೋರಿ ಬಂದಾಗಲೂ ಅದಕ್ಕೆ ನಿಖಿತಾಳನ್ನು ಹಾಕಿಕೊಂಡರೆ ಮಾತ್ರ ತಾನು ನಟಿಸಲು ಸಿದ್ಧ ಎಂದು ಹಠ ಹಿಡಿದುಬಿಟ್ಟ. ವಿಧಿಯಿಲ್ಲದೇ ನಾಗಣ್ಣ ಸಂಗೊಳ್ಳಿರಾಯಣ್ಣನ ಪ್ರೇಯಸಿ ಪಾತ್ರಕ್ಕೇ ನಿಖಿತಾಳನ್ನು ಹಾಕಿಕೊಳ್ಳಬೇಕಾಯ್ತು;

ಮೊದಮೊದಲು ಇದು ಕ್ರಮೇಣ ಸರಿಹೋಗಬಹುದೆಂದು ಲೆಕ್ಕ ಹಾಕಿದ ಪತ್ನಿ ವಿಜಯಲಕ್ಷ್ಮಿಗೆ ದರ್ಶನ್ ಬನ್ನೇರುಘಟ್ಟ ರಸ್ತೆಯಲ್ಲೊಂದು ಫ್ಲಾಟ್ ಖರೀದಿಸಿ ಅಲ್ಲಿ ನಿಖಿತಾ ಜೊತೆ ಕದ್ದೂಮುಚ್ಚಿ ಸಂಸಾರ ಆರಂಭಿಸಿದ ಸುದ್ದಿ ಕೇಳಿ ಆಘಾತವಾಗಿದೆ. ಚೆನ್ನೈನಲ್ಲಿ ಆಕೆಗೆಂದೇ ದರ್ಶನ್ ಮತ್ತೊಂದು ಫ್ಲಾಟ್ ಖರೀದಿಸಿದ ವದಂತಿಯೂ ಕಿವಿಗೆ ಬಿದ್ದಿದೆ. ನೇರವಾಗಿ ನಿಖಿತಾಳಿಗೇ ಫೋನ್ ಮಾಡಿ 'ಮನೆ ಹಾಳು ಮಾಡೋಕ್ಕೆ ನಿನಗೆ ನನ್ನ ಗಂಡನೇ ಬೇಕೇನೇ.....' ಎಂದು ವಾಚಾಮಗೋಚರ ಬಯ್ದಿದ್ದಾಳೆ. ಅದನ್ನು ನಿಖಿತಾ ಯಥಾವತ್ತಾಗಿ ದರ್ಶನ್‌ಗೆ ಮುಟ್ಟಿಸಿದ್ದಾಳೆ.

ಅಷ್ಟೇ; ಅಕ್ಷರಶಃ ಕೆಣಕಿದ ಸರ್ಪದಂತಾದ ದರ್ಶನ್ ಸೀದಾ ಮನೆಗೆ ಬಂದವನೇ ನಿಖಿತಾಳಿಗೆ ಫೋನ್ ಮಾಡಿ ಅದನ್ನು ಪತ್ನಿಯ ಮುಖಕ್ಕೆ ಹಿಡಿದು 'ಸಾರೀ ಕೇಳು' ಎಂದು ಮತ್ತೆ ಪೀಡಿಸಿದ್ದಾನೆ. 'ನಾನ್ಯಾಕೆ ಸಾರೀ ಕೇಳ್ಬೇಕು; ನಾನೇನು ಆಕೆಯ ಗಂಡನ ಮೇಲೆ ಕಣ್ಣು ಹಾಕಿದ್ನಾ? ಪ್ರಾಣ ಹೋದರೂ ಸರಿ, ಸಾರಿ ಮಾತ್ರ ಕೇಳಲ್ಲ' ಎಂದಿದ್ದಾಳೆ ಪತ್ನಿ ವಿಜಯಲಕ್ಷ್ಮಿ. ಅಷ್ಟಕ್ಕೇ ಕೆಂಡಮಂಡಲನಾದ ದರ್ಶನ್ ಮಗುವಿನ ಸಮೇತ ಪತ್ನಿಯನ್ನು ಕಾರಿಗೆ ಎಳೆದೊಯ್ದು ರಸ್ತೆಯುದ್ದಕ್ಕೂ ಪತ್ನಿಯನ್ನು ಥಳಿಸಿ ಅರೆಜೀವ ಮಾಡಿದ್ದೇ ಮತ್ತೆ ಮನೆಗೆಸೆದು ಹೋದವನು ಸೀದಾ ನಿಖಿತಾಳ ಫ್ಲಾಟಿಗೆ ಹೋಗಿ ಆಕೆ ಜೊತೆ ಚಕ್ಕಂದ ಆಡಲಾರಂಭಿಸಿದ್ದ!

ಇನ್ನೆಲ್ಲಿ ವಾಪಸ್ಸಾದರೆ ತನ್ನ ಪ್ರಾಣವನ್ನೇ ತೆಗೆದುಬಿಟ್ಟಾನೋ ಎಂದು ಹೆದರಿದ ವಿಜಯಲಕ್ಷ್ಮಿ ಅವತ್ತು ಮನೆಯಿಂದ ನಾಪತ್ತೆಯಾದವಳು ಮತ್ತೆ ಕಣ್ಣಿಗೆ ಬಿದ್ದದ್ದು ನಟ ಶಿವರಾಜ್‌ಕುಮಾರ್ ಮನೆಯಲ್ಲಿ. ಹರಿದ ಬಟ್ಟೆಯಲ್ಲೇ ಮಗುವನ್ನೆತ್ತಿಕೊಂಡು ಸಿಕ್ಕ ಆಟೋ ಹಿಡಿದು ನಾಗವಾರದ ಶಿವಣ್ಣನ ಮನೆ ಮುಂದೆ ಭಿಕ್ಷುಕಿಯಂತೆ ನಿಂತಿದ್ದ ಆಕೆಯ ಮುಖ ಪೂರ್ತಿ ಕಪ್ಪಿಟ್ಟಿತ್ತು, ಹೊಡೆತದ ಪೆಟ್ಟಿಗೆ ತಲೆ, ಮೂಗು, ಮೂತಿಯಿಂದ ರಕ್ತ ಸೋರುತ್ತಿತ್ತು. ಶಿವಣ್ಣನ ಪತ್ನಿ ಗೀತಾ ಆಕೆಯ ದುರವಸ್ಥೆ ಕಂಡು ಮನೆಗೊಯ್ದು ಆರೈಕೆ ಮಾಡಿದ್ದರು. ಆಗ ಊರೆಲ್ಲ ಸುತ್ತಾಡಿದ್ದ ದರ್ಶನ್ ಕೊನೆಗೆ ಕಬ್ಬನ್‌ಪಾರ್ಕ್ ಡಿವೈಎಸ್‌ಪಿ ದೇವರಾಜ್ ಮೂಲಕ ಆಕೆಯ ಮೊಬೈಲನ್ನು ಟ್ರ್ಯಾಪ್ ಮಾಡಿಸಿ ಶಿವಣ್ಣನ ಮನೆಯಲ್ಲಿರುವುದನ್ನು ಪತ್ತೆಹಚ್ಚಿದ. ಇದಾಗಿದ್ದು 2011 ರ ಮೇ 3 ನೇ ತಾರೀಖು.

ನೀನೇನು ಮನುಷ್ಯನಾ ಮೃಗವಾ.....? ಎಂದು ದರ್ಶನ್‌ನ ಭೂತ ಬಿಡಿಸಿದ ಶಿವಣ್ಣನ ಪತ್ನಿ ಗೀತಾ ಬುದ್ಧಿ ಹೇಳಿ ವಿಜಯಲಕ್ಷ್ಮಿಯನ್ನು ಕಳಿಸಿಕೊಟ್ಟಿದ್ದರು. ಬಹುಶಃ ಶಿವಣ್ಣ ಏನಾದರೂ ಮನಸ್ಸು ಮಾಡಿದ್ದರೆ ದರ್ಶನ್ ಅವತ್ತೇ ಜೈಲು ಪಾಲಾಗುತ್ತಿದ್ದ. ಆದರೆ 20 ಕೋಟಿಯ ಆಸ್ತಿ ಪತ್ನಿಯ ಹೆಸರಿಗಿತ್ತಲ್ಲ; ಒಂದಷ್ಟು ದಿನ ನಯವಾಗೇ ಇದ್ದು ಆಸ್ತಿಯನ್ನು ವರ್ಗಾಯಿಸುವಂತೆ ಪೂಸಿ ಹೊಡೆದ. ಮೊದಲೇ ನಿಖಿತಾಳನ್ನು ಕದ್ದು ಮದುವೆಯಾಗಿದ್ದಾನೆಂಬ ಗುಮಾನಿ ಬೇರೆ, ಅದಕ್ಕೆ ತಕ್ಕಂತೆ ಆಸ್ತಿಯನ್ನು ವರ್ಗಾಯಿಸುವಂತೆ ಪೂಸಿ ಹೊಡೆಯುತ್ತಿದ್ದದ್ದು ಆಕೆಯ ಅನುಮಾನವನ್ನು ಮತ್ತಷ್ಟು ಹೆಚ್ಚಿಸಿದೆ. ಇರೋ ಆಸ್ತಿ ನನ್ನ ಹೆಸರಲ್ಲೇ ಇದ್ದರೆ ನಿನಗೇನು ಕಷ್ಟ? ನಾನೇನು ಆಸ್ತಿ ತಗೊಂಡು ಓಡಿಹೋಗಲ್ಲ....' ಎಂದವಳೇ ವಿಜಯಲಕ್ಷ್ಮಿ ಆಸ್ತಿ ವರ್ಗಾವಣೆಯ ಮಾತಿಗೆ ತೆರೆ ಎಳೆದಿದ್ದಾಳೆ.

ಇದಾಗಿದ್ದೇ ದರ್ಶನ್ ಮತ್ತಷ್ಟು ಕೆರಳಿದ್ದಾನೆ. ಹೆಂಡತಿ, ಮಗು, ಸಂಸಾರ, ಇಮೇಜ್‌ಗಿಂತಲೂ ಆತನಿಗೆ ನಿಖಿತಾಳ ಚಕ್ಕಂದವೇ ಮುಖ್ಯವಾಗಿತ್ತು. ಇದಾಗಿ ಎರಡೇ ವಾರಕ್ಕೆ ಮತ್ತೆ ಹಿಡಿದು ಬಡಿದಿದ್ದಾನೆ. ಆಗ ದಾಸರಹಳ್ಳಿಯ ತನ್ನ ಸಂಬಂಧಿಕರ ಮನೆಗೆ ಹೋಗಿ 20 ದಿನಗಳ ಕಾಲ ವಿಜಯಲಕ್ಷ್ಮಿ ತಲೆ ಮರೆಸಿಕೊಂಡಿದ್ದರೆ ಅದನ್ನೂ ಪತ್ತೆಹಚ್ಚಿದ ದರ್ಶನ್ ಅಲ್ಲಿ ಹಾವಳಿಯಿಟ್ಟಿದ್ದಾನೆ. ಆಗ ಮಗುವಿನ ಸಮೇತ ಜಾಲಹಳ್ಳಿ ಪೊಲೀಸ್ ಠಾಣೆಗೆ ಹೋಗಿ ದರ್ಶನ್ ವಿರುದ್ಧ ದೂರುಕೊಟ್ಟ ವಿಜಯಲಕ್ಷ್ಮಿಯನ್ನು ಪೊಲೀಸರೇ ಸಮಾಧಾನ ಹೇಳಿ ಕಳಿಸಿದ್ದಾರೆ. ಅವತ್ತು ಠಾಣೆಯಿಂದ ತನ್ನ ತಾಯಿಯ ಜೊತೆ ಪ್ರತ್ಯೇಕ ಕಾರೊಂದರಲ್ಲಿ ವಿಜಯಲಕ್ಷ್ಮಿ ಬರುತ್ತಿದ್ದರೆ ಹಿಂದೆ ತನ್ನ ಕಾರಲ್ಲಿ ಹಿಂಬಾಲಿಸುತ್ತಿದ್ದ ದರ್ಶನ್ ಏಕಾಏಕಿ ಮೈಮೇಲೆ ದೆವ್ವ ಬಂದವನಂತೆ ಕಾರನ್ನು ತಂದು ಹಿಂಬದಿಗೆ ಗುದ್ದಿಬಿಟ್ಟಿದ್ದ. ಇದನ್ನೂ ಸಹಿಸಿಕೊಂಡು ಮನೆಗೆ ಬಂದ ವಿಜಯಲಕ್ಷ್ಮಿಗೆ ಆಸ್ತಿ ವರ್ಗಾಯಿಸದೇ ಹೋದರೆ ನಿನ್ನನ್ನು ಕೊಂದು ಹಾಕೋದು ಗ್ಯಾರಂಟಿ ಎಂದೇ ಪದೇಪದೇ ಬೆದರಿಸಿದ. ಇದ್ಯಾವುದಕ್ಕೂ ವಿಜಯಲಕ್ಷ್ಮಿ ಜಗ್ಗಲಿಲ್ಲ. ಜುಲೈ 12 ರಂದು ಮತ್ತೆ ಏಕಾಏಕಿ ಆಸ್ತಿ ಖ್ಯಾತೆ ತೆಗೆದ ದರ್ಶನ್ ಅವತ್ತು ತನ್ನ ರಿವಾಲ್ವರ್ ತೆಗೆದದ್ದೇ ಮಗ ವಿನೀಶ್‌ನನ್ನು ಎತ್ತಿಹಿಡಿದು '[illegible] ಹಾಕದೇ ಹೋದ್ರೆ ಮಗನನ್ನು ಮೊದಲು ಕೊಂದು ನಂತ್ರ ನಿನ್ನ ಹೆಣ ಬೀಳಿಸ್ತೀನಿ' ಎಂದು ಹೂಂಕರಿಸಿದ್ದಾನೆ.

ರೋಸತ್ತ ವಿಜಯಲಕ್ಷ್ಮಿ 'ಕೊಂದು ಹಾಕು, ಇಬ್ಬರನ್ನೂ ಒಟ್ಟಿಗೇ ಕೊಂದು ಹಾಕು.....' ಎಂದು ಆತನ ರಿವಾಲ್ವರನ್ನೇ ಕಿತ್ತುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾಳೆ. ಇದು ವಿಜಯಲಕ್ಷ್ಮಿಯ ತಾಯಿಗೆ ಗೊತ್ತಾಗಿ ಆಕೆ ಮನೆಗೆ ಬಂದು ಪೆಟ್ಟು ತಿಂದ ಮಗಳ ಆರೈಕೆಗೆ ನಿಂತರೆ, ದರ್ಶನ್ ಸಂಗೊಳ್ಳಿ ರಾಯಣ್ಣ ಚಿತ್ರದ ಶೂಟಿಂಗನ್ನೇ ಬಿಟ್ಟು ಬಂದು ಅತ್ತೆಯನ್ನು ಹಿಡಿದು ಬಡಿದಿದ್ದಾನೆ. ಇನ್ನು ಈತನ ಜೊತೆಗಿದ್ದರೆ ಅನಾಹುತ ತಪ್ಪಿದ್ದಲ್ಲ ಎಂದು ಲೆಕ್ಕ ಹಾಕಿದ ವಿಜಯಲಕ್ಷ್ಮಿ ಜುಲೈ 20 ರಂದು ಮಗು, ಬಟ್ಟೆಬರೆ ಸಮೇತ ಬಾಪೂಜಿ ಲೇಔಟಿನ ತನ್ನ ಗೆಳತಿ ವಿದ್ಯಾ ಎಂಬಾಕೆಯ ಮನೆಗೆ ಬಂದಿದ್ದಾಳೆ. ಅಲ್ಲಿ ಒಂದು ತಿಂಗಳು ಪೂರ್ತಿ ದರ್ಶನ್ ಹೊಡೆತದಿಂದಾಗಿದ್ದ ಗಾಯಕ್ಕೆ ಚಿಕಿತ್ಸೆ ಪಡೆದಿದ್ದಾಳೆ. ತಲೆಗೆ ಆಗಿದ್ದ ಗಾಯ ಇನ್ನೂ ಮಾಗಿರಲಿಲ್ಲ, ಗಲ್ಲದ ಮಾಂಸ ಖಂಡವೇ ಜಜ್ಜಿಹೋಗಿತ್ತು, ಮೂಗಿನ ಮೂಳೆಗೆ ಗುದ್ದಿದ ಏಟಿನಿಂದಾಗಿ ಆಗಾಗ ರಕ್ತ ಸೋರುತ್ತಿತ್ತು. ಪ್ರತಿ ಸಂಜೆಯಾದರೆ ನೋವು ತಾಳಲಾರದೇ ನೋವು ನಿವಾರಕ ಮಾತ್ರೆ ಸೇವಿಸಿದರಷ್ಟೇ ನಿದ್ದೆ ಬರುತ್ತಿತ್ತು.

ಇಂಥಾ ಸ್ಥಿತಿಯಲ್ಲೇ ಸೆಪ್ಟೆಂಬರ್ 9 ಶುಕ್ರವಾರ ದರ್ಶನ್ ಸಂಜೆ ನಾಲ್ಕೂವರೆಯ ಹೊತ್ತಿಗೆ ತನ್ನ ಪತ್ನಿಯಿದ್ದ ವಿದ್ಯಾರ ಮನೆಯ ಬಾಗಿಲು ತಟ್ಟಿದ್ದಾನೆ. ತನ್ನ ಇರುವಿಕೆ ಗೊತ್ತಾಗದ ಹಾಗೆ ವಿಜಯಲಕ್ಷ್ಮಿ ಎಷ್ಟೇ ಜಾಗ್ರತೆ ವಹಿಸಿದ್ದರೂ

ದರ್ಶನ್ ಬಾಪೂಜಿ ಲೇಔಟಿನ ಮನೆಯನ್ನು ಬಿಟ್ಟಿದ್ದ. ನಿದ್ರೆ ಮಾತ್ರೆ ಸೇವಿಸಿ ಅರೆನಿದ್ದೆಯಲ್ಲಿದ್ದ ಪತ್ನಿಯನ್ನು ದರದರನೇ ಎಳೆದೊಯ್ದು ತನ್ನ ಕಾರಿಗೆ ತುರುಕಿದ. ಮಗುವನ್ನು ಕೋಳಿ ಕಾರಿಗೆಸೆದ. ಡ್ರೈವರ್‌ಗೆ ಕಾರ್ ಸ್ಟಾರ್ಟ್ ಮಾಡಲು ...ಯನ್ನು ಹಿಡಿದು ಹೊಡೆಯಲಾರಂಭಿಸಿದವನು ...ಆವರೆಯ ತನಕ ಅಂದರೆ ಸರಿಸುಮಾರು ಎರಡು ...ಕಾಲ ಹೊಡೆಯುತ್ತಲೇ ಇದ್ದ!

...ದರೆ ಪತ್ನಿಯನ್ನು ಹಿಂಸಿಸಲೆಂದೇ ಎಲ್ಲೆಂದರಲ್ಲಿ ...ಸುವುದು, ಕಾರು ರಸ್ತೆಯಲ್ಲಿ ಓಡುತ್ತಿದ್ದರೆ ಒಳಗೆ ...ರಿಸಿಕೊಂಡು ಹೆಂಡತಿಯನ್ನು ಪೀಡಿಸುವುದು. ...ರ್ಶನ್ ಅಕ್ಷರಶಃ ಪಶುವಾಗಿದ್ದ. ಪತ್ನಿಯ ಜುಟ್ಟು ...ಎಳೆದಾಡಿದ. ಕಿವಿಕಚ್ಚಿದವನು ಹರಿದು ರಕ್ತ ...ದ್ದರೂ ತೃಪ್ತನಾಗಲಿಲ್ಲ. ತಿರುಚಿದ ಏಟಿಗೆ ಕೈ ...ರಡೂ ಮುರಿದುಹೋದವು. ಇಷ್ಟೆಲ್ಲ ಪೆಟ್ಟು ...ವಿಜಯಲಕ್ಷ್ಮಿ ಪ್ರಜ್ಞೆ ತಪ್ಪಿಬಿದ್ದಿದ್ದರೆ 'ಬೇಕಂತ ...ತ್ತಿಯೇನೇ ಇರು ನಿನಗೆ ಮಾಡ್ತೀನಿ.....' ಎಂದದ್ದೇ ...ಅಂಟಿಸಿಕೊಂಡು ಆಕೆಯ ಕತ್ತು, ಬೆನ್ನು, ಎದೆಗೆ ತಿಕ್ಕಿ ಸುಡಲಾರಂಭಿಸಿದ.

...ಬರ್ ಒಂಭತ್ತರ ಶುಕ್ರವಾರ ಸಂಜೆ ನಾಲ್ಕೂವರೆ ...ಆರೂವರೆ ತನಕ ದರ್ಶನ್‌ನ ಯಮಸದೃಶ ...ಕಾರಿನಲ್ಲಿ ವಿಜಯಲಕ್ಷ್ಮಿಗೆ ಅಕ್ಷರಶಃ ನರಕದ ...ಗಿದೆ. ಬಾಪೂಜಿ ಲೇಔಟಿನ ಗೆಳತಿ ವಿದ್ಯಾ ...ಮುಂದೆ ಹೆಣ ಎಸೆದಂತೆ ಮಗುವಿನ ಸಮೇತ ...ಲಕ್ಷ್ಮಿಯನ್ನು ದರ್ಶನ್ ಫುಟ್‌ಪಾತಿಗೆ ತಳ್ಳಿ ...ನ್ನು ಅಕ್ಕಪಕ್ಕದ ಜನ ಕಣ್ಣಾರೆ ನೋಡಿದ್ದಾರೆ. ಆಕ್ರಂದನ, ಮಗುವಿನ ಚೀರಾಟ, ಅಣ್ಣಾ ...ಡಿ ಎಂದು ಪರಿಪರಿಯಾಗಿ ಬೇಡಿಕೊಳ್ಳುತ್ತಿದ್ದ ...ಗೋಗರೆತ; ಯಾವುದೂ ಆತನ ಮನಕಲಕಲಿಲ್ಲ!

...! ಏಳರ ಹೊತ್ತಿಗೆಲ್ಲ ಗೆಳತಿ ವಿದ್ಯಾ ಪ್ರಜ್ಞೆ ತಪ್ಪಿ ...ವಿಜಯಲಕ್ಷ್ಮಿಯನ್ನು ಕರೆದೊಯ್ದು ವಿಜಯನಗರದ ಆಸ್ಪತ್ರೆಗೆ ದಾಖಲಿಸಿದ್ದಾರೆ. ಗಾಯ ನೋಡಿದ ...ಗೆ ಏನಂಥ ಹೇಳಲು ಸಾಧ್ಯ? ವಿದ್ಯಾ ...ವನ್ನೂ ವಿವರಿಸಿದ್ದಾರೆ. ಸಹಜವಾಗೇ ಅದು ...ಲೀಗಲ್ ಕೇಸು. ಗಾಯಿತ್ರಿ ಆಸ್ಪತ್ರೆಯ ವೈದ್ಯರೇ ...ನಗರದ ಪೊಲೀಸರಿಗೆ ಫೋನ್ ಮಾಡಿ ವಿಷಯ ...ದ್ದಾರೆ. ರಾತ್ರಿ ಹನ್ನೆರಡೂವರೆ ಹೊತ್ತಿಗೆ ಆಸ್ಪತ್ರೆಗೆ ...ಪೊಲೀಸರಿಗೆ ನಡೆದದ್ದಷ್ಟನ್ನೂ ವಿಜಯಲಕ್ಷ್ಮಿ ...ದ್ದಾರೆ. ಪೊಲೀಸರು ಅದನ್ನು ಯಥಾವತ್ತಾಗಿ ಹೇಳಿಕೆ ...ಕೊಂಡು ಸಹಿ ಪಡೆದಿದ್ದಾರೆ. ಈ ಹೊತ್ತಿಗಾಗಲೇ ಕಂಠಮಟ್ಟ ಕುಡಿದು ಚಿತ್ತಾಗಿದ್ದ ದರ್ಶನ್‌ಗೆ ವಿಜಯಲಕ್ಷ್ಮಿ ಆಸ್ಪತ್ರೆಗೆ ದಾಖಲಾಗಿದ್ದು ಗೊತ್ತಾಗಿ ರಾತ್ರಿ ಮೂರು ಗಂಟೆಗೆ ಏಕಾಏಕಿ ಗಾಯತ್ರಿ ಆಸ್ಪತ್ರೆಗೆ ನುಗ್ಗಿದ್ದೇ 'ಏನೇ... ಸೂ... ಮುಂಡೆ ನನ್ನ ಮೇಲೆ ಪೊಲೀಸರಿಗೇ ಕಂಪ್ಲೇಂಟ್ ಕೊಡ್ತಿಯೇನೇ? ನೀನೂ ಮತ್ತು ಪೊಲೀಸ್ರು ಸೇರಿ ನಂದೇನೂ ಕಿತ್ಕೊಳ್ಳೋಕ್ಕಾಗಲ್ಲ....' ಎಂದು ಪೊಲೀಸರೆದುರೇ ಹೂಂಕರಿಸಿದ್ದಾನೆ.



ಇನ್ನು ಪೊಲೀಸರಾದರೂ ಎಷ್ಟೊಂತ ಸಹಿಸಿಯಾರು? ಆಸ್ಪತ್ರೆಯೆದುರೇ ದರ್ಶನ್‌ನನ್ನು ಹಿಡಿದು ಠಾಣೆಗೆ ಎಳೆದೊಯ್ದಿದ್ದಾರೆ. ಠಾಣೆಯಲ್ಲಿ ದರ್ಶನ್ ಏನ್ರೋ ನನ್ನನ್ನೇ ಅರೆಸ್ಟ್ ಮಾಡೋವಷ್ಟು ಧೈರ್ಯರ್ನಾ? ನಿಮ್ಮ ಹೋಮ್‌ಮಿನಿಸ್ಟ್ರೇ ನನ್ನ ಫ್ರೆಂಡು ಗೊತ್ತಾ....?' ಎಂದೆಲ್ಲಾ ಕೂಗಾಡಿದ್ದಾನೆ. ಪೊಲೀಸರಿಗೆ ಇನ್ನೂ ಉರಿದಿದೆ. ವಿಜಯನಗರದ ಇನ್ಸ್‌ಪೆಕ್ಟರ್ ಪಿ. ಚಂದ್ರಶೇಖರ್ ಎಷ್ಟೆಂದರೂ ನಿಷ್ಠುರಕ್ಕೆ ಹೆಸರುವಾಸಿ. ನೋಡುವಷ್ಟು ನೋಡಿ ಎಫ್‌ಐಆರ್ ದಾಖಲಿಸಿದ್ದಾರೆ. ಆದರೆ ಬೆಳಗ್ಗೆ ಹೊತ್ತಿಗೆ ಇಡೀ ಪ್ರಕರಣಕ್ಕೇ ಹೊಸ ತಿರುವು ಬಂದುಬಿಟ್ಟಿತ್ತು. ಅದಕ್ಕೆ ಕಾರಣನಾಗಿದ್ದು ದುನಿಯಾ ವಿಜಿ ಮತ್ತಾತನ ಚೇಲಾ ಬುಲೆಟ್ ಪ್ರಕಾಶ್. ಇದ್ದಬದ್ದ ಹುಡುಗರನ್ನೆಲ್ಲಾ ವಿಜಯನಗರ ಪೊಲೀಸ್ ಠಾಣೆಯೆದುರು ಜಮಾಯಿಸಿ ಬಸ್ಸಿಗೆ ಕಲ್ಲು ಹೊಡೆಸತೊಡಗಿದ್ದು ಒಂದೆಡೆಯಾದರೆ ಮತ್ತೊಂದೆಡೆ ಹಿರಿಯ ನಟರಾದ ಅಂಬಿ, ಜಗ್ಗೇಶ್, ರಾಕ್‌ಲೈನ್, ನಿರ್ದೇಶಕ ಪ್ರೇಮ್ ಮುಂತಾದವರೆಲ್ಲ ಗಾಯತ್ರಿ ಆಸ್ಪತ್ರೆಗೆ ಹೋಗಿ ಪತ್ನಿ ವಿಜಯಲಕ್ಷ್ಮಿಗೇ ಬುದ್ಧಿ ಹೇಳತೊಡಗಿದ್ದರು.

ಅಂಬರೀಷ್ ಹಿರಿಯ ನಿಜ. ಅವರ ಪ್ರಕಾರ ಇದು ಗಂಡಹೆಂಡಿರ ಜಗಳವೆಂಬುದೂ ಅಷ್ಟೇ ಸತ್ಯ. ವಿಜಯಲಕ್ಷ್ಮಿಗೆ ಬುದ್ಧಿ ಹೇಳುವ ಬದಲು ಕಾಟಾಚಾರಕ್ಕಾದರೂ ದರ್ಶನ್‌ನ ಕ್ರೌರ್ಯವನ್ನು ಖಂಡಿಸಬೇಕಿತ್ತಲ್ಲವೆ? ಪ್ರೇಮ್, ಜಗ್ಗೇಶ್, ರಾಕ್‌ಲೈನ್ ಯಾರಿಗೂ ದರ್ಶನ್‌ನ ಪೈಶಾಚಿಕತೆ ತಪ್ಪು ಎನಿಸಲಿಲ್ಲವೇ?

ಎಷ್ಟೆಂದರೂ ದೌರ್ಜನ್ಯ ಸಹಿಸಿಕೊಂಡು ನೋವು ನುಂಗಬೇಕಾದವಳು ಹೆಣ್ಣೆ ತಾನೇ? ಇದಕ್ಕೆ ವಿಜಯಲಕ್ಷ್ಮಿ ಕೂಡ ಹೊರತಾಗಲಿಲ್ಲ. ಸಂಜೆ ಹೊತ್ತಿಗೆ ತಾನೇ ಕೊಟ್ಟಿದ್ದ ದೂರಿಗೆ ಉಲ್ಟಾ ಹೊಡೆದು ಇಲ್ಲ; ನಾನು ಬಚ್ಚಲ ಮನೆಯಲ್ಲಿ ಜಾರಿ ಬಿದ್ದೆ. ಗಂಡ ನನ್ನನ್ನು ಹೊಡೆದೇ ಇಲ್ಲ. ಆದ ಗಾಯವೆಲ್ಲ ಜಾರಿಬಿದ್ದಿದ್ದರಿಂದ ಆದದ್ದು ಎಂದು ಮರು ಹೇಳಿಕೆ ಕೊಟ್ಟ ವಿಜಯಲಕ್ಷ್ಮಿ ಅಂಬಿ, ಜಗ್ಗೇಶ್‌ರಂಥ ಹಿರಿಯ ನಟರ ಮಾತಿಗೆ ಬೆಲೆ ಕೊಟ್ಟಿದ್ದಳು. ಅಲ್ಲಿಗೆ ಇಡೀ ದರ್ಶನ್ ಪ್ರಕರಣ ಠುಸ್ಸಾಯಿತೆಂದೇ ಎಲ್ಲರೂ ಭಾವಿಸಿದ್ದು ಸಂಜೆ ಹೊತ್ತಿಗದು ಸುಳ್ಳಾಗಿ ಹೋಗಿತ್ತು.

ಪೊಲೀಸರು ಆ ಹೊತ್ತಿಗಾಗಲೇ ಎಫ್‌ಐಆರ್ ದಾಖಲಿಸಿದ್ದರಿಂದ ವಿಧಿಯಿಲ್ಲದೇ ದರ್ಶನ್‌ನನ್ನು ನ್ಯಾಯಾಧೀಶರ ಮನೆಗೊಯ್ದು ನಿಲ್ಲಿಸಬೇಕಾಯ್ತು. ಬಹುಶಃ ದರ್ಶನ್‌ನ ರಿವಾಲ್ವರನ್ನು ಪೊಲೀಸರು ಜಪ್ತಿ ಮಾಡದೇ ಹೋಗಿದ್ದರೆ ಜಾಮೀನು ಸಿಗುತ್ತಿತ್ತೇನೋ. ಹೇಳಿಕೇಳಿ ಶಸ್ತ್ರಾಸ್ತ್ರ ಕಾಯ್ದೆ. ಜೊತೆಗೆ ವಿಜಯಲಕ್ಷ್ಮಿಯೇ ನ್ಯಾಯಾಧೀಶರ ಮನೆಗೆ ಬಂದು ತಾನು ಬಚ್ಚಲಮನೆಯಲ್ಲಿ ಜಾರಿ ಬಿದ್ದೆ ಎಂದಿದ್ದನ್ನು



ಒಪ್ಪುವ ಪರಿಸ್ಥಿತಿಯಲ್ಲಿ ನ್ಯಾಯಾಲಯವಿರಲಿಲ್ಲ. ಹಾಗಿದ್ದರೆ ಮೊದಲು ಕೊಟ್ಟ ದೂರಿನಲ್ಲಿ ಹೊಡೆದದ್ದು, ಸಿಗರೇಟಿನಿಂದ ಸುಟ್ಟಿದ್ದು, ರಿವಾಲ್ವರಿನಿಂದ ಕೊಲೆ ಬೆದರಿಕೆ ಹಾಕಿದ್ದು, ಆಸ್ತಿಯನ್ನು ವರ್ಗಾಯಿಸುವಂತೆ ಒತ್ತಾಯಿಸಿದ ವಿವರಣೆ ಏಕಿರುತ್ತಿತ್ತು. ವಿಜಯಲಕ್ಷ್ಮಿ ಯಾವುದೋ ಒತ್ತಡಕ್ಕೆ ಸಿಲುಕಿ ಕೊಟ್ಟ ದೂರನ್ನು ಹಿಂಪಡೆಯುತ್ತಿದ್ದಾಳೆಂಬುದು ಮೇಲುನೋಟಕ್ಕೇ ಸಾಬೀತಾಗಿತ್ತು. ಒಂದನೇ ಎಸಿಎಂಎಂ ನ್ಯಾಯಾಧೀಶ ವೆಂಕಟೇಶ್ ಆರ್. ಹಲಗಿ ಸಣ್ಣ ಸಂದೇಹಕ್ಕೂ ಆಸ್ಪದ ನೀಡದೇ ದರ್ಶನ್‌ನನ್ನು ಜೈಲಿಗೆ ಕಳಿಸಿಬಿಟ್ಟರು.

ಅಲ್ಲಿಗೆ ದರ್ಶನ್‌ನ ಪಾಪದ ಕೊಡ ತುಂಬಿ ಬಂದಂತಾಗಿತ್ತು. ಜೈಲಿನಲ್ಲಿ ದರ್ಶನ್ ಇದ್ದದ್ದು ಮತ್ತೊಬ್ಬ ಚಿತ್ರ ನಿರ್ಮಾಪಕ ಮತ್ತು ಕುಡಿದು ತನ್ನ ಗೆಳೆಯನನ್ನೇ ಗುಂಡಿಟ್ಟು ಕೊಂದ ಮಹಾವಿಕಾರಿ ಗೋವರ್ಧನ್‌ಮೂರ್ತಿಯ ಜೊತೆ. ಜೈಲಿಗೆ ಹೋದವನೇ ದರ್ಶನ್ ತನ್ನ ನಟನಾ ಚಾತುರ್ಯ ಮೆರೆದು ಮೂಗು ಹಿಡಿದವನೇ ಕುಸಿದು ಬಿದ್ದವನಂತೆ ನಟಿಸಿ ರಾಜೀವ್ ಗಾಂಧಿ ಹೃದ್ರೋಗ ಆಸ್ಪತ್ರೆಗೆ ದಾಖಲಾದ. ಇಷ್ಟಾದ ಮೇಲೂ ಕೋರ್ಟ್ ತನಗೆ ಜಾಮೀನು ನೀಡುತ್ತದೆಯೆಂಬುದು ಆತನ ಲೆಕ್ಕಾಚಾರವಾಗಿತ್ತು. ಮಂಗಳವಾರದ ಸೆಪ್ಟೆಂಬರ್ 13 ಕ್ಕೆ ತನಗೆ ಖಂಡಿತಾ ಜಾಮೀನಾಗುತ್ತದೆ ಎಂದೇ ದರ್ಶನ್ ನಂಬಿಕೊಂಡಿದ್ದು ಮಂಗಳವಾರದ ಸಂಜೆಯೇ ತಲೆಕೆಳಗಾಗಿತ್ತು.

ಪತ್ನಿ ವಿಜಯಲಕ್ಷ್ಮಿ ಬಚ್ಚಲ ಮನೆಯಲ್ಲಿ ಜಾರಿಬಿದ್ದು ಗಾಯಗೊಂಡಿದ್ದಕ್ಕೆ ಯಾವುದೇ ಪುರಾವೆಗಳಿರಲಿಲ್ಲ. ಏಕೆಂದರೆ ವಿಜಯನಗರ ಪೊಲೀಸರಿಗೆ ದರ್ಶನ್ ಕೊಟ್ಟ ಹೇಳಿಕೆಯಲ್ಲಿ ತಾನು ಹೊಡೆದದ್ದು ನಿಜ, ಆದರೆ ಆ ಹೊತ್ತಿಗೆ ತಾನು ಪಾನಮತ್ತನಾಗಿದ್ದೆ ಎಂದಿದ್ದ. ಪತ್ನಿ ಒತ್ತಡಕ್ಕೆ ಸಿಲುಕಿ ದೂರು ವಾಪಸ್ಸು ಪಡೆದಿದ್ದಾಳೆಂಬುದಕ್ಕೆ ಇದೊಂದೇ ಸಾಕಾಗಿತ್ತು. ಅದಕ್ಕೂ ಮೀರಿ ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರು ನೀಡಿದ್ದ ಗಾಯದ ಪ್ರಮಾಣಪತ್ರವೊಂದೇ ದರ್ಶನ್‌ನ ಕ್ರೌರ್ಯವನ್ನು ಸಾರಿ ಹೇಳುತ್ತಿತ್ತು. ಬಚ್ಚಲಲ್ಲಿ ಜಾರಿ ಬಿದ್ದಿದ್ದೇ ಆಗಿದ್ದರೆ ಬಿದ್ದ ಭಾಗದಲ್ಲಷ್ಟೇ ಗಾಯವಾಗಬೇಕು. ಆದರೆ ದೇಹದ ಎಲ್ಲಾ ಭಾಗದಲ್ಲಿ ಹೇಗೆ ಗಾಯವಾಗಲು ಸಾಧ್ಯ? ಕಿವಿಯಲ್ಲಿ ಕಚ್ಚಿದ ಗುರುತು ಮತ್ತು ಕಿವಿ ಹರಿದು ಹೋಗಿರುವುದು ಬಿದ್ದಿದ್ದರಿಂದಾಗಲು ಸಾಧ್ಯವೇ ಇರಲಿಲ್ಲ. ಜೊತೆಗೆ ರಿವಾಲ್ವರ್ ಬೇರೆ ಜಪ್ತಾಗಿತ್ತಲ್ಲ?

ಅಭಿಮಾನಿಗಳನ್ನು ಸೇರಿಸಿ ಗಲಾಟೆ ಮಾಡಿಸಿಬಿಟ್ಟರೆ ಪೊಲೀಸರು ತನ್ನನ್ನು ಬಿಟ್ಟು ಬಿಡುತ್ತಾರೆಂಬ ದರ್ಶನ್‌ನ ಹುನ್ನಾರ ಆತನಿಗೇ ಉಲ್ಟಾ ಹೊಡೆದಿತ್ತು. ಅಂಬರೀಷ್ ಆಸ್ಪತ್ರೆಗೆ ಬಂದು ವಿಜಯಲಕ್ಷ್ಮಿಯ ಮೇಲೆ ಒತ್ತಡ ಹೇರಿದ್ದು ಈ ಕುರಿತು ಪತ್ರಿಕೆಗಳಲ್ಲಿ ಬಂದ ವರದಿ ಎಲ್ಲವನ್ನೂ ಗಮನಿಸಿದ ನ್ಯಾಯಾಲಯ ದರ್ಶನ್‌ನ ಜಾಮೀನು ಅರ್ಜಿಯನ್ನು ಮುಲಾಜಿಲ್ಲದೆ ವಜಾ ಮಾಡಿತ್ತು. ಉಪ್ಪು ತಿಂದವನು ನೀರು ಕುಡಿಯಲೇಬೇಕಲ್ಲವೆ? ದರ್ಶನ್ ಪಾಲಿಗೀಗ ಉಳಿದಿರುವುದು ಸೆಷನ್ಸ್ ಕೋರ್ಟ್ ಒಂದೇ. ಸೆಪ್ಟೆಂಬರ್ 19 ಕ್ಕೇನಾದರೂ ಜಾಮೀನಾಯಿತೆಂದ ದರ್ಶನ್ ಬಚಾವು. ಇಲ್ಲದೇಹೋದರೆ ಜೈಲಿನ ಮುದ್ದೆಯೆ ಖಾಯಮ್ಮು!

ಅಭಿಮಾನಿಗಳ ಹೆಸರಲ್ಲಿ ದುನಿಯಾ ವಿಜಿಯ ಪ್ರೊರ್ಕಿ ಗ್ಯಾಂಗ್

...ದರ್ಶನ್‌ನನ್ನು ವಿಜಯನಗರ ಪೊಲೀಸರು ಬಂಧಿಸಿ ಲಾಕಪ್ಪಿಗೆ ...ಸಿದ್ದಾರೆಂಬ ಸುದ್ದಿ ನ್ಯೂಸ್ ಚಾನಲ್ಲುಗಳಲ್ಲಿ ರಾರಾಜಿಸಿದ್ದೇ ತಡ, ವಿಜಯನಗರ ...ಲೀಸ್ ಠಾಣೆಯೆದುರು ಅಭಿಮಾನಿಗಳ ಹುಚ್ಚಾಟ ಶುರುವಾಯಿತಲ್ಲ- ...ಕೇವಲ ಅರ್ಧಗಂಟೆಯೊಳಗೆ ಅಷ್ಟೊಂದು ಅಭಿಮಾನಿಗಳು ಎಲ್ಲಿಂದ ...ದರು? ನಿಜಕ್ಕೂ ದರ್ಶನ್‌ಗೆ ಆ ಪಾಟಿ ಅಭಿಮಾನಿಗಳಿದ್ದಾರಾ? ಇದ್ದರೂ ...ದು ಕಾಲಾವಕಾಶದಲ್ಲಿ ಅಷ್ಟೊಂದು ಮಂದಿ ವಿಜಯನಗರದಲ್ಲಿ ...ಮಾಯಿಸಲು ಸಾಧ್ಯವೇ. ಹಾಗೊಮ್ಮೆ ತಮ್ಮ ಆರಾಧ್ಯ ದೈವನ ಮೇಲಿನ ...ಭಿಮಾನದಿಂದ ಇದ್ದ ಬದ್ದ ಕೆಲಸವೆಲ್ಲ ಬಿಟ್ಟುಬಂದರೂ ಯಾವುದು ನ್ಯಾಯ ...ವುದು ಅನ್ಯಾಯ ಎಂಬುದನ್ನು ಅರ್ಥ ಮಾಡಿಕೊಳ್ಳಲಾರದಷ್ಟು ...ರ್ಬುದ್ಧಿಯೇ? ಪತ್ನಿಯನ್ನು ಅಷ್ಟೊಂದು ಪೈಶಾಚಿಕವಾಗಿ ಹೊಡೆದು ...ಸಿಸಿದ ಹೀರೋನ ಕ್ರೌರ್ಯವನ್ನು ಅಭಿಮಾನಿಗಳಾಗಿ ಖಂಡಿಸದೇ ...ದರೂ ಅದನ್ನು ಸಮರ್ಥಿಸಿಕೊಳ್ಳುವಷ್ಟು ದುಷ್ಟ ಅಭಿಮಾನಿಗಳು ಯಾರೊಬ್ಬ ...ನಿಗಾದರೂ ಇರಲು ಸಾಧ್ಯವೇ?

...ವಿಜಯನಗರದಲ್ಲಿ ದರ್ಶನ್ ಅಭಿಮಾನಿಗಳ ದಾಂಧಲೆ ಕಂಡ ...ಭವರಿಗಾದರೂ ಇಂಥ ಪ್ರಶ್ನೆಗಳೇಳಲೇ ಬೇಕಲ್ಲವೆ?

...ಆದರೆ ಹಕೀಕತ್ತೇ ಬೇರೆಯಿದೆ; ಸೆಪ್ಟೆಂಬರ್ 9 ರ ಶುಕ್ರವಾರ ಬೆಳಿಗ್ಗೆ ...ಸುದ್ದಿ ವಾಹಿನಿಗಳಲ್ಲಿ ದರ್ಶನ್ ಬಂಧನದ ಸುದ್ದಿ ಬಯಲಾಗುತ್ತಿದ್ದಂತೆ ...ವಿಜಯನಗರ ಪೊಲೀಸ್ ಠಾಣೆಯೆದುರು ಅಭಿಮಾನಿಗಳ ಹುಚ್ಚಾಟ ...ಶುರುವಾಯಿತು. ಅವರ್‍ಯಾರೂ ದರ್ಶನ್ ಅಭಿಮಾನಿಗಳಾಗಲಿ, ಕನ್ನಡ ...ಚಿತ್ರರಂಗದ ಹಿತೈಷಿಗಳಾಗಲಿ ಆಗಿರಲಿಲ್ಲ, ಅವರು ಬಾಡಿಗೆ ಬಂಟರು. ...ಸ್ಪಷ್ಟವಾಗಿ ಹೇಳಬೇಕೆಂದರೆ ದುನಿಯಾ ವಿಜಿ ಮತ್ತು ಬುಲೆಟ್ ...ಪ್ರಕಾಶ್ ಕಾಸು ಕೊಟ್ಟು ಕರೆಸಿದ ಶುದ್ಧ ಪುಂಡರು. ನಟನೊಬ್ಬನ ...ಅಭಿಮಾನಿಗಳಿಗೂ ಒಪ್ಪೊತ್ತಿನ ಕುಡಿತಕ್ಕೆ ಏನು ಬೇಕಾದರೂ ಮಾಡುವ ...ಪೋರ್ಕಿಗಳಿಗೂ ವ್ಯತ್ಯಾಸವಿರುತ್ತದೆ.

...ಟೀವಿಗಳಲ್ಲಿ ಸೋಕಾಲ್ಡ್ ದರ್ಶನ್ ಅಭಿಮಾನಿಗಳ ಹಾರಾಟ, ಚೀರಾಟ ...ದ ಯಾರಿಗಾದರೂ ಅಭಿಮಾನಿಗಳ ಹೆಸರಲ್ಲಿ ಯಾರೋ ಪೋರ್ಕಿಗಳನ್ನು ...ಹಾಕಿರುವುದು ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. ದುನಿಯಾ ವಿಜಿಗೆ ಆ ...ದಿಂದಲೂ ಕೆಂಪಾಪುರ ಅಗ್ರಹಾರ, ಮಾಗಡಿ ರೋಡ್ ಮತ್ತು ...ಮಾಕ್ಷಿಪಾಳ್ಯದ ಕೆಲ ಪೋರ್ಕಿ ಗ್ಯಾಂಗುಗಳ ಜೊತೆ ಲಿಂಕಿದೆ. ಹಿಂದೆ ಜೇಕೆ ... ಜೊತೆ ಬಹಿರಂಗವಾಗೇ ಗುರುತಿಸಿಕೊಂಡಿದ್ದ ಈ ರೀತಿ ತರಲೆತಕರಾರು ...ದಾಗೆಲ್ಲ ವಿಜಿ ಪರವಾಗಿ ಪೋರ್ಕಿಗಳನ್ನು ಸೇರಿಸುತ್ತಿದ್ದವನು ಮಾಗಡಿ ... ಚೋಳೂರು ಪಾಳ್ಯದ ಪೆಟ್ರೋಲ್ ಪುಸ್ಸ.

... ಪೆಟ್ರೋಲ್ ಪುಸ್ಸನ ಮೂಲಕವೇ ವಿಜಿ ಮೊದಲ ರೌಂಡ್



ಹುಡುಗರನ್ನು ವಿಜಯನಗರ ಪೊಲೀಸ್ ಠಾಣೆಯೆದುರು ತಂದು ನಿಲ್ಲಿಸಿದ್ದ. ನಂತರ ಬಂದವರು ಕಾಮಾಕ್ಷಿಪಾಳ್ಯದ ಪುಡಿರೌಡಿ ಹೇಮಂತನ ಹುಡುಗರು. ಬೆಳಗ್ಗೆಯೇ ಫೋನ್ ಮಾಡಿ ಉತ್ತರಹಳ್ಳಿ, ಅಗ್ರಹಾರ ದಾಸರಹಳ್ಳಿಯ ಕೆಲ ಪೋರ್ಕಿ ಗ್ಯಾಂಗುಗಳಿಗೂ ವಿಜಿ ಸುದ್ದಿ ಮುಟ್ಟಿಸಿದ್ದರಿಂದ ಹತ್ತು ಗಂಟೆಯ ಹೊತ್ತಿಗೆಲ್ಲಾ ನೆರೆದ ಅಭಿಮಾನಿಗಳ ಸಂಖ್ಯೆ ನೂರನ್ನು ದಾಟಿತ್ತು.

ಇದಕ್ಕೆ ತಕ್ಕಂತೆ ವಿಜಿಗೆ ಸಾತು ಕೊಟ್ಟವನು ಜೋಕರ್ ಬುಲೆಟ್ ಪ್ರಕಾಶ. ಈತನಿಗೆ ಕಾಟನ್‌ಪೇಟೆ, ಚಿಕ್ಕಪೇಟೆ, ಗೋರಿಪಾಳ್ಯದ ಪುಡಿ ರೌಡಿಗಳ ಜೊತೆ ಆಗಿನಿಂದಲೂ ಒಡನಾಟವಿದೆ. ಜೊತೆಗೆ ವಿಜಿಯೇ ಫೋನ್ ಮಾಡಿ ಸಿನಿಮಾ ಶೂಟಿಂಗುಗಳಿಗೆಂದು ದಿನಗೂಲಿ ಆಧಾರದ ಮೇಲೆ ಜನರನ್ನು ಜಮಾಯಿಸುವ ಗಂಗಾಧರ, ಮಾಲಿಂಗು ಥರದವರಿಗೆ ಕಾಂಟ್ರಾಕ್ಟು ಕೊಟ್ಟ. ಎಲ್ಲ ಸೇರಿ ಸಂಖ್ಯೆ ಮುನ್ನೂರರಷ್ಟಾಯಿತು. ಬರುವಾಗಲೇ ಕಂಠಮಟ್ಟ ಕುಡಿಸಲಾಗಿತ್ತು. ಬಿರಿಯಾನಿಯ ಪ್ಯಾಕೆಟ್ಟುಗಳೂ ಸರಬರಾಜಾದವು. ಕುಡಿದು ಚಿತ್ತಾಗಿ ತಾವು ಧಿಕ್ಕಾರ ಕೂಗುತ್ತಿದ್ದದ್ದು ಯಾರಿಗೆ ಜೈಕಾರ ಕೂಗಿದ್ದು ಯಾರಿಗೆಂಬುದೇ ಈ ಭಕ್ತಾದಿಗಳಿಗೆ ಗೊತ್ತಾಗಲಿಲ್ಲ. ಕುಡಿದ ನಶೆಯಲ್ಲಿ ಸಿಕ್ಕಸಿಕ್ಕ ಬಸ್ಸು, ಗಾಡಿಗಳಿಗೆ ಕಲ್ಲು ತೂರತೊಡಗಿದರು. ಪೊಲೀಸರು ಲಾಠಿ ಬೀಸಿದ್ದೇ ತಡ, ಎದ್ದೂ ಬಿದ್ದು ಓಡಿಹೋದರು. ನೆರೆದವರೆಲ್ಲ ಪಕ್ಕಾ ದರ್ಶನ್ ಅಭಿಮಾನಿಗಳೆಂದು ಭಾವಿಸಿ ಟೀವಿಯವರು ಕ್ಯಾಮೆರಾ ಹಿಡಿದರೆ ತಾವು ಬಂದಿದ್ದು ಏನಕ್ಕೆ ಪೊಲೀಸರು ದರ್ಶನ್‌ನನ್ನು ಬಂಧಿಸಿದ್ದು ಏತಕ್ಕೆಂಬುದೇ ಆ 'ಅಭಿಮಾನಿ'ಗೆ ಗೊತ್ತಿರಲಿಲ್ಲ.

ಅಭಿಮಾನಿಗಳ ಹೆಸರಲ್ಲಿ ಪ್ರತಿನಿತ್ಯ ದಿನಗೂಲಿ ಶೂಟಿಂಗಿಗೆ ಬರುವ ಒಂದಷ್ಟು ಮಂದಿ ಹೆಂಗಸರನ್ನು ಠಾಣೆಯೆದುರು ಕರೆಸಲಾಗಿತ್ತು. ಅಂಥ ಹೆಂಗಸರ ಮುಂದೆ ಟೀವಿಯವರು ಮೈಕ್ ಹಿಡಿದರೆ 'ನಮಗೂ ನಮ್ಮನೆ ಗಂಡಸ್ರು ಹೊಡಿಯಾಕಿಲ್ವಾ? ಗಂಡ ಆದೋನು ಹೊಡಿಯೋದು ಮಾಮೂಲು. ಹಾಗಂತ ಪೊಲೀಸ್ರಿಗೆ ಕಂಪ್ಲೇಂಟ್ ಕೊಟ್ರೆ ಮನೆ ಉಳಿಯುತ್ತಾ?' ಎಂದು ಅಸಂಬದ್ಧವಾಗಿ ಹೆಂಗಸೊಬ್ಬಳು ಕಿರುಚತೊಡಗಿದಳು. ಬಂದ ವರದಿಗಾರರ ಪೈಕಿ ಕೆಲವರು ತೀರ ಕೆದಕಿ ಕೇಳಿದರೆ ಆ ಹೆಂಗಸರ ಪೈಕಿ ಒಬ್ಬಾಕೆ 'ನೀವೂ ಕಾಸು ಕೊಡ್ತೀರಾ? ಹೇಳಿ ಯಾರ ವಿರುದ್ಧ ಬೇಕಾದರೂ ಧಿಕ್ಕಾರ ಕೂಗ್ತೀವಿ....!' ಎಂದುಬಿಟ್ಟಳು.

ಅಲ್ಲಿಗೆ ದುನಿಯಾ ವಿಜಿ-ಬುಲೆಟ್ ಪ್ರಕಾಶ್ ಜೋಡಿಯ ಕಳ್ಳಾಟ ಪತ್ರಕರ್ತರಿಗೆ ಗೊತ್ತಾಗಿಹೋಗಿತ್ತು. ಅಷ್ಟಕ್ಕೂ ದರ್ಶನ್ ಅಭಿಮಾನಿಗಳ ಹೆಸರಲ್ಲಿ ಬಾಡಿಗೆ ಬಂಟರನ್ನು ಸೇರಿಸಿ ದಾಂಧಲೆಯೆಬ್ಬಿಸುವ ಹರಕತ್ತು ದುನಿಯಾ ವಿಜಿಗೇನಿತ್ತೋ. ವಿಜಯನಗರದಲ್ಲಿ ಪೊಲೀಸರು ಲಾಠಿ ಬೀಸಿ ಅಭಿಮಾನಿಗಳನ್ನು ಅಟ್ಟಾಡಿಸಿ ಹೊಡೆದದ್ದೇ ತಡ, ವಿಜಿ-ಬುಲೆಟ್ ಪ್ರಕಾಶ್ ಜೋಡಿ ಪ್ರತ್ಯಕ್ಷವಾದದ್ದು ಪರಪ್ಪನ ಅಗ್ರಹಾರ ಜೈಲಿನ ಕಾಂಪೌಂಡಿನಲ್ಲಿ. ಜೈಲಿನೊಳಗೆ ದರ್ಶನ್ ಕಂಬಿ ಎಣಿಸುತ್ತಿದ್ದರೆ ಹೊರಗೆ ವಿಜಿ ತನ್ನ ಕಾರಲ್ಲಿ ಕೂತು ಕೂಗಾಡುತ್ತಿದ್ದ.

ಅನಂತರ ನಿಮಾನ್ಸ್ ಪಕ್ಕದ ಸ್ಯಾನಿಟೋರಿಯಂ ಆಸ್ಪತ್ರೆಗೆ ದರ್ಶನ್ ದಾಖಲಾದ ಮೇಲೂ ಟೀವಿಯವರನ್ನು ಕರೆಸಿ ದರ್ಶನ್ ಅಭಿಮಾನಿಯೆಂದು ಹುಡುಗಿಯೊಬ್ಬಳು ಆತ್ಮಹತ್ಯೆಗೆ ಯತ್ನಿಸಿದ್ದು, ಪುಟ್ಟ ಬಾಲಕಿಯೊಬ್ಬಳು ಶಾಲೆ ಬಿಟ್ಟು ಬಂದದ್ದು ಇತ್ಯಾದಿ ಟೀವಿ ಡ್ರಾಮಾಗಳಿಗೆಲ್ಲ ವಿಜಿ ಮತ್ತು ಬುಲೆಟ್‌ರೇ ಡೈರೆಕ್ಟರುಗಳಂತಿದ್ದರು. ಕಾಸು ಕೊಟ್ಟು ಕರೆಸಿದ ಜನಕ್ಕೂ ನಿಜ ಭಕ್ತರಿಗೂ ವ್ಯತ್ಯಾಸವಿರುತ್ತದೆಯಲ್ಲವೇ? ಮೊದಲೆರಡು ದಿನ ಹಾರಾಟ, ಚೀರಾಟ ಮಾಡಿದ ಬಾಡಿಗೆ ಅಭಿಮಾನಿಗಳೆಲ್ಲ ಮೂರನೇ ದಿನಕ್ಕೆ ನಾಪತ್ತೆಯಾಗಿದ್ದರು!

ಹೀಗೊಂದು ಎಸ್ಸೆಮ್ಮೆಸ್!

ದರ್ಶನ್ ಜೈಲುಪಾಲಾಗಿದ್ದು ಮತ್ತು ಆತನ ಸೋಕಾಲ್ಡ್ ಅಭಿಮಾನಿಗಳ ವರ್ತನೆಗೆ ಸಂಬಂಧಪಟ್ಟಂತೆ ಸದ್ಯ ಮೊಬೈಲ್ ಟು ಮೊಬೈಲ್ ಹರಿದಾಡುತ್ತಿರುವ ಎಸ್ಸೆಮ್ಮೆಸ್ ಒಂದು ಹೀಗಿದೆ.

ಹುಡುಗಿ-ಐ ಲವ್ ಯೂ.....!
ಹುಡುಗ-ಸಾರಿ; ನಾನು ಪೋರ್ಕಿ.
ಹುಡುಗಿ-ಇಟ್ಸ್ ಓಕೆ, ಐ ಲವ್ ಯೂ.
ಹುಡುಗ-ನಾನು ವೇಸ್ಟ್ ಬಾಡಿ.
ಹುಡುಗಿ- ಆದ್ರೂ ಪರವಾಗಿಲ್ಲ ಐ ಲವ್ ಯೂ.
ಹುಡುಗ-ನಾನು ಹಂಡ್ರೆಡ್ ಪರ್ಸೆಂಟ್ ಲೋಫರ್!
ಹುಡುಗಿ- ಐ ಲವ್ ಯೂ ಕಣೋ.
ಹುಡುಗ-ನಾನು ದರ್ಶನ್ ಅಭಿಮಾನಿ....!
ಹುಡುಗಿ- ಹೌದಾ; ಸಾರೀ ಅಣ್ಣಾ... ಗುಡ್ ಬೈ!!

ಎಷ್ಟೇ ಬಾಡಿಗೆ ಬಂಟರನ್ನು ಸೇರಿಸಿ ಅಭಿಮಾನಿಗಳ ಹೆಸರಲ್ಲಿ ಏನೇ ಜೈಕಾರ ಹಾಕಿಸಿಕೊಂಡರೂ ಅದಕ್ಕೆ ಜನರ ಪ್ರತಿಕ್ರಿಯೆ ಹೇಗಿರುತ್ತದೆ ಎಂಬುದಕ್ಕೆ ಈ ಎಸ್ಸೆಮ್ಮೆಸ್‌ಗಿಂತ ಬೇರೆ ನಿದರ್ಶನ ಬೇಕೆ?



ಡೀವಿಗೆ ಹಿಂಬಾಗಿಲು ತೋರಿಸುತ್ತಿದೆ ಯಡ್ಡಿ-ಶೋಭಾ ಜೋಡಿ!



ಡೀವಿಯೇನಾದರೂ ಪುತ್ತೂರಿಗೆ ಗಂಟುಬಿದ್ದರೆ ತನ್ನ ಆಸೆಗೆ ಕಲ್ಲು ಬೀಳುತ್ತದೆಂದು ಶೋಭಾ 'ಗಾಡ್‌ಫ್ರೆಂಡ್' ಯಡ್ಡಿ ಮೂಲಕ ಡೀವಿಗೆ ಬೆದರಿಕೆ ಹಾಕಿಸುತ್ತಿದ್ದಾರೆ. ಯಡ್ಡಿ ನೇರಾನೇರವಾಗಿ ಡೀವಿಗೆ ಕೆನ್ನೆಗೆ ಬಾರಿಸಿದಂತೆ ಪುತ್ತೂರಿನ ಉಸಾಬರಿಗೆ ಹೋಗಬೇಡ ಎಂದು ತಾಕೀತು ಮಾಡಿದ್ದಾರೆ. ಹಾಗೇನಾದರೂ ವಿಧಾನಮಂಡಲದ ಯಾವುದಾದರೂ ಸದನದ ಸದಸ್ಯನಾಗಬೇಕಾಗಿ ಬಂದರೆ ವಿಧಾನ ಪರಿಷತ್‌ಗೆ ಹೋಗು ಎಂದೂ ಯಡ್ಡಿ ಹಿಂಬಾಗಿಲು ತೋರಿಸಿದ್ದಾರೆ ಡೀವಿಗೆ.



ಕನ್ನಡ ಕುಲಕೋಟಿಯ ಬೇನಾಮಿ ಮುಖ್ಯಮಂತ್ರಿ ಸದಾನಂದಗೌಡ ಒಂದಾರು ತಿಂಗಳೂ ಸಿಎಂ ಸೀಟಲ್ಲಿ ಇರುವುದಿಲ್ಲವಾ?

ಇಂಥದೊಂದು ಅನುಮಾನ ನಾಡ ಜನರನ್ನಷ್ಟೇ ಅಲ್ಲ, ಸ್ವತಃ ಡಿವಿಎಸ್ ಗೌಡರನ್ನೂ ಕಾಡುತ್ತಿದೆ. ಅದಕ್ಕೇ ಆತ ಉಡುಪಿ-ಚಿಕ್ಕಮಗಳೂರು ಪಾರ್ಲಿಮೆಂಟ್ ಕ್ಷೇತ್ರದ ಮೆಂಬರಿಕೆಗೆ ರಾಜೀನಾಮೆ ಕೊಡದೆ ಕಾದು ನೋಡುತ್ತಿದ್ದಾರೆ ತನ್ನ ಹಣೆಬರಹ, ಪಾಪ! ಅಡಿಗಡಿಗೆ ಅನೈತಿಕ-ಅಕ್ರಮ ರಾಜಕಾರಣದ ಪಿತಾಮಹ ಯಡ್ಡೀಜಿ ಹೇಳಿದಂತೆ ಹೆಜ್ಜೆ ಹಾಕುತ್ತಿರುವ ಈ ಹೆಡ್ಡ ಮುಖ್ಯಮಂತ್ರಿ ಈಗ ಪಕ್ಕಾ ತ್ರಿಶಂಕು ಸ್ವರ್ಗದಲ್ಲಿ ನೇತಾಡುತ್ತಿರುವುದು ಮೋಜಾಗಿದೆ.....

ಡಿವಿಎಸ್ ಮುಖ್ಯಮಂತ್ರಿಯಾಗಿ ಮುಂದುವರಿಯಬೇಕೆಂದಿದ್ದರೆ ಆರು ತಿಂಗಳಲ್ಲಿ ತನ್ನ ಎಂಪಿ ಸ್ಥಾನ ತೊರೆದು ವಿಧಾನಮಂಡಲದ ಅಸೆಂಬ್ಲಿ ಅಥವಾ ಕೌನ್ಸಿಲ್‌ಗೆ ಆಯ್ಕೆ ಆಗಲೇಬೇಕು. ಇದು ಪ್ರಜಾಪ್ರಭುತ್ವದ ಕಡ್ಡಾಯ ನಿಯಮ. ಆದರೆ ಡಿವಿಎಸ್ ಗೊಂದಲಕ್ಕೆ ಬಿದ್ದಿದ್ದಾರೆ. ಆತ ಸಿಎಂ ಆಗುತ್ತಲೇ ಸೈತಾನ ಯಡ್ಡಿ "ಇನ್ನಾರು ತಿಂಗಳಲ್ಲಿ ನಾನೇ ಸಿಎಂ" ಎಂದು ಥ್ರೆಟ್ ಕೊಟ್ಟಿದ್ದರಲ್ಲ, ಅದು ಡಿವಿಯನ್ನು ಕನಸಲ್ಲೂ ಬೆಚ್ಚಿಬೀಳಿಸುತ್ತಿದೆ. ಆದರೂ ಆರಂಭದಲ್ಲಿ ತವರೂರು ದಕ್ಷಿಣ ಕನ್ನಡದ ಪುತ್ತೂರು ಕ್ಷೇತ್ರದಿಂದ ಅಸೆಂಬ್ಲಿಗೆ ಗೆದ್ದುಬರುವ ಪ್ಲಾನು ಆತ ಹಾಕಿಕೊಂಡಿದ್ದರು.



ಮಲ್ಲಿಕಾ ಪ್ರಸಾದ್

ಪುತ್ತೂರು ಕ್ಷೇತ್ರದ ಬಿಜೆಪಿ ಶಾಸಕಿ ಮಲ್ಲಿಕಾ ಪ್ರಸಾದ್ ಭಂಡಾರಿ ಎಂಬ ಬಂಟರ ಹೆಣ್ಣು ಗಂಡ ಡಾ. ಪ್ರಸಾದ್‌ರ ಚೆಡ್ಡಿದೋಸ್ತ್ ಡೀವಿಗಾಗಿ ತನ್ನ 'ಸ್ಥಾನ-ಮಾನ' ಎರಡೂ ಬಿಡಲು ರೆಡಿಯಾಗಿದ್ದಳು. ಈ ಪ್ರಸಾದ್ ಭಂಡಾರಿ ಪುತ್ತೂರಿನ ಪ್ರಳಯಾಂತಕ ಹಿಂದೂ ಹಿರೇಮಣಿ. ಡೀವಿಯಷ್ಟೇ 'ಬೆಂಕಿ' ಭಾಷಣಕಾರ. ಪುತ್ತೂರು-ಸುಳ್ಯ ಕೋಮುವಾದಿ 'ಕರ್ಮಭೂಮಿ'ಯಾಗಿಸಿದ ಡೀವಿ ಕೀರ್ತಿಯಲ್ಲಿ ಅರ್ಧ ಪಾಲು ಈ ಪುಂಡ ಡಾಕ್ಟರ್‌ಗೆ ಸಲ್ಲಲೇಬೇಕು. ಸಿಎಂ ಡಿವಿಗಾಗಿ ಎಮ್ಮೆಲ್ಲೆಗಿರಿ ತೆರೆವ ಪರಿಸ್ಥಿತಿ ಬರುತ್ತದೆಂದಾಗ ಮಲ್ಲಿಕಾ-ಪ್ರಸಾದ್ ಒಂಚೂರು ಬೇಸರ ಮಾಡಲಿಲ್ಲ, ಬದಲಿಗೆ ಸಿಎಂ ಅಂತಃಪುರದಲ್ಲಿ ಜಬರ್ದಸ್ತ್ ಅಧಿಕಾರ ಸ್ಥಾನಕ್ಕೇರುವ ಕನಸು ಈ ಚೆಡ್ಡಿ ದಂಪತಿ ಕಾಣತೊಡಗಿದ್ದರು.

ಸದಾನಂದಗೌಡ ಪುತ್ತೂರಿಂದ ಮತ್ತೆ ಶಾಸಕನಾಗಲು ಕಸರತ್ತು ಶುರು ಹಚ್ಚಿಕೊಂಡಾಗ ಬೆಚ್ಚಿ ಬಿದ್ದಿದ್ದು ಮಾತ್ರ ಯಡ್ಡಿ ಮತ್ತವರ ಅಂತರಂಗ ಆತ್ಯಾಪ್ತೆ ಶೋಭಾ ಕರಂದ್ಲಾಜೆ! ಇದಕ್ಕಿರುವ ಕಾರಣ ತುಂಬ ಕುತೂಹಲಕರವಾಗಿದೆ. ಶೋಭಾ ಮತ್ತು ಡೀವಿ ಇಬ್ಬರೂ ಸುಳ್ಯ-ಪುತ್ತೂರಲ್ಲಿ ಹೆಚ್ಚಿರುವ ಅರೆಭಾಷೆ ಗೌಡ ಪಂಗಡದವರು. ಈ ಗೌಡರ ನಾಯಕತ್ವಕ್ಕೆ ಇವರಿಬ್ಬರೊಳಗೆ ಮುಸುಕಿನ ಗುದ್ದಾಟ ಇದ್ದೇ ಇದೆ. ಆದರೆ ಯಡ್ಡಿ ಗ್ಯಾಂಗಲ್ಲಿ ಇಬ್ಬರೂ ಇರುವುದರಿಂದ ಮೇಲ್ನೋಟಕ್ಕೆ ಇಬ್ಬರೂ ಹಲ್ಲುಕಿಸಿಯುತ್ತ ಸಾಮರಸ್ಯ ಪ್ರದರ್ಶಿಸುತ್ತಿದ್ದಾರೆ. ಡೀವಿ ಜೊತೆ ಸ್ಪರ್ಧೆಗೆ ಬಿದ್ದಂತೆ ಹಲ್ಲು ತೋರಿಸಿ ನಗುವ ಶೋಭಕ್ಕನಿಗೆ ಆತ ಮತ್ತೆ ಪುತ್ತೂರು ಅಸೆಂಬ್ಲಿ ಮೆಂಬರನಾಗುವುದು ಬೇಡವಾಗಿದೆ.

ಕಾರಣ ಏನು ಗೊತ್ತಾ? ಶೋಭಾ ತನ್ನ ತವರು ಕ್ಷೇತ್ರ ಪುತ್ತೂರಿಂದ ಶಾಸಕಿ ಆಗುವ ದೂ(ರು)ರಾಲೋಚನೆ ಹಾಕಿಕೊಂಡಿದ್ದಾರೆ. ಸ್ವಜಾತಿ ಬಾಂಧವರೇ ಬಹುಸಂಖ್ಯಾತರಾಗಿರುವ ಪುತ್ತೂರು ಎಲ್ಲ ದೃಷ್ಟಿಯಿಂದಲೂ ಸೇಫ್ ಎಂಬುದು ಆಕೆಯ ಲೆಕ್ಕಾಚಾರ. ಯಡ್ಡಿಯ ದುಡ್ಡು ದೋಚುವ ಕಳ್ಳಾಟದ ಪ್ರಮುಖ ಪ್ಲೇಯರ್ ಎನಿಸಿಕೊಂಡಿರುವ ಶೋಭಾರ ಹೆಸರು ಬೆಂಗಳೂರಿನ ಯಶವಂತಪುರ ಕ್ಷೇತ್ರದಲ್ಲಿ ಸಾಕಷ್ಟು ಕೆಟ್ಟಿದೆ. ಅಲ್ಲಾಕೆ ಹೊರಗಿನವಳೆಂಬ ಕೂಗು ಬಿಜೆಪಿ ವಲಯದಲ್ಲೇ ಗುಸುಗುಟ್ಟುತ್ತಿದೆ. ಒಂದು ಗ್ಯಾಂಗಂತೂ ಶೋಭಾಳನ್ನು ಯಶವಂತಪುರದಿಂದ ಒದ್ದೋಡಿಸಲು ಏನೆಲ್ಲ ಸಾಧ್ಯವೋ ಅದೆಲ್ಲ ಮಾಡುತ್ತಿದೆ. ಕಳೆದ ಜಿಲ್ಲಾ ಪಂಚಾಯ್ತಿ ಇಲೆಕ್ಷನ್‌ನಲ್ಲಿ ಶೋಭಾಗೆ ಭರ್ಜರಿ ಮುಖಭಂಗವೂ ಆಗಿದೆ. ಹಾಗಾಗಿ ಆಕೆಗೆ ಯಶವಂತಪುರದಿಂದ ಮತ್ತೆ ಗೆದ್ದು ಬರುವ ಧೈರ್ಯ ಒಂಚೂರೂ ಇಲ್ಲದಾಗಿದೆ.




ಭಾರತಿ ಶೆಟ್ಟಿ

ಯಡ್ಡಿ ಸಿಎಂ ಆಗಿದ್ದಾಗ ಆಕೆ ಬುಲ್ಡೋಜರ್‌ನಂತೆ ಎದುರಾಳಿಗಳ ಮೇಲೆಲ್ಲ ನುಗ್ಗುತ್ತಿದ್ದರು. ಅಸೆಂಬ್ಲಿಗೆ ನಿಲ್ಲಲು ಬಿಜೆಪಿ ಸೀಟು ಸಲೀಸಾಗಿ ಸಿಗುತ್ತಿತ್ತು ಯಡ್ಡಿ ಪಾರ್ಟಿಯಲ್ಲಿ ಬಿಗಿ ಉಳಿಸಿಕೊಂಡಿದ್ದರೆ. ಆದರೀಗ ಮುದಿ ಸಖನಿಗೂ ಬಿಜೆಪಿಯಲ್ಲಿ ಬೆಲೆ ಇಲ್ಲದಾಗುತ್ತಿದೆ. ಹೀಗಾಗಿ ಶೋಭಾ ಈಗ ಶಿವನ ಕೊರಳಿಂದ ತಪ್ಪಿಸಿಕೊಂಡ ಸರ್ಪದಂತಾಗಿದ್ದಾಳೆ. ಆಕೆಯನ್ನು ಕಚ್ಚಿಕೊಂಡು ಹೋಗಿ ತಿನ್ನಲು ಗರುಡಗಳ ಸಾಲೇ ಸಮಯ ಸಾಧಿಸುತ್ತಿವೆಯಂತೆ. ಹೀಗಾಗಿ ಆತಂಕಿತಳಾಗಿರುವ ಶೋಭಾ ಪುತ್ತೂರಿನ ಮೇಲೆ ಕಣ್ಣಿಟ್ಟು ಮನಸ್ಸಿನಲ್ಲೇ ಮಂಡಿಗೆ ತಿನ್ನುತ್ತಿದ್ದಾಳಂತೆ. ಹಾಗಂತ ಕೇಶವಕೃಪ ಮತ್ತು ಕಲ್ಲಡ್ಕದ ಚೆಡ್ಡಿ ಹೆಡ್‌ಕ್ವಾಟರ್ಸ್‌ಗಳ ಸನಾತನಿಗಳು ಹೇಳುತ್ತ ನಗಾಡುತ್ತಿದ್ದಾರೆ.

ಅದೇನೇ ಇರಲಿ; ಶೋಭಾರಿಗೆ ಯಶವಂತಪುರ ಬಿಜೆಪಿ ಅಸೆಂಬ್ಲಿ ಟಿಕೆಟ್ ಸಿಗುವುದು-ಅಲ್ಲಿಂದ ಗೆಲ್ಲುವುದು ಎರಡೂ ನಂಬಿಕೆ ಇಲ್ಲದಿರುವುದಂತೂ ಖರೆ. ತವರು ಪುತ್ತೂರು ಕೋಮುವಾದ, ಕಾಂಗ್ರೆಸ್ ದೌರ್ಬಲ್ಯ ಮತ್ತು ಜಾತಿ (ಗೌಡ) ಓಟ್‌ಬ್ಯಾಂಕ್‌ನಿಂದಾಗಿ ಸುರಕ್ಷಿತ ಎಂದಾಕೆ ಕನಸು ಕಾಣುತ್ತಿದ್ದಾರೆ. ಆದರೆ ಸೀನಿಯರ್ ಡೀವಿ ಏನಾದರೂ ಮತ್ತೆ ಪುತ್ತೂರಿಗೆ ವಕ್ಕರಿಸಿದರೆ ತನ್ನ ಪ್ಲಾನ್ ಫ್ಲಾಪ್ ಆಗುತ್ತದೆಂಬ ಆತಂಕ ಆಕೆಯನ್ನು ಕಾಡುತ್ತಿದೆ. ಒಮ್ಮೆ ಉಡುಪಿ-ಚಿಕ್ಕಮಗಳೂರಿನ ಸಂಸದ ಸ್ಥಾನಕ್ಕೆ ಡೀವಿ ಎಳ್ಳು ನೀರು ಬಿಟ್ಟು ಬಂದರೆ ಪುತ್ತೂರಲ್ಲೇ ಗೂಟ ಜಡಿದು ಕೂರುವುದು ಖಾತ್ರಿ. ಇದಕ್ಕೆ ಕಾರಣವೂ ಇದೆ. ಕಳೆದ ಬಾರಿ ಸತತ ಆರೆಂಟು ತಿಂಗಳು ಚುನಾವಣಾ ತಯಾರಿ ಮಾಡಿದರೂ ಡೀವಿ ಉಡುಪಿ-ಚಿಕ್ಕಮಗಳೂರಲ್ಲಿ ಗೆದ್ದಿದ್ದು ಬರೇ ಇಪ್ಪತ್ತು ಸಾವಿರ ಚಿಲ್ಲರೆ ಮತದಿಂದ. ಹೀಗಾಗಿ ಆತನಿಗೆ ಮತ್ತೆ ಈ ಕ್ಷೇತ್ರದಿಂದ ಎಂಪಿ ಆಗುವ ನಂಬಿಕೆಯೇ ಉಳಿದಿಲ್ಲ, ಅದಕ್ಕೆ ಇರಬೇಕು ಡೀವಿ ಹಿಂದೊಮ್ಮೆ ನಾನಿನ್ನು ಪಾರ್ಲಿಮೆಂಟಿಗೆ ಸ್ಪರ್ಧಿಸುವುದಿಲ್ಲ; ಯುವಕರಿಗೆ ಸ್ಥಾನ ಬಿಟ್ಟುಕೊಡುತ್ತೇನೆಂದು ತನ್ನ 'ಮಾನ'ಗೇಡಿತನ ತೋರಿಸಿಕೊಂಡಿದ್ದರು.


ಹಾಗೆಯೇ ಸ್ವಂತ ಕ್ಷೇತ್ರ ಮಂಗಳೂರಲ್ಲಂತೂ ಡೀವಿಗೆ ಸ್ಪರ್ಧಿಸಿ ಗೆಲ್ಲುವ ಯಾವ ತಾಕತ್ತೂ ಇಲ್ಲ. ಈ ಕ್ಷೇತ್ರದಲ್ಲಿರುವ ಅಲ್ಪಸಂಖ್ಯಾತರ ಮತ ಬಾಹುಳ್ಯ ಕಂಡೇ ಆತ ಇಲ್ಲಿಂದ ಕಾಲು ಕಿತ್ತಿದ್ದು. ಜತೆಗೆ ಪಕ್ಕಾ ಚೆಡ್ಡಿಯಾದರೂ ಶ್ರೀರಾಮಸೇನೆ ಮತ್ತು ಪುತ್ತೂರು ಭಾಗದಲ್ಲಿ ಗುರು ರಾಮಭಟ್ಟರಿಗೇ ತಿರುಮಂತ್ರ ಹಾಕಿದ ಸಿಟ್ಟು ಒರಿಜಿನಲ್ ಹಿಂದೂತ್ವವಾದಿಗಳಿಗಿದೆ. ಮಾಜಿ ಶಾಸಕಿ ಶಕುಂತಲಾ ಶೆಟ್ಟಿಯನ್ನು ಬಿಜೆಪಿಯಿಂದ ಹೊರಹಾಕಿದ್ದು ಡೀವಿಯೇ ಎಂಬ ಸಿಟ್ಟು ಬಂಟರಲ್ಲಿದೆ. ಅದಕ್ಕಿಂತ ಹೆಚ್ಚಾಗಿ ಪಕ್ಕಾ ಬ್ರಾಹ್ಮಣ ರಾಮಭಟ್ ಎಂಬ 'ಬಿಜೆಪಿ ಉಳಿಸಿ ವೇದಿಕೆ'ಯ ಅಧ್ವರ್ಯ ರಾಮಭಟ್ ಬಳಗದ ಪ್ರಕಾರ ಡೀವಿ ಖೋಟಾ ಚೆಡ್ಡಿ; ನಕಲಿ ಹಿಂದೂತ್ವವಾದಿ.

ಈ ಎಲ್ಲ ಕಾರಣಗಳಿಂದ ಡೀವಿಗೆ ಉಡುಪಿ ಮತ್ತು ಮಂಗಳೂರು ಎರಡೂ ಕ್ಷೇತ್ರದಿಂದ ಎಂಪಿ ಆಗುವ ಅವಕಾಶವೇ ಇಲ್ಲದಾಗಿದೆ. ಹಾಗಾಗಿ ಆತ ಪುತ್ತೂರು ಕ್ಷೇತ್ರದಿಂದ ಸಿಎಂ ಆಗಿರುವಾಗ ಶಾಸಕನಾಗಿಬಿಟ್ಟರೆ ಮುಂದೆಂದೂ ಆತನನ್ನು ಅಲ್ಲಿಂದ ತೆರವುಗೊಳಿಸಲಾಗದೆಂಬ ಅಸ್ತಿತ್ವದ ಯೋಜನೆ-ಯೋಚನೆ ಶೋಭಾ ಕರಂದ್ಲಾಜೆಯದು. ಡೀವಿಯೇನಾದರೂ ಪುತ್ತೂರಿಗೆ ಗಂಟುಬಿದ್ದರೆ ತನ್ನ ಆಸೆಗೆ ಕಲ್ಲು ಬೀಳುತ್ತದೆಂದು ಶೋಭಾ 'ಗಾಡ್‌ಫ್ರೆಂಡ್' ಯಡ್ಡಿ ಮೂಲಕ ಡೀವಿಗೆ ಬೆದರಿಕೆ ಹಾಕಿಸುತ್ತಿದ್ದಾರೆ. ಯಡ್ಡಿ ನೇರಾನೇರವಾಗಿ ಡೀವಿ ಕೆನ್ನೆಗೆ ಬಾರಿಸಿದಂತೆ ಪುತ್ತೂರಿನ ಉಸಾಬರಿಗೆ ಹೋಗಬೇಡ ಎಂದು ತಾಕೀತು ಮಾಡಿದ್ದಾರೆ. ಹಾಗೇನಾದರೂ ವಿಧಾನಮಂಡಲದ ಯಾವುದಾದರೂ ಸದನದ ಸದಸ್ಯನಾಗಬೇಕಾಗಿ ಬಂದರೆ ವಿಧಾನ ಪರಿಷತ್‌ಗೆ ಹೋಗು ಎಂದೂ ಯಡ್ಡಿ ಹಿಂಬಾಗಿಲು ತೋರಿಸಿದ್ದಾರೆ ಡೀವಿಗೆ.



ಪಾಲೇಮಾರ್

ಹೀಗಾಗಿ ಸಿಎಂ ಡೀವಿ ಗೊಂದಲಕ್ಕೆ ಬಿದ್ದು ಒದ್ದಾಡುತ್ತಿದ್ದಾರೆ. ಉಡುಪಿ-ಮಂಗಳೂರು ಜಿಲ್ಲೆಯ ಮಂತ್ರಿ ಪಾಲೇಮಾರ್ ಆದಿಯಾಗಿ ಹಲವು ಬಿಜೆಪಿ ಶಾಸಕರು ಸಿಎಂ ಸದಾಗಾಗಿ ಶಾಸಕಗಿರಿ ತೊರೆಯಲು ರೆಡಿಯಿದ್ದಾರೆ. ಆದರೆ ಪುತ್ತೂರು ಬಿಟ್ಟು ಉಳಿದೆಡೆಯಿಂದ ಸ್ಪರ್ಧಿಸಲು ಅಳ್ಳೆದೆಯ ಡೀವಿಗೆ ಅಳುಕು ಕಾಡುತ್ತಿದೆ. ಎಂಪಿಗಿರಿಗೆ ರಾಜೀನಾಮೆ ಬೀಸಾಕಲಿಕ್ಕೂ ಮನಸ್ಸಿಲ್ಲ; ರಾಜ್ಯ ಬಿಜೆಪಿಯಲ್ಲಿ ದಿನಕ್ಕೊಂದರಂತೆ ಆಗುತ್ತಿರುವ ಕಂಪನ-ಆಕ್ರಂದನಗಳಿಂದ ಮತ್ತು ಯಡ್ಡಿಯ ಹೊಟ್ಟೆಕಿಚ್ಚಿನ ಕಾಲೆಳೆಯುವಿಕೆಯಿಂದ ಎಲ್ಲಿ ಅಸೆಂಬ್ಲಿಯನ್ನೇ ವಿಸರ್ಜಿಸಬೇಕಾಗುತ್ತದೋ ಎಂಬ



ರಾಮಭಟ್ಟ ಶಕುಂತಲಾ ಶೆಟ್ಟಿ

ಭಯದಲ್ಲಿ ಡೀವಿ ನಡುಗುತ್ತಿದ್ದಾರೆ. ಆರು ತಿಂಗಳಿ ಹೆಚ್ಚುಕಾಲ ಸಿಎಂ ಗದ್ದುಗೆಯಲ್ಲಿ ಉಳಿವ 'ಯೋ ಬಂದರೆ ಎಮ್ಮೆಲ್ಸಿ ಆಗುವುದೆಂಬ ತೀರ್ಮಾನಕ್ಕೆ ಡಿವಿಎಸ್ ಗೌಡ ಬಂದಿದ್ದಾರೆ. ಆದರೆ ಸಂಸದಕೂ ರಾಜೀನಾಮೆ ಕೊಡದೆ ಮೀನಮೇಷ ಎಣಿಸುತ್ತಿದ ಸರ್ಕಾರ ಪತನವಾದರೆ ಅಲ್ಲೂ ಇಲ್ಲದೆ, ಇಲ್ಲೂ ಇಲ್ಲದೇ ಬೀದಿ ಪಾಲಾಗಬೇಕಾದೀತೆಂಬ ಭಯ ಡಿವಿಗೆ.

ಡಿವಿ ಪುತ್ತೂರು ಪ್ರವೇಶ ತಡೆಯಲು ಶೋಭಾ ಜೋಡಿ ಆತನಿಗಾಗಿ 'ಬಲಿಪಶು' ಎಮ್ಮೆ ಹುಡುಕಾಡುತ್ತಿದ್ದಾರೆ. ಶೋಭಾ ತನ್ನ ಗೆಳತಿ ಭಾರತಿ ಸಿಎಂಗಾಗಿ ತ್ಯಾಗ ಮಾಡಲು ಮನವೊಲಿಸಿದ್ದಾರೆ. ರ ವರೆಗೆ ಎಮ್ಮೆಲ್ಸಿಗಿರಿ ಇರುವ ಭಾರತಿಗೆ ಮತ್ತೆ ಜೂ ಅಖಂಡ ಆರು ವರ್ಷದ ಟರ್ಮ್‌ನ ಸ್ಥಾನ- ಕೊಡಿಸುವ ಭರವಸೆ ಕೊಡಲಾಗಿದೆ. ಅಲ್ಲಿಯ ಯಾವುದಾದರೂ ಒಂದು ಪುಟಗೋಸಿ ಆಫೀಸು-ಫ್ರೆ ಗೂಟದ ಕಾರು ಇರುವ ಬೊಕ್ಕಸಕ್ಕೆ ದಂಡ ಮ ನಿಗಮ-ಮಂಡಲಿ ಭಾರತಿ ಶೆಟ್ ಸೇವೆಗೆ 'ಟಿಪ್ಸ್' ಆಗಿ ಸಿಗಲಿ

ಒಟ್ಟಿನಲ್ಲಿ ಗುಲಾಮಗಿರಿಗೆ ತನ್ನನ್ನು ಅಡ್ಜಸ್ಟ್ ಮಾಡಿಕೊಂ ಡೀವಿಯ ಪೀಕಲಾಟ ಒಂದೆ ಸಿಎಂನಂಥ ಪವರ್‌ಫುಲ್ ಪೋಸ್ಟ್‌ನಲ್ಲಿದ್ದರೂ ಆತ ಯಡ್ಡಿ-ಶೋಭಾ ಆಣತಿ-ಆದೆ ಬಾಸ್‌ಗಿರಿಯಿಂದ ಒಂಥರಾ ತಿರಬೋಕಿಯಂತಾಗಿದ್ದಾರೆ, ಪ ಗರ್ಭಗುಡಿ ಸಂಸ್ಕೃತಿಯ ಬಿಜೆಪಿಯಲ್ಲಿ ಡೀವಿಗೆ ಆಗುತ್ತಿ ಹಿಂಸೆ-ಕಿರುಕುಳ ಚೆಡ್ಡಿಗಳ ಗುಲಾಮಗಿರಿ ರಾಜಕೀ ದಾಳವಾಗುತ್ತಿರುವ ಬ್ಯಾಕ್‌ವರ್ಡ್ ಪುಢಾರಿಗಳಿಗೆ ಪಾಠವಾದೀತಾ? ಕತ್ತಲಲ್ಲಿ ಕೋಲು ಕಳಕೊಂಡ ಕುರುಡನಂತೆ ತಡಕಾಡುತ್ತಿರುವ ಡೀವಿಯ ದುರ ನಗುವುದೋ? ಅಳುವುದೋ?

• ನರ

ಮಂಡ್ಯ: ದೇವೇಗೌಡರ ಅಳಿಯ ಪ್ರಭುವಿನ ಐಲಾಟಕ್ಕೆ ಸರ್ವೇಯರ್‌ಗಳು ಬಲಿ!



ಪಾಂಡವಪುರದ ಉಪವಿಭಾಗಾಧಿಕಾರಿ ಜಿ.ಪ್ರಭು ನಾಗಮಂಗಲದಿಂದ ವರ್ಗಾವಣೆಗೊಂಡಿರುವ ...ಲ್ದಾರ್ ಎಂ.ಎಸ್.ಎನ್.ಬಾಬು ಎಂಬಿಬ್ಬರು ಭ್ರಷ್ಟ ...ರಗಳ ಕಚ್ಚಾಟ ಬಹಿರಂಗವಾಗಿ ನಡೆಯತೊಡಗಿದೆ. ...ಬ್ಬರು ತಮ್ಮ ಅಧಿಕಾರಾವಧಿಯಲ್ಲಿ ಪರಸ್ಪರ ಮಾಡಿಟ್ಟ ಅಕ್ರಮಗಳನ್ನು ತಾವೇ ಬಹಿರಂಗಪಡಿಸತೊಡಗಿದ್ದಾರೆ. ...ರ ಐಲಾಟಗಳಿಗೆ ಐವರು ಸರ್ವೇಯರ್‌ಗಳು ...ಗುವ ಭೀತಿಯಲ್ಲಿದ್ದಾರೆ. ಸಮ... ಮೂಲವನ್ನು ಕೆದಕಿ ಇಬ್ಬರು ...ಗಳ ಮೇಲೂ ಸೂಕ್ತ ಕ್ರಮ ...ಬೇಕಾಗಿದ್ದ ಜಿಲ್ಲಾಡಳಿತ ಮತ್ತು ...ಯು ಇಲಾಖೆಗಳು ವಾತ್ರ ...ತಕ್ಕೆ ಶರಣಾಗಿವೆ.



ಪುಟ್ಟರಾಜು

...ರ ಜಗಳದಿಂದಾಗಿ ಮಂಡ್ಯ ... ಪಾಂಡವಪುರ ಉಪವಿಭಾಗದ ...ನಾಗಮಂಗಲ ತಾಲ್ಲೂಕುಗಳಲ್ಲಿ ...ವ ಸರ್ಕಾರಿ ಗೋಮಾಳ ... ಪರಭಾರೆ ಮತ್ತು ...ರಣದ ಒಂದೊಂದೇ ...ಗಳು ಬೆಳಕಿಗೆ ಬರತೊಡಗಿವೆ. ...ಳದಿಂದಾಗಿ ಭೂಮಾಪಕ ಸುಬ್ರಮಣ್ಯಚಾರ್, ...ಕರ್, ರಾಮಚಂದ್ರ, ಗ್ರಾಮ ಲೆಕ್ಕಿಗ ಜಗದೀಶ್ ...ಬೂಂದು ಜವಾನ ಮಲ್ಲೇಗೌಡ ಜೈಲಿಗೂ ...ಬಂದಿದ್ದಾರೆ.

... ಪ್ರಭು ಮತ್ತು ತಹಶೀಲ್ದಾರ್ ಬಾಬುರ ಹಿನ್ನೆಲೆ ... ಕೆದಕುತ್ತಾ ಹೋದರೆ ಒಬ್ಬೊಬ್ಬರದ್ದೂ ಕರಾಳ ...ಳೇ ಸಿಗುತ್ತವೆ. ಪಾಂಡವಪುರದ ಉಪವಿಭಾಗಾಧಿಕಾರಿ ...ಮ ಹೇಳಿಕೇಳಿ ಕೆಪಿಎಸ್‌ಸಿಯ ತಾಳಿಭಾಗ್ಯ ...ನೆಯಿಂದ ಎಸಿಯಾಗಿರುವ ಆಸಾಮಿ. ಈ ತಾಳಿಭಾಗ್ಯ ...ನೆಯಲ್ಲಿ ಪ್ರಭುವಿನ ಕೈಹಿಡಿದು ಸಂಬಂಧಿಯಾದ ...ಮ ಬೇರಾವುದೂ ಅಲ್ಲ ಅದು ಮಾಜಿ ಪ್ರಧಾನಿ ...ಡರದ್ದು. ನೇರವಾಗಿ ಹೇಳಬೇಕೆಂದರೆ ದೇವೇಗೌಡರ ...ತ್ನಿ ಚೆನ್ನಮ್ಮರ ತಂಗಿಯ ಮಗಳ ಪತಿಯೇ ಎಸಿ ...ಅರ್ಥಾತ್, ಪ್ರಭು ಸಾಕ್ಷಾತ್ ದೇವೇಗೌಡರ ಅಳಿಯ! ...ನಸಾಮಾನ್ಯರಿಗೆ ಮೇಲ್ನೋಟಕ್ಕೆ ಸಭ್ಯನಂತೆ ಕಂಡರೂ ...ಖ ಬೇರೆಯೇ ಇದೆ. ಜೊತೆಗೆ ದೇವೇಗೌಡರ ...ದ ಋಣ ತೀರಿಸಲು ಪಾಂಡವಪುರದಲ್ಲಿ ಜೆಡಿಎಸ್ ...ಕರ್ತನಂತೆಯೂ, ಹಾಲಿ ಜೆಡಿಎಸ್ ಶಾಸಕ ಕಂ ...ಸಿ.ಎಸ್.ಪುಟ್ಟರಾಜನ ಎಲ್ಲಾ ಅಕ್ರಮ ದಂಧೆಗಳ ... ಪಾಲುದಾರನಂತೆಯೂ ಸೇವೆ ಸಲ್ಲಿಸುತ್ತಿರುವ ...ತ. ಈತನೇ ಗೋಮಾಳ ಭೂಮಿ ಪ್ರಕರಣದ ...ಮ.

...ನ್ನು ಎಂ.ಎಸ್.ಎನ್.ಬಾಬು ಅಲಿಯಾಸ್ ನಿರಂಜನ ...ದಲಿತನಾಗಿದ್ದರೂ ಆ ಲಕ್ಷಣಗಳೇ ಕಾಣದ ಬಲಿತ. ...ಪಣ ಮಾಡುವುದರಲ್ಲಿ ಅತ್ಯಂತ ಚಾಣಾಕ್ಷ! ಈ ... ಬಳ್ಳಾರಿಯಲ್ಲಿ ಸೇವೆ ಸಲ್ಲಿಸುವ ವೇಳೆಗಾಗಲೇ ...ಧಿಪತಿಯಾಗಿದ್ದ ಎನ್ನುವ ಮಾತುಗಳು ಅಧಿಕಾರಿಗಳ ...ದಿಂದಲೇ ಕೇಳಿಬರುತ್ತಿವೆ. ಇಷ್ಟೇ ಅಲ್ಲದೇ ಈತನ ...ಂಗಲದಲ್ಲಿನ ಸರ್ವೀಸ್ ಬಗ್ಗೆ ಹಲವಾರು ಕಥೆಗಳೇ ...ದ ಜಿಲ್ಲಾ ಪಂಚಾಯ್ತಿ ಚುನಾವಣೆಯ ಸಂದರ್ಭದಲ್ಲಿ ...ಮ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಬೆಂಗಳೂರಿನವ... ಅವರನ್ನು ಸ್ಥಳೀಯ ಮತದಾರ ಪಟ್ಟಿಗೆ ಸೇರಿಸಲು ...ಬ್ಬರಿ ಎರಡು ಲಕ್ಷ ರೂಪಾಯಿಗಳನ್ನು ಪಡೆದ ...ಸ್ವರಪಟ್ಟಗೆ ಕುಖ್ಯಾತಿಯನ್ನೂ ಹೊಂದಿದ್ದಾನೆ! ಮಾಜಿ ...ಎಲ್.ಆರ್.ಶಿವರಾಮೇಗೌಡರ ಕ್ಯಾಂಡಿಡೇಟ್ ಆಗಿ ... ನಾಗಮಂಗಲಕ್ಕೆ ಬಂದಿದ್ದರಿಂದ ಅವರಿಗೆ ಹೆಚ್ಚು ... ಮಾಡಿದ್ದಾರೆ ಎಂಬ ಗುಲ್ಲೂ ಇದೆ.


...ಲಿ ವಿಷಯ ಏನೆಂದರೆ ನಾಗಮಂಗಲದ ಸುತ್ತಮುತ್ತ ... ಗೋಮಾಳಕ್ಕೆ, ಜೆಡಿಎಸ್, ಕಾಂಗ್ರೆಸ್, ಬಿಜೆಪಿ ಪಕ್ಷಗಳ ಪುಢಾರಿಗಳು ಬೇಲಿ ಸುತ್ತತೊಡಗಿದ್ದಾರೆ. ಯಾರ್‍ಯಾರು ಈ ಕ್ಷೇತ್ರಕ್ಕೆ ಎಮ್ಮೆಲ್ಲೆಯಾದರೋ ಆಯಾ ಸಂದರ್ಭದಲ್ಲಿ ಆಯಾ ಪಕ್ಷಗಳ ಚೇಲಾಗಳು ಎಡಬಿಡದೆ ಮಾಡಿರುವ ಒತ್ತುವರಿಯ ಗುಟ್ಟು ಈಗ ರಟ್ಟಾಗತೊಡಗಿದೆ.

ನಾಗಮಂಗಲ ತಾಲೂಕಿನ ಬೇರೆ ಬೇರೆ ದಿಕ್ಕಿನಲ್ಲಿರುವ ಎ.ನಾಗತಿಹಳ್ಳಿ, ಎ.ಶ್ರೀರಾಮನಹಳ್ಳಿ, ಭೀಮನಹಳ್ಳಿ, ಹೆಚ್.ಎನ್.ಕಾವಲ್ ಹಾಗೂ ಇನ್ನಿತರ ಹಳ್ಳಿಗಳಲ್ಲಿರುವ ನೂರಾರು ಎಕರೆ ಗೋಮಾಳ ಒತ್ತುವರಿ ವಿವಾದವು ಈಗ ತಲೆಯೆತ್ತಿದೆ. ಹಲವಾರು ಗೋಮಾಳ ದುರಸ್ತಿ ಒತ್ತುವರಿ, ಅಕ್ರಮ ಖಾತೆ ಮತ್ತು ಇಂಡೀಕರಣ ಪ್ರಕರಣಗಳು ಇದೀಗ ಸಾರ್ವಜನಿಕರ ಗಮನಕ್ಕೆ ಬಂದಿವೆ. ಇದರಲ್ಲಿಯೂ ಜೆಡಿಎಸ್, ಕಾಂಗ್ರೆಸ್ ಮತ್ತು ಬಿಜೆಪಿ ಪುಢಾರಿಗಳು ಅಕ್ರಮ ದಾಖಲೆ ಸೃಷ್ಟಿಸಿಕೊಂಡು ಗೋಮಾಳವನ್ನು ಅಕ್ರಮವಾಗಿ ಖಾತೆ ಮಾಡಿಸಿಕೊಂಡಿದ್ದಾರೆ. ಆದರೆ ಇದಕ್ಕಾಗಿ ಕೆಳ ಹಂತದ, ಹುದ್ದೆ ನಿಮಿತ್ತ ಭ್ರಷ್ಟಾಚಾರಿಗಳಾದ ಸರ್ವೇಯರ್‌ಗಳನ್ನು ಮತ್ತು ಗ್ರಾಮ ಲೆಕ್ಕಿಗರನ್ನು ಬಲಿ ಪಶುಗಳನ್ನಾಗಿ ಮಾಡಲಾಗಿದೆ. ಅಸಲಿಗೆ ಈ ಗೋಮಾಳದ ದುರಸ್ತಿ ಮತ್ತು ಇಂಡೀಕರಣಕ್ಕೆ ಹಿಂದಿನ ಕಡು ಭ್ರಷ್ಟ ತಹಶೀಲ್ದಾರ್ ರಂಗಸ್ವಾಮಿ ಅಮೇಧ್ಯ ತಿಂದು ಅಕ್ರಮ ಪರಭಾರೆ ಮಾಡಿದ್ದು, ಇದಕ್ಕೆ ಸಾಥ್ ನೀಡಿದ್ದು ಹಾಲಿ ಎಸಿ ಪ್ರಭು ಎನ್ನುವುದು ಇಡೀ ನಾಗಮಂಗಲದ ಜನಕ್ಕೆ ಗೊತ್ತಿರುವ ವಿಚಾರ. ಆದರೆ ಈ ಇಬ್ಬರೂ ತಪ್ಪಿಸಿಕೊಳ್ಳಲು ಈ ಪ್ರಕರಣದಲ್ಲಿ ಸಂಬಂಧವೇ ಇಲ್ಲದವರನ್ನು ಬಲಿಪಶುಗಳಾಗಿ ಮಾಡಿದ್ದಾರೆ.

ಅಸಲಿಗೆ ದೇವಲಾಪುರ ಹೋಬಳಿಯ, ನಲ್ಕುಂದಿ ಗ್ರಾಮದ 4 ಎಕರೆ ಗೋಮಾಳ ಸರ್ವೇ ನಂ22ರಲ್ಲಿ ಗಂಗಮ್ಮ ಕೋಂ ನಾರಪ್ಪ ಎಂಬುವವರಿಗೆ ಅಕ್ರಮವಾಗಿ ದಾಖಲೆಗಳನ್ನು ಸೃಷ್ಟಿಸಿದ್ದಾರೆಂದು ಕೆಳ ಹಂತದ ಅಧಿಕಾರಿಗಳು ಪರಾ ವರದಿ ನೀಡಿದ್ದರೂ ಮಾನ್ಯ ಎಸಿ ಪ್ರಭುರವರೇ ಗಂಗಮ್ಮನ ಹೆಸರಿಗೆ ಆರ್.ಟಿ.ಸಿ. ಬರುವಂತೆ ನೋಡಿಕೊಂಡಿದ್ದಾನೆ. ಈ ಸೇವೆಗಾಗಿ ಪ್ರಭು ಪಡೆದ ಕಪ್ಪ ಕೇವಲ 8 ಲಕ್ಷವೆಂಬುದು ಸರ್ಕಾರೀ ವಲಯಗಳಲ್ಲಿನ ಗುಸುಗುಸು.

ಬಿಂಡಿಗನವಿಲೆ ಹೋಬಳಿ ಕದಬಹಳ್ಳಿಯ ಸರ್ವೇ ನಂ.222ರಲ್ಲಿ ಅತ್ಯಂತ ಬೆಲೆಬಾಳುವ ರಾಜ್ಯ ಹೆದ್ದಾರಿ ಪಕ್ಕದಲ್ಲಿರುವ 6 ಎಕರೆ ಜಮೀನು ಶಾಸಕ ಸುರೇಶ್‌ಗೌಡನ ಚೇಲಾ ಮತ್ತು ಪುಂಡ ಬರಿಗಾಲು ರಾಮಸ್ವಾಮಿಗೌಡನ ಪಾಲಾಗಿದೆ. ಈ ಭೂಮಿಯ ದುರಸ್ತಿ, ಆರ್.ಟಿ.ಸಿ. ಕಂಪ್ಯೂಟರೀಕರಣ ಮಾಡಲು ಇದೇ ಎಸಿ ಪ್ರಭು ಭೂಕಳ್ಳರ ಪರ ನಿಂತು, ನಿಗದಿತ ಕಪ್ಪ ಪಡೆದು ಸರ್ಕಾರಿ ಗೋಮಾಳವನ್ನು ಧಾರೆ ಎರೆದುಕೊಟ್ಟಿದ್ದಾರೆ ಎಂಬುದನ್ನು ಸರ್ಕಾರಿ ದಾಖಲೆಗಳೇ ಹೇಳುತ್ತಿವೆ.

ಬಾಬು ಮತ್ತು ಪ್ರಭು ಪರಸ್ಪರ ಹೊಂದಾಣಿಕೆಯಿಂದ ಡೀಲ್‌ಗಳನ್ನು ನಡೆಸಿಲ್ಲದ ಕಾರಣಕ್ಕೋ ಅಥವಾ ನಿಜವಾದ ಕಾಳಜಿಯಿಂದಲೋ, ಬಾಬು ಇಂತಹ ಕೆಲಸಗಳಿಗೆ ಅಡ್ಡಿ ಮಾಡಿದ್ದಾರೆ. ಇದರಿಂದ ಅವರಿಬ್ಬರ ನಡುವೆ ವೈಮನಸ್ಯ ಉಂಟಾಗಿದೆ. ಬಾಬು ಜಿಲ್ಲಾಧಿಕಾರಿಗಳಿಗೆ ಬರೆದ ಪತ್ರದ



ಪ್ರಕಾರ (ಈ ಪತ್ರ ನಿಗೂಢವಾಗಿ ಪತ್ರಿಕೆಗಳಿಗೆ ಲೀಕ್ ಆಗಿದೆ), ಪ್ರಭು ನಾಗಮಂಗಲ ತಾಲ್ಲೂಕು ಲೆಕ್ಕಾಧಿಕಾರಿಗಳ ಕಡೆಯಿಂದ 1,00,000 ರೂ ಸಂಗ್ರಹಿಸಿ ತನಗೆ ನೀಡುವಂತೆ ಬಾಬುವಿಗೆ ತಾಕೀತು ಮಾಡಿದರೆಂತಲೂ ಅದಕ್ಕೆ ಬಾಬು ಒಪ್ಪಿಲ್ಲವೆಂತಲೂ ಹೇಳಲಾಗಿದೆ. ಆದರೆ ರಾಚಯ್ಯ ಎಂಬ ಗ್ರಾಮಲೆಕ್ಕಾಧಿಕಾರಿಗಳ ಸಂಘದ ಅಧ್ಯಕ್ಷ ತನ್ನ ಸ್ವಂತ ಹೆಸರಿನಲ್ಲಿ 23,750 ರೂ. ಮೌಲ್ಯದ ಚಿನ್ನದ ಸರವನ್ನು ಪ್ರಭುವಿಗೆ 'ಕೊಡುಗೆ'ಯಾಗಿ ನೀಡಿದ್ದಾನೆ.

ಪ್ರಭು ಮಾಡಿಕೊಂಡಿರುವ ಮತ್ತೊಂದು ಎಡವಟ್ಟು ಕುತೂಹಲಕಾರಿಯಾಗಿದೆ. ಕೆಂಚೇಗೌಡ ಎಂಬುವ 'ಡಿ' ಗ್ರೂಪ್ ನೌಕರನನ್ನು ತನ್ನ ಮನೆಯಲ್ಲಿ ಚಾಕರಿ ಮಾಡಲು ನಿಯೋಜಿಸಿಕೊಂಡಿದ್ದರು. ಈ ಕೆಂಚೇಗೌಡರು ಪ್ರಭುವಿನ ವಿರುದ್ಧ ಕೆಎಟಿಯಲ್ಲಿ ದಾವೆ ಹೂಡಿಬಿಟ್ಟರು. ಇದರಿಂದ ಸಿಟ್ಟಿಗೆದ್ದ ಪ್ರಭು ಹೇಗಾದರೂ ಮಾಡಿ, ಸಣ್ಣ ಕಾರಣ ಹಿಡಿದಾದರೂ ಸರಿ ಆತನನ್ನು ಅಮಾನತ್ತು ಮಾಡಬೇಕೆಂದು ತೀರ್ಮಾನಿಸಿದರು. ಕೆಂಚೇಗೌಡ ನಾಗಮಂಗಲ ತಹಶೀಲ್ದಾರ್ ವ್ಯಾಪ್ತಿಗೆ ಬರುತ್ತಿದ್ದುದರಿಂದ ಬಾಬು ಮೇಲೆ ಇದಕ್ಕಾಗಿ ಒತ್ತಡ ತಂದರೆನ್ನಲಾಗಿದೆ.



ಪಿ.ಸಿ. ಜಾಫರ್

ಬಾಬುವನ್ನು ನಾಗಮಂಗಲದಿಂದ ದೊಡ್ಡಬಳ್ಳಾಪುರಕ್ಕೆ ವರ್ಗಾ ಮಾಡಲಾಗಿದೆ. ಇಂತಹ ಸಂದರ್ಭದಲ್ಲಿ ನಾಗಮಂಗಲ ತಾಲ್ಲೂಕಿನ ಗೋಮಾಳದ ಮೂಲ ಕಡತಗಳು ನಾಪತ್ತೆಯಾಗಿವೆ ಎನ್ನುವ ನೆಪದಲ್ಲಿ ಸಾಮಾನ್ಯ ಸಣ್ಣಪುಟ್ಟ ಭ್ರಷ್ಟಾಚಾರಿಗಳಂತಿರುವ ಸರ್ವೇಯರ್‌ಗಳನ್ನು ಮತ್ತು ಗ್ರಾಮಲೆಕ್ಕಿಗರನ್ನು ಬಲಿಪಶುಗಳನ್ನಾಗಿ ಮಾಡಿ ಜೈಲಿಗೆ ಕಳಿಸಲಾಗಿದೆ. ಈ ಮೂಲಕ ಹಿಂದಿನ ತಹಶೀಲ್ದಾರ್ ಬಾಬುನನ್ನು ಸಿಕ್ಕಿಸಲು ಎಸಿ ಪ್ರಭು ಶತಾಯಗತಾಯ ಪ್ರಯತ್ನ ಮಾಡಿದ್ದಾನೆ.


ನಾಗಮಂಗಲದ ರಾಜ್ಯ ಹೆದ್ದಾರಿಯ ಸುತ್ತಮುತ್ತ ನೂರಾರು ಎಕರೆ ಗೋಮಾಳವನ್ನು ಅಕ್ರಮ ದಾಖಲೆ ಸೃಷ್ಟಿಸಿ, ಬೇನಾಮಿ ಹೆಸರಲ್ಲಿ ಪಡೆದ ಎಲ್.ಆರ್.ಶಿವರಾಮೇಗೌಡ, ಪಿ.ಎಲ್.ಡಿ.ಬ್ಯಾಂಕ್‌ನ ಮಾಜಿ ಅಧ್ಯಕ್ಷ ತಿಮ್ಮರಾಯಿಗೌಡ, ಆರ್.ಡಿ.ನಂಜಪ್ಪ ಎಂಬ ಭೂಗಳ್ಳರು ಈ ಭೂಮಿಯನ್ನು ಮಾರಾಟಮಾಡಿ ಕೋಟಿಗಟ್ಟಲೇ ಹಣ ಮಾಡಿಕೊಂಡಿದ್ದಾರೆ. ಇವೆಲ್ಲದರ ಹಿಂದೆ ಪ್ರಭು ಇದ್ದಾನೆ.

ಮಂಡ್ಯ ಜಿಲ್ಲೆಯ ನಾಗಮಂಗಲ, ಪಾಂಡವಪುರ, ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಸರ್ಕಾರಿ ಗೋಮಾಳ, ಅರಣ್ಯ ಇಲಾಖೆಯ ಜಮೀನುಗಳು ಹಾಡುಹಗಲೇ ಒತ್ತುವರಿಗೊಳ್ಳುತ್ತಿವೆ. ಇದಕ್ಕೆ ತಕ್ಕಂತೆ ಪಾಂಡವಪುರದಲ್ಲಿ ಶಾಸಕ ಪುಟ್ಟರಾಜುವಿನದು ಮಾನೋಪಲಿಯಾದರೆ ಇತ್ತ ಶ್ರೀರಂಗಪಟ್ಟಣದಲ್ಲಿ ಶಾಸಕ ರಮೇಶ್ ಬಾಬು ಮತ್ತು ಇಸ್ಲಾನ್ ಭೂಗಳ್ಳರೇ ಬಹುಮುಖ್ಯ ಅಕ್ರಮ ಒತ್ತುವರಿದಾರರಾಗಿದ್ದಾರೆ. ಇಷ್ಟೆಲ್ಲಕ್ಕೂ ಮುಖ್ಯಕಾರಣ ಕಂದಾಯ ಇಲಾಖೆ ಮತ್ತು ಭೂಮಾಪನಾ ಕೆಲಸದ ಭ್ರಷ್ಟ ಸಿಬ್ಬಂದಿಯೇ ಆಗಿದ್ದಾರೆ.

ದುರಂತ ಎಂದರೆ ನಾಗಮಂಗಲದಲ್ಲಿ ಇಷ್ಟೆಲ್ಲ ನಡೆಯುತ್ತಿದ್ದರೂ ನಿಜವಾದ ಸಾಗುವಳಿದಾರರನ್ನು ವಂಚಿಸಿ, ಅಕ್ರಮ ದಾಖಲೆಗಳನ್ನು ಸೃಷ್ಟಿಸಿ ನೂರಾರು ಎಕರೆ ಗೋಮಾಳ ಪರಭಾರೆಯಾಗುತ್ತಿದ್ದರೂ ಮಂಡ್ಯ ಜಿಲ್ಲೆಯ ನಾಗಮಂಗಲ ಮೂಲದ ಜೆಡಿಎಸ್ ನಾಯಕ ಕಂ ಸಂಸದ ಚಲುವರಾಯಸ್ವಾಮಿಯಾಗಲಿ, ಇದೇ ಕ್ಷೇತ್ರದ ಕಾಂಗ್ರೆಸ್ ಶಾಸಕ ಸುರೇಶ್ ಗೌಡರಾಗಲಿ, ನಂಗಾನಾಚ್ ಕುಖ್ಯಾತಿಯ ಬಿಜೆಪಿಯ ಪರ್ಮನೆಂಟ್ ಪರಾಜಿತ ಕ್ಯಾಂಡಿಡೇಟ್ ಎಲ್.ಆರ್.ಶಿವರಾಮೇಗೌಡನಾಗಲಿ ಯಾರೂ ತುಟಿಕ್ ಪಿಟಿಕ್ ಎನ್ನದೆ ಮೌನಕ್ಕೆ ಶರಣಾಗಿರುವುದು ಯಾತಕ್ಕಾಗಿ ಎನ್ನುವುದು ಬಯಲಿಗೆ ಬರಬೇಕು. ಜೊತೆಗೆ ಈ ಗೋಮಾಳ, ದರಖಾಸ್ತು ಭೂಮಿಗಳ ಒತ್ತುವರಿ ಪ್ರಕರಣಗಳಲ್ಲಿ ಅಕ್ರಮಗಳು ಯಾವುವು, ಅಕ್ರಮ ದಾಖಲಾತಿಗಳು ಯಾವುವು, ಅಕ್ರಮಿಗಳು ಯಾರು ಎಂದು ಗೊತ್ತಾಗಬೇಕಾದರೆ 2005ರಿಂದ ಇಲ್ಲಿಯವರೆವಿಗೂ ಆಗಿರುವ ದುರಸ್ತಿ ಆರ್.ಟಿ.ಸಿ. ಕಂಪ್ಯೂಟರೀಕರಣಗಳು, ಅಕ್ರಮ ಖಾತೆಗಳ ಬಗ್ಗೆ ಅನುಭವಿ ಉನ್ನತ ಅದಿಕಾರಿಗಳ ನೇತೃತ್ವದಲ್ಲಿ ತನಿಖೆ ನಡೆಸಬೇಕು. ಅವೆಲ್ಲಾ ಸರಿಯಾಗಿ ನಡೆದರೆ, ಸ್ವತಃ ತನಿಖಾಧಿಕಾರಿಯಾಗಿರುವ ಎಸಿ ಪ್ರಭುವಿನ ಅಸಲಿ ಮುಖ ನಿಚ್ಚಳವಾಗಿ ಬಹಿರಂಗವಾಗುವುದರ ಜೊತೆಗೆ ಇನ್ನಷ್ಟು ಭ್ರಷ್ಟಾಚಾರಿಗಳು ಜೈಲಿಗೆ ಹೋಗುವುದು ಗ್ಯಾರಂಟಿಯಾಗಿದೆ.


ಆದರೆ ಈ ಬಗ್ಗೆ ಜಿಲ್ಲಾಧಿಕಾರಿ ಪಿ.ಸಿ. ಜಾಫರ್ ಹೆಚ್ಚಿನ ಕ್ರಮವನ್ನೇನೂ ಕೈಗೊಂಡಂತಿಲ್ಲ. ಬದಲಿಗೆ ಪ್ರಭು ಬಗ್ಗೆ ಹಲವಾರು ದೂರುಗಳಿದ್ದಾಗ್ಯೂ ಅವರನ್ನೇ ಸರ್ವೇಯರ್‌ಗಳ ವಿಚಾರದಲ್ಲಿ ತನಿಖಾಧಿಕಾರಿಯಾಗಿ ನೇಮಿಸಿದ್ದು ಸೂಕ್ತವಲ್ಲ ಎಂಬುದು ಅಧಿಕಾರಿಗಳ ವಲಯದಲ್ಲಿ ಕೇಳಿಬರುತ್ತಿರುವ ಮಾತು. ಅದೇನೇ ಇರಲಿ, ಇನ್ನಾದರೂ ಪ್ರಭುವಿನ ಹುಚ್ಚಾಟಗಳಿಗೆ ಕಡಿವಾಣ ಹಾಕಲು ಜಾಫರ್ ಯಶಸ್ವಿಯಾಗುತ್ತಾರೆಯೇ, ಈ ಎಲ್ಲಾ ಅಕ್ರಮಗಳ ಬಗ್ಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಾರೆಯೇ ಎಂಬುದನ್ನು ಕಾದುನೋಡಬೇಕು.

• ಲಕ್ಷ್ಮಣ್ ಚೀರನಹಳ್ಳಿ



ತಹಶೀಲ್ದಾರ್ ಬಾಬುವಿನ ಅಟ್ರಾಸಿಟಿ ಟೆಕ್ನಿಕ್

ಬಾಬು ಇಲ್ಲಿಂದ ವರ್ಗಗೊಂಡರೂ ಹಿಂದೆ ತನ್ನ ಜೊತೆ ದುಡಿದಿದ್ದ ಸರ್ವೇಯರ್‌ಗಳ ಜೊತೆ ನಿರಂತರವಾಗಿ ಸಂಪರ್ಕದಲ್ಲಿದ್ದರು. ಹೀಗಾಗಿ ಯಾವಾಗ ಪ್ರಭು ಸರ್ವೇಯರ್‌ಗಳ ವಿರುದ್ಧ ಕೆಂಡಕಾರಲು ಆರಂಭಿಸಿದರೋ, ಆಗ ತಾವೇ ಅವರಿಗೆ ಅಡ್ವೈಸ್ ಮಾಡಿದರು. ಆಗಸ್ಟ್ 25ರಂದು ಎಸಿ ಪ್ರಭು, ಸರ್ವೇಯರ್‌ಗಳಿಗೆ ನೋಟಿಸ್ ಕೊಟ್ಟು ಕೆಲವು ನಿರ್ದಿಷ್ಟ ದಾಖಲಾತಿಗಳನ್ನು ತನಗೆ ಕೊಡಬೇಕೆಂದೂ ಇಲ್ಲದಿದ್ದರೆ 3 ತಿಂಗಳು ಜೈಲಿಗೆ ಕಳಿಸಲಾಗುವುದು ಎಂದು ಹೇಳಿದ್ದಾರೆ. ಇದಕ್ಕೆ ಉತ್ತರಿಸುವ ಅಥವಾ ತಮ್ಮ ಕರ್ತವ್ಯದ ಚೌಕಟ್ಟಿನಲ್ಲಿ ಏನು ಮಾಡಬೇಕೋ ಅದನ್ನು ಮಾಡುವ ಬದಲು ಸರ್ವೇಯರ್‌ಗಳು ಎಸಿಯ ವಿರುದ್ಧ ಅಟ್ರಾಸಿಟಿ ದೂರನ್ನು ನೀಡಿದರು. ಇದಕ್ಕೆ ಪ್ರತಿಕ್ರಿಯೆಯಾಗಿ ಎಸಿ ಪ್ರಭು ಸೂಚನೆಯಂತೆ ಪೊಲೀಸರು 27ರಂದು ಸರ್ವೇಯರ್‌ಗಳನ್ನು ಬಂಧಿಸಿದರು. ಜೈಲುಪಾಲಾದ 5 ಜನ ಸಿಬ್ಬಂದಿಯು ನಂತರ ಜಾಮೀನಿನ ಮೇಲೆ ಹೊರಗೆ ಬಂದರು. ಆದರೆ ಪ್ರಭು ಮೇಲೆ ಅಟ್ರಾಸಿಟಿ ಕೇಸು ಬುಕ್ಕಾಗಲಿಲ್ಲ. ಸರ್ವೇಯರ್‌ಗಳನ್ನು ಜೈಲಿಗೆ ತಳ್ಳಿದ ಪ್ರಳಯಾಂತಕ ಅಟ್ರಾಸಿಟಿ ಐಡಿಯಾವನ್ನು ಸರ್ವೇಯರ್‌ಗಳಿಗೆ ನೀಡಿದ್ದು ನಾಗಮಂಗಲದ ಮಾಜಿ ತಹಸೀಲ್ದಾರ್ ನಿರಂಜನ್‌ಬಾಬು.



• ಪಿ. ಲಂಕೇಶ್

ಎಷ್ಟಾದರೂ ನಾನೂ ಇವನಂತಹವನೇ ಅಲ್ಲವೆ?

ಕವಿ ಕೆ.ನ.ಶಿವತೀರ್ಥನ್ ಅವರು ಸೆ.5ರಂದು ತೀರಿಕೊಂಡರು. ಪಿ.ಲಂಕೇಶರು ತಮ್ಮ ಶಿಷ್ಯ ಮತ್ತು ಮಿತ್ರ ಶಿವತೀರ್ಥನ್ ಅವರ ಬಗ್ಗೆ ಬರೆದಿದ್ದ ಲೇಖನವನ್ನು, ಅವರ ಶಿಷ್ಯ ಬಿ.ಚಂದ್ರೇಗೌಡರ ಬರಹವನ್ನು ಮತ್ತು ಶಿವತೀರ್ಥನ್ ಅವರ ಪದ್ಯವನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ

ನನಗೆ ಕೆಲವರನ್ನು ನೋಡಿದರೆ ವಿಸ್ಮಯವಾಗುತ್ತದೆ. ರಾಮಚಂದ್ರ ಶರ್ಮ, ಶಿವತೀರ್ಥ, ಚಂದ್ರಶೇಖರ ಕಂಬಾರ ಈ ಕೆಲವರು. ಇವರು ಪ್ರತಿ ಸಲ ಸಿಕ್ಕಾಗಲೂ ನನ್ನನ್ನು ಹಲವು ತರಹ ವ್ಯಸನಗಳಿಂದ ಕವನಗಳತ್ತ ಹೇಗೋ ಕರೆದೊಯ್ಯುತ್ತಾರೆ. ಬೇರೆ ಏನನ್ನಾದರೂ ಮಾತಾಡುತ್ತ ಈ ಕಾವ್ಯ ಕನ್ಯೆಯ ಬಗ್ಗೆ ನಾನು ಮರೆತಿದ್ದೇನೆಂದು ಸೂಚಿಸಿದರೂ ಇವರು ಬಿಡುವುದಿಲ್ಲ. ಕಾವ್ಯದ ಒಂದು ಸಾಲನ್ನು ಹೇಳುತ್ತಲೋ ಕಾವ್ಯ ಜೀವನದ ಬಗ್ಗೆ ಅರ್ಧಮಾತಿನಲ್ಲಿ ಅನುಕಂಪ ವ್ಯಕ್ತಪಡಿಸಿಕೊಳ್ಳುತ್ತಲೋ ಮಾತಿನಲ್ಲಿ ಕಾವ್ಯ ಮುಖ್ಯವಾಗುವಂತೆ ಮಾಡುತ್ತಾರೆ. ನನಗೆ ವಿಸ್ಮಯ ಏಕೆಂದರೆ ಈ ಕಾವ್ಯವೆನ್ನುವ ವಸ್ತು ಕೆಲವರನ್ನಾದರೂ ಆಳವಾಗಿ ತೊಡಗಿಸುತ್ತದಲ್ಲ ಎಂದು; ಈ ಕಾವ್ಯದ ಸೆಳೆತ ಗಾಂಜಾ, ಹಶೀಷ್ ಇತ್ಯಾದಿಯ ತರಹ ಇರಬಹುದು. ನಮ್ಮೂರಲ್ಲಿ ಕರಿಯಣ್ಣನೆಂಬ ತಳವಾರರ ಮನುಷ್ಯ ತಾನು ಗರಗಸದ ಗುಂಡಿಯಲ್ಲಿ ಹತ್ತು ಕಂತೆ ಗಾಂಜಾ ಎಲೆ ಬೆಳೆದುದಾಗಿಯೂ ಅದಕ್ಕಾಗಿ ಪೊಲೀಸರು ಹುಡುಕಿ ಸುತ್ತಾಡಿ ಸೋಲನ್ನೊಪ್ಪಿಕೊಂಡು ಹೋದರೆಂದೂ ಹೇಳುತ್ತಿದ್ದುದು ಮತ್ತು ಆತ ನಾಲ್ಕೈದು ವರ್ಷದ ನಮ್ಮಂಥ ಹುಡುಗರನ್ನು ಸುತ್ತಾ ಕೂಡಿಸಿಕೊಂಡು ಎಕ್ಕದ ಎಲೆಯಲ್ಲಿ ಗಾಂಜಾ ಸೇರಿಸಿಕೊಂಡು ಸೇದುತ್ತಿದ್ದುದೂ ನೆನಪು. ಗಾಂಜಾ ಎನ್ನುವುದು ಎಲೆಯೋ ಹೂವೋ ಕಾಯಿಯೋ ಇವತ್ತಿನವರೆಗೂ ಗೊತ್ತಿಲ್ಲ, ಆತ ಬಿಡುತ್ತಿದ್ದ ಹೊಗೆಯ ಕಮರು ಕೂಡ ನೆನಪಿಲ್ಲ, ಹೀಗಿದೆ ನನ್ನ ಮತ್ತು ಕಾವ್ಯದ ಸಂಬಂಧ. ನನ್ನಂಥ ಕೇರ್‌ಲೆಸ್ ಜನರನ್ನು ಕಟ್ಟಿಕೊಂಡು ಕಾವ್ಯ ಏನು ಮಾಡೀತು? ಅದಕ್ಕೆ ಜೊತೆಯಾಗಿ ನಿಲ್ಲಬಲ್ಲ ಗಂಡಸರು ಬೇಕು. ಅವರ ನರನಾಡಿಗಳಿಂದ ಗದ್ದಲ ಹೊರಡಿಸಬೇಕು. ಸಂಗೀತ ಹೊರಡಿಸಬೇಕು. ವಿಚಿತ್ರ ಬಗೆಯ ಮಾತುಗಳ ಮಿಶ್ರಣ ಹೊರಡಿಸಬೇಕು. ತೀರಾ ಚಾಲೂಕಿನ, ಸ್ಮಾರ್ಟ್ ಆದ ಗಂಡಸಿಗೆ ಈ ನಿತ್ಯ ಯೌವ್ವನೆಯಾದ ಭಾರದ ಕಾಮದ ಹೆಂಗುಸು ಮೈಟ್ ಮಾಡುವುದಿಲ್ಲ, ಒಂದು ರೀತಿಯಲ್ಲಿ ಮುಗ್ಧರೂ ದಡ್ಡರೂ ಖಾಸಗಿ ಕೆಲಸದಲ್ಲಿ ಖದೀಮರೂ ಆದ ಗಂಡಸರು ಆಕೆಗೆ ಬೇಕು. ಕಾವ್ಯ ಚರಿತ್ರೆಯನ್ನೂ ಕವಿಗಳ ಚರಿತ್ರೆಯನ್ನೂ ಆಲಾಯದವಾಗಿ ನೋಡಿದರೆ ತಿಳಿಯುತ್ತದೆ. ಪಂಡಿತರ ಮಕ್ಕಳು ಶುಂಠರಾದರೆ ಮಗ್ಧರ ಮಕ್ಕಳು ಕವಿಗಳಾಗುತ್ತಾರೆ.

ಇದು ನಾನು ಯಾರನ್ನೂ ಟೀಕಿಸುವ ಶೈಲಿಯಲ್ಲ ಎಂದು ದಯವಿಟ್ಟು ತಿಳಿಯಬೇಕು. ನಿಜ ಏನೆಂದರೆ, ಅಸೂಯೆ ಹತ್ತಿಕ್ಕಿ ಈ ಕಾವ್ಯದ ಜನರನ್ನು ಹೊಗಳುತ್ತಿದ್ದೇನೆ. ಶಿವತೀರ್ಥ ಮಹಾಕವಿ ಏನಲ್ಲ, ತನ್ನ ಗೆಳೆಯರು ಕವನ ಕಟ್ಟಬಲ್ಲರಾದರೆ ತಾನೇಕೆ ಕಟ್ಟಬಾರದು ಎಂದು ಹೊರಟವನು. ಹಾಗೆ ಹೊರಟು ಹಲ್ಲು ಕಚ್ಚಿಕೊಂಡು ಕವನ ಬರೆಯುತ್ತಲೇ ಇರುವವನು. ಹಾಡುತ್ತ ಹೋದರೆ ರಾಗ ಬರುವಂತೆ ಬರೆಯುತ್ತಾ ಹೋದರೆ ಕವನ ಬರುತ್ತದೆ ಎಂಬ ನಂಬಿಕೆಯಿಂದ ಹೊರಟು ಕೊನೆಗೂ ಕೆಲವು ಒಳ್ಳೆಯ ಪದ್ಯ ಬರೆದವನು.

ಈತನ ಬಗೆಗಿನ ಪರಿಚಯ ಇನ್ನೂ ಕೊಂಚ ಬೇಕೆನಿಸುತ್ತದೆ. ಹುಟ್ಟುವವರಿಗೆಲ್ಲ ಅಣ್ಣ ಮತ್ತು ಬೆಳೆಯುವವರಿಗೆಲ್ಲ ತಮ್ಮನಂತಿರುವ ಈ ಶಿವತೀರ್ಥ ಗಂಗಾಮತ ಅಥವಾ ಬೆಸ್ತರ ಕುಲಕ್ಕೆ ಸೇರಿದವನು. ಸುಮಾರು ಇಪ್ಪತ್ತರಿಂದ ನೂರು ವರ್ಷಗಳೊಳಗೆ ಎಷ್ಟಾದರೂ ಇರಬಹುದಾದ ಈತ ನಮ್ಮಂತಹ ಅಸಹಾಯಕರಿಗೆ ತಮ್ಮ, ಅಣ್ಣ, ಮಿತ್ರ, ಶಿಷ್ಯ ಇತ್ಯಾದಿ ಏನಾದರೂ ಆಗಬಲ್ಲವನು. ತುಂಬ ಚಿಪುಣ ಎಂದು ಇವನ ಮಿತ್ರರು ಹೇಳುತ್ತಾರೆ. ಮತ್ತು ಸ್ವಂತ ಜಾತ್ಯಾಭಿಮಾನಿ ಎಂದು ಇತರೆ ಜಾತಿಯವರು ಹೇಳುತ್ತಾರೆ. ಡಾಕ್ಟರುಗಳು ಇವನಿಗೆ ಬುದ್ಧಿ ಹೇಳಿ ಅನೇಕ ತಿಂಗಳು ಮದ್ಯಪಾನ ಬಿಡಿಸಿದ್ದರು. ಆದರೆ ಈತ ಹೇಗೆ ಬುದ್ಧಿವಾದ ಪಾಲಿಸುತ್ತಿದ್ದಾನೋ ಗೊತ್ತಿಲ್ಲ, ಏನೇ ಆದರೂ ನನಗೆ ಸುಮಾರು ದಶಕಗಳಿಂದ ಪರಿಚಯವಿರುವ ಈತ ತನ್ನೆಲ್ಲ ಗಡಿಬಿಡಿ ತೊಂದರೆಗಳ ಜೊತೆಗೆ ಪದ್ಯ ಕೂಡ ಬರೆಯುತ್ತಿದ್ದಾನೆ. ಬಹಳ ವರ್ಷಗಳಿಂದ ಈ ಪದ್ಯಗಳನ್ನು ಅಚ್ಚು ಮಾಡಿಸಲು ಪ್ರಯತ್ನಿಸುತ್ತಿದ್ದಾನೆ. ಕೊನೆಗೂ ಈತನ ಪುಸ್ತಕ ಹೊರಬರುವಾಗ ಈ ಪುಸ್ತಕವನ್ನು ಅಷ್ಟೇನೂ ಚಾಲೂಕಲ್ಲದ ಬೆಸ್ತರ ಹುಡುಗನೊಬ್ಬ ಬರೆದಿದ್ದಾನೆ ಮತ್ತು ತನ್ನ ಶೂದ್ರ ಗುಣಗಳನ್ನು ಇಲ್ಲಿ ತೋರಿಸಿದ್ದಾನೆ ಎಂದು ಹೇಳಬೇಕೆಂದು ಮನಸ್ಸಾಗಿದೆ.

ಇಲ್ಲಿ ಯಾವ ಪದ್ಯವೂ ಅತ್ಯಂತ ಪರಿಪೂರ್ಣವೂ, ನೆನಪಿನಲ್ಲಿ ಉಳಿದು ನಮ್ಮ ವೃತ್ತಿ ವಿಮರ್ಶಕರ ಧ್ಯಾನ ಪ್ರವಚನಕ್ಕೆ ಈಡಾಗುವಂಥದೂ ಆಗಿಲ್ಲ, ಆದರೆ ಎಲ್ಲ ಪದ್ಯಗಳಲ್ಲೂ ಒಂದೆರಡು ಮಾತು ಚೆನ್ನಾಗಿವೆ ಮತ್ತು ಈತನ ಪದ್ಯ ರಸಿಕರೆದುರು ಬಂದು ಅವರ ಬಾಯಿಗೆ ಸಿಕ್ಕರೆ ಈತನ ನರಗಳು ಚೇತರಿಕೆ ಪಡೆದು ಒಳ್ಳೆಯ ಪದ್ಯಗಳು ಹೊರಬರುವ ಸಾಧ್ಯತೆ ಇದೆ. "ನೀಲ ಮುಗಿಲಿಗೆ ಗರಿ ತೆರೆದು ಹಾರುವ ಬೆಳ್ಳನ್ನ ಬೆಳ್ಳಕ್ಕಿ ರೀತಿ-ಸಹಜ ಪ್ರೀತಿ" ಎನ್ನುವುದಾಗಲೀ, "ಮುಂಜಾನೆ ಸುರಿವ ಇಬ್ಬನಿಯಲ್ಲಿ ಸೂರ್ಯ ಬಣ್ಣ ಗಟ್ಟುವ ರೀತಿ-ಸಹಜ ಪ್ರೀತಿ" ಎನ್ನುವುದಾಗಲಿ ಕಾವ್ಯಕ್ಕಾಗಿ ಎಳೆತಂದ ನೀಲಿ ಮುಗಿಲು, ಬೆಳ್ಳಕ್ಕಿ, ಸೂರ್ಯ, ಇಬ್ಬನಿ ಇವು ತಮ್ಮ ಕೆಲಸ ಅಷ್ಟು ಮನಸ್ಸಿಟ್ಟು ಮಾಡುವುದಿಲ್ಲ, ಕವಿ ಹುಡುಕಬೇಕಾದದ್ದು ತನ್ನಲ್ಲಿ ತನ್ನ ಹತ್ತಿರದ ಪರಿಸರದಲ್ಲಿ-ಆತ ಸುಂದರ ಜಗತ್ತಿಗಾಗಿ ಪರದಾಡಕೂಡದು. ಭಾಷೆ ಕೂಡ ಅಷ್ಟೆ. ತನ್ನ ನಾಲಿಗೆಗೆ ಹತ್ತಿರವಾದ ಮಾತು ಮತ್ತು ಮಿಡಿತವನ್ನು ಅವನು ನಂಬಬೇಕು. ಮಿಕ್ಕದ್ದನ್ನು ಅನುಮಾನದಿಂದ ಬರಮಾಡಿಕೊಳ್ಳ ಬೇಕು. ಈ ನಿಲುವಿನಿಂದ ನೋಡಿದರೆ ಶಿವತೀರ್ಥ ಕೇವಲ ಬೆಳ್ಳಕ್ಕಿಗಳ ಸಂಗ ಮಾಡದೆ ಸುತ್ತಾ ಜಾಗ ನೋಡಿದ್ದಾನೆ ನಿಸುತ್ತದೆ. "ಹೋಹೋ ಸುಯ್ಯುವ ಗಾಳಿಯ ಹುಯ್ಲು ಇಲ್ಲದ ಸಲ್ಲದ ಸಮಸ್ಯೆಯ ಸರಕು ನೀನಲ್ಲವೆ ಯುವತಿ ಎನ್ನುತ್ತಾನೆ. ಪ್ರಾಯ ತೊಟ್ಟಿಕ್ಕುತ್ತದೆ ಎಂಬುದು ಈತನ ಪದ್ಯದ "ತೊಟ್ಟಿಕ್ಕುವ ಪ್ರಾಯದ ಮದದ" ಎಂಬುದನ್ನು ನೋಡಿದಾಗ ನಗೆ ಗೊತ್ತಾಯಿತು.

ಹೆಣ್ಣು ಕವಿಗಳ ಪರಂಪರಾಗತ ಸರಕು. ಗಂಡಸರು ಗಂಡಸರ ಬಗ್ಗೆ ಬರೆಯುವುದಕ್ಕಿಂತ ಇದು ವಾಸಿಯೆನಿಸಿದರೂ ಈ ಹೆಂಗುಸು ಕವಿಗಳನ್ನು ಕಂಗಾಲಾಗಿಸುವುದು ಹೆಚ್ಚು: ಪದ್ಯದ ವಲಯಗಳಲ್ಲಿ ಪೆಟ್ರಾರ್ಕನಿಂದ ಹಿಡಿದು ಕಾಳಿದಾಸನನ್ನೊಳಗೊಂಡು ಈ ಶಿವತೀರ್ಥನವರೆಗೆ ಬಹಳ ಜನ ಹೆಣ್ಣು ಕುರಿತು ಬರೆದಿದ್ದಾರೆ. ಈ ಐದೂವರೆ ಅಡಿಯ ಜೀವ ಚಿಕ್ಕೆಯಾದ ಹೆಂಗಸಿನ ಪ್ರತಿಯೊಂದು ಸೆಂಟಿಮೀಟರೂ ಪ್ರತಿಯೊಂದು ಸಂಬಂಧವೂ ದುರಂತವೂ ಬಂದು ಹೋಗಿವೆ. ಆದ್ದರಿಂದ ಹೊಸಕವಿ ಪ್ರಯತ್ನಪಟ್ಟು ಬೇರೆ ವಸ್ತು ತೆಗೆದುಕೊಳ್ಳಬೇಕು. "ಮುಡಿ"ಯಂತಹ ಕವನಗಳಲ್ಲಿ ಶಿವತೀರ್ಥ ಗುಡಿಯಲ್ಲಿ ನಡೆವ ಶೋಷಣೆಯ ಚಿತ್ರ ಕೊಡುತ್ತ

"ಕಂಡಿರ ಕಾಣದವನ
ಕಾಣುವುದೆಲ್ಲಿ
ಪಾಪಿಗಳಿರಾ!"

ಎಂದು ಹೇಳಿ

"ಮಿಕ್ಕ ನೂರ್ಕೋಟಿ ಚಿಲ್ಲರೆ
ದೈವವ ಕ್ಯಾಕರಿಸಿ ಉಗಿದು
ಉಚ್ಚೆ ಹೊಯ್ದುಬಿಡಿ
ಭಾತಿಯಿಂದ
ಬದುಕೋದಕ್ಕಿಂತ ಬೇರಿಲ್ಲ ಕಲೆ
ಬನ್ನಿ ಕ್ರಿಯೆಗೆ ಒಳಗಾಗಿ"

ಎಂದು ಹೇಳುತ್ತಾನೆ.

ಸಂಸಾರದ ತಾಪತ್ರಯದ ಚಿತ್ರ ಗಳು, ಜಾತಿಯ ಸಣ್ಣತನದ ಚಿತ್ರಗಳು, ಬಡತನದ ವರ್ಣನೆಗಳು ಇಲ್ಲಿವೆ. ಹೆಂಗುಸನ್ನು ಕಂಡೊಡನೆ ಜೊಲ್ಲು ಸುರಿಸುವ ಪುಟ್ಟ ಹೋಗಿ 'ರಾಮಿ' ಎಂಬ ಪದ್ಯದಲ್ಲಿ ಕಸಗುಡಿಸುವ ಹೆಣ್ಣೊಂದರ ಚಿತ್ರ ಕೊಡುತ್ತಾನೆ. "ಬೆಳಗಾಗಿ ಮೂಡುತ್ತಾಳೆ ರಾಮಿ" ಎಂದು ಹೇಳುವ ಈತ ಆಕೆಯನ್ನು ಶೋಷಿಸುವವರ ಬಗ್ಗೆ ಬರೆದು ತಾನೂ ಅದರಲ್ಲಿ ಒಂದಾಗುವ ಉದಾರ ತೋರುತ್ತಾನೆ.

ಇನ್ನೊಂದು ಪದ್ಯ "ನಿಧಾನ ಕ್ರಾಂತಿ" ನನ್ನ ಅಚ್ಚು ಮೆಚ್ಚಿನದು. ಇಲ್ಲಿಯ 'ಭಗಭಗ' 'ಸರಸರ' 'ಗಕ್ಕನೆ' ಮುಂತಾದ ಅನುಕರಣ ಪದಗಳು ನನ್ನ ಕಿವಿಗೆ ಕಿರಿಕಿರಿ ಉಂಟುಮಾಡಿದರೂ ಕೆಲವು ಸಾಲು ನೋಡಬಹುದು.

"ಬುಡಕಟ್ಟಿನ ಸಂಥಾಲಿಗಳಲ್ಲಿ
ನಮ್ಮ ಹಲಕಟ್ ರೀತಿ ನೀತಿ ಆಚಾರ ವಿಚಾರಕ್ಕೆ
ಹೊರಗಾಗಿ-
ಹೆಣ್ಣುಗಳು
ಬೇಲಿಗೆ ಸರಸರ ಹರಿವ ಹಾವು ಪೊರೆ
ಬಟ್ಟಂತೆ ಬಟ್ಟೆ ಉಟ್ಟು
ಕ್ಯಾಣ ಕೆಣಕುತ್ತ ಪೇಟೆಗೆ ಬಂದರೆ ಸಾಕು-
ಮನೆ ಮಠ ಗುಡಿ ಗೋಪುರ
ಚರ್ಚು ಮಸೀದಿ ಬಸ್ತಿಯ
ಅಸ್ತಿ ಭಾರವೇ ಕುಸಿದು



ಗಂಡುಳ್ಳ ಗರತಿಯರೆಲ್ಲ
"ಇವರು ಯಕ್ಕುಟ್ಟೋಗ" ಅಂತ ಲಟಿಕೆ ಮುರೀತಾರೆ
ಒಟ್ಟಿನಲ್ಲಿ ಅರ್ಥ ಇಷ್ಟೆ
ನಿಧಾನ ಕ್ರಾಂತಿ ಮೊಳೆಯುತ್ತಿದೆ"

ಈ ಪದ್ಯದ ಚಿತ್ರಗಳು ಎರಡು ಬಗೆಯ ಜೀವನಗಳು ಸಂಧಿಸುವುದನ್ನು ತೋರುತ್ತವೆ. ಈ ಬುಡಕಟ್ಟಿನ ಹೆಣ್ಣುಗಳು ಕೇವಲ ತಮ್ಮ ಇರುವಿಕೆ, ಬರುವಿಕೆಯಿಂದಲೇ ರಕ್ತಹೀನ ಜನತೆಗೆ ಸವಾಲಾಗುತ್ತಾರೆ. ಅವರಲ್ಲಿ ಕಸಿವಿಸಿ ಹುಟ್ಟಿಸುತ್ತಾರೆ. ಯಾವುದೋ ಬದಲಾವಣೆ ತರುತ್ತಿದ್ದಾರೆ.

ಬ್ರಾಹ್ಮಣರ ನುಡಿಕಟ್ಟು ಸಾಮಾನ್ಯವಾಗಿ ಒಂದೇ ತರಹವಾದರೆ ಶೂದ್ರರದು ನೂರಾರು; ಅವರ ತುಡಿತಗಳು ಕೂಡ. "ಅತ್ತಲಿಂದ ಅವನೂ ಇತ್ತಲಿಂದ ಇವನೂ ಮತ್ತೆಲಿಂದಲೋ ಉವನೂ ಎರಗಿ ಸುತ್ತೇನೂ ಕಾಣದೆ ಕಣ್ಣು ಕತ್ತಲೆ ಕಟ್ಟಿದೆ"ಯೆಂದು ಒಂದು ಪದ್ಯದಲ್ಲಿ ಬರೆಯುತ್ತಾನೆ. ಶೂದ್ರರೆಲ್ಲರ ಸಮಸ್ಯೆ ಇದು. ಅವರು ತಮ್ಮ ಧ್ವನಿಯಾಗಿ ಹುಡುಕಬೇಕು. ಬೇಗ ಮೋಸ ಮಾಡುವ ಮಾತಿನ ತೆರೆಗಳನ್ನು ಕತ್ತರಿಸಿ ಹಾಕಬೇಕು. ಇದು ಆತನಿಗೆ ಸಾಧ್ಯವಾಗುತ್ತದೆಂಬುದನ್ನು ಹಲವು ಕವನಗಳು ತೋ[illegible] ಈತನ ಸಂಸಾರದ ತೊಡಕನ್ನು ಹೇಳುವ ಒಂದ[illegible] ಚೆನ್ನಾಗಿದೆ: ಅದನ್ನು ಹೆಂಡತಿ ನಿರ್ಮಲಾಗೆ ತೋರಿಸ[illegible] ಆಕೆ 'ಪರವಾಗಿಲ್ಲ, ಅಚ್ಚು ಮಾಡಿಸಿ' ಅಂದರಂ[illegible] ಸಿಟ್ಟು ಮಾಡುವಷ್ಟಾದರೂ ನೇರವಾಗಿದಿದ್ದರೆ [illegible] ಚೆನ್ನಾಗಿತ್ತು! ಸಿಟ್ಟು ಮಾಡಿ ಬೈದಿದ್ದರೆ ಈ ಕವನ[illegible] ಶಕ್ತಿ ಇದ್ದಂತಾಗುತ್ತಿತ್ತು!

ಈತನ ಈ ಪದ್ಯಗಳಲ್ಲಿ ನನಗೆ 'ದತ್ತು' [illegible] ಯೊಂದಿಗೆ ಜಗಳದ ಪದ್ಯ) 'ರಥ', 'ಬಯಕೆ', 'ಗಾಂ[illegible] ಹೆಜ್ಜೆ', 'ಪರದೇಶಿಗೆ', 'ರಾಮಿ', 'ಹಿಂದಿನಗಲಿದ [illegible] 'ಸಾವು', 'ತುಡಿವ ಜೀವಗಳು', 'ಬೆಳಕು' ಇವು [illegible] ಹಿಡಿಸಿವೆ. ಈತ ಕೇವಲ ಹಠದಿಂದ ಅಲ್ಲ, ಗು[illegible] ಕೂಡ ಕವಿ ಎಂಬುದನ್ನು ತೋರಿಸಿವೆ. ಒಂದು ರಿ[illegible] ಸಾಮಾಜಿಕತೆ ಮತ್ತು ಸಾಂಸಾರಿಕತೆಯ ಮೈ[illegible] ಪಡೆದಿವೆ.

ಪದ್ಯ ಬರೆಯುವುದು ಅನಂತತೆಯೊಂದಿಗಿನ [illegible] ದನಿಯ ಖಾಸಗಿ ಸಂಭಾಷಣೆ. ಈ ಅನಂತ[illegible] ಖಾಸಗಿತನಗಳ ನಡುವೆ ಎಲ್ಲೋ ಕೂತು ಪದ್ಯ [illegible] ಜನರೆ ಓದುಗರು. ಬೆಸ್ತರು, ಬೇಡರು, ಕುರುಬರು, [illegible] ನಮ್ಮಲ್ಲಿ ನಡೆಸಿದ ಸಾವಿರಾರು ವರ್ಷದ ಈ [illegible] ಸಂಭಾಷಣೆ ಅಲ್ಲಲ್ಲಿ ಕಾವ್ಯವಾಗಿ ಕಾಣಿಸಿಕೊಳ್ಳುತ್ತಿದೆ. ಶಿವತೀರ್ಥನದೂ ಒಂದು ಮುಖ್ಯ ದನಿಯಾಗ[illegible] ನನ್ನ ಪ್ರೀತಿಯ -ಮಿತ್ರ, ಸ್ನೇಹದ ಮನುಷ್ಯ ನನ್ನ[illegible] ಮಾತುಗಳಿಂದ ನಿರುತ್ಸಾಹಿಯಾಗದೆ ಬರೆಯುವ[illegible] ಎಷ್ಟಾದರೂ ನಾನೂ ಇವನಂತಹವನೇ ಅಲ್ಲವೆ?

1979 'ಬೆಸ್ತ'ಕ್ಕೆ ಮುನ್ನುಡಿ

****

ಕವಿ ಗೆಳೆಯ ಕೆ.ನ. ಶಿವತೀರ್ಥನ ಈ [illegible] ಪುಸ್ತಕಕ್ಕೆ ಎರಡು ಮಾತು ಬರೆದು ಕೊಡುವಾಗ ಸ[illegible] ಆತಂಕ ಎರಡೂ ಆಗುತ್ತಿದೆ. ಈತನ 'ಬೆಸ್ತ' [illegible] ಸಂಕಲನಕ್ಕೆ ಮುನ್ನುಡಿ ಬರೆದು ಕೊಟ್ಟವನು ನಾನು. [illegible] ಮಾಡುತ್ತ ಈತನ ಕವನಗಳಿಗೆ ಸಲ್ಲಬೇಕಾದ [illegible] ನೀಡಿದೆನೋ ಇಲ್ಲವೋ ಎಂಬ ಆತಂಕ ನನ್ನಲ್ಲಿ[illegible] 'ಗರೆಗಳು' ಸಂಕಲನದಲ್ಲಿ ಇದ್ದಕ್ಕಿದ್ದಂತೆ ಚಕಿತಗೊ[illegible] ಸಾಲುಗಳೂ, ಅನುಭವಗಳೂ ಇವೆ. ಶಿವತೀರ್ಥ ಕ[illegible] ಮನುಷ್ಯನಾಗಿ ಪಟ್ಟಪಾಡು, ಪಡೆದುಕೊಂಡ ಅ[illegible] ಇಲ್ಲಿದೆ. 'ಕುಶಲವ ಕುಶಲವಾ' ಎಂದು ಕೇಳಬಲ್ಲ ಚ[illegible] "ಸದಾಶುದ್ಧಿ ಬಯಸಿI ಶುದ್ಧಿಯಾಗದೆI ಸುದ್ದಿ[illegible] ಎಂಬಂತಹ ಜ್ಞಾನತನದ ಮಾತುಗಳು ಬೇಂದ್ರೆಯ[illegible] ಜ್ಞಾಪಿಸುತ್ತವೆ. "ಮೌನ ಓಲ್ಡ್ ಮಾಂಕ್I ಮಾತು[illegible] ಟ್ಯಾಂಕ್" ಎಂಬಂಥ ಸಾಲುಗಳು ಶಿವತೀರ್ಥನ [illegible] ಶೈಲಿಯನ್ನು ಹಿಡಿದಿಡುತ್ತವೆ. ಕವಿ ಬೆಳೆಯುವುದು, [illegible] ರೂಪಿಸಿಕೊಳ್ಳುವುದು ಕಾವ್ಯ ಬರೆಯುವ ಗೀಳನ್ನು [illegible] ನೋವಿನಿಂದ, ಪ್ರೀತಿಯಿಂದ, ನಿರಾಶೆಯಿಂದ, [illegible] ಸಾಧ್ಯತೆಯಿಂದ ಹೊಮ್ಮಿದ ನೋವಿನಿಂದ. ಶಿ[illegible] ಈ ನೋವಿನ ಕಡೆಗೆ ಚಲಿಸುತ್ತಿರುವುದನ್ನು ತ[illegible] ಅನೇಕ ಸೂಚನೆಗಳು ಈ ಸಂಕಲನದಲ್ಲಿವೆ. ಇಲ್ಲಿ[illegible] "ಗೆಂಡಗಯ್ಯ" ನನ್ನ ಅಚ್ಚುಮೆಚ್ಚಿನದು. ಅಷ್ಟೇನೂ[illegible] ಲಾಭದ ಆಕರ್ಷಣೆ ಇಲ್ಲದ ಕಾವ್ಯಕ್ಕೆ ಈತ ಅಂಟಿಕೆ[illegible] ವುದಂತೂ ಈತನ ಛಲ ಮತ್ತು ಅರ್ಪಣೆಯ [illegible] ತೋರುತ್ತದೆ. ಶಿವತೀರ್ಥನ ಸಾಲುಗಳು ಎಲ್ಲರ[illegible] ತಲುಪುವಂತಾಗಲಿ.

1989 'ಗರೆಗಳು' ಬೆನ್ನುಡಿ

****

ಕೆ.ಎನ್. ಶಿವತೀರ್ಥ ಕವನ ರಚಿಸುವುದನ್ನೇ [illegible] ಕೇಂದ್ರಕ್ರಿಯೆಯನ್ನಾಗಿ ಮಾಡಿಕೊಂಡವನು. ಇವನ[illegible] ಕಳೆದ ಮೂರು ದಶಕಗಳಿಂದ ಪರಿಚಿತನಿರುವ ವ್ಯಕ್ತಿ[illegible] ಯೌವನಿಗರಾಗಿದ್ದು ಬದುಕನ್ನು ಅದರೆಲ್ಲ ಸೌಭಾಗ್ಯದ[illegible] ಉಂಡು ಕರ್ಪೂರದಂತೆ ಉರಿಯಲ್ಲಿ ಕರಗಿಹೋಗ[illegible] ನಮ್ಮ ಗುಂಪಿನ ಒಂದು ಮುಖ್ಯ ಗದ್ದಲವಾಗಿ[illegible] ಈತ; ಒಂದು ಮುಖ್ಯ ನೆಮ್ಮದಿ ಕೂಡ ಆಗ[illegible] ನಮ್ಮೆಲ್ಲರ ಬರವಣಿಗೆಯ ಬಗ್ಗೆ ತನ್ನ ಅಭಿಪ್ರಾಯ[illegible] ಮದಗೊಳಿಸುತ್ತಿದ್ದವನು. ಈತನ 'ಗೆಂಡಗಯ್ಯ' ಪ[illegible] ಕಾಳಜಿಗಳಲ್ಲಿ, ಹೆಮ್ಮೆಗಳಲ್ಲಿ ಒಂದೆನ್ನುವುದು ಕುತೂ[illegible] ಒಂದು ಕಡೆ ವ್ಯಾಸ, ವಾಲ್ಮೀಕಿಯಂತೆ ಇವನಿಗೆ [illegible] ಗೆಂಡಗಯ್ಯ ಇನ್ನೊಂದು ನಿಟ್ಟಿನಿಂದ ಇವನ ಬೆಸ್ತ ಜ[illegible] ಆದಿಪುರುಷ. ಈತನನ್ನು ಸೃಷ್ಟಿಸುವಾಗ ಶಿವತೀರ್ಥ[illegible] ಏಕಾಗ್ರತೆ ತೋರುತ್ತಾನೆ; ಈತನ ಬೆಸ್ತ ಜನಾಂಗ[illegible] ಉಸಿರು, ನೋವು ಕೂಡ ಪ್ರತಿನಿಧಿಸುವ ಗೆಂ[illegible] ಇವನ ಧಾರ್ಮಿಕ ಆರಾಧ್ಯ ಪುರುಷ ಕೂಡ ಆ[illegible] ಇಲ್ಲಿಯ ಅನೇಕ ಸಂಕೇತಗಳು ಗ್ರಹಿಕೆಗೆ ಸಿಕ್ಕುತ್ತವೆ[illegible] ಹಿರಿಯ ಕವಿಗಳ ಆಸರೆಯನ್ನು ಈತ ಪಡೆದಂತಿದೆ[illegible] ಗೆಂಡಗಯ್ಯನ ರೂಪಕ ಇನ್ನೂ ಅರ್ಥಪೂರ್ಣ[illegible] ಬರಬಹುದಾಗಿತ್ತು ಅನ್ನಿಸುತ್ತದೆ.

ನಮ್ಮೆಲ್ಲರ ಕೃತಿಗಳನ್ನು ವಿಮರ್ಶಿಸಿ (ಅಂದರೆ [illegible] ಖುಷಿಗೊಳಿಸುತ್ತಿರುವ ಶಿವತೀರ್ಥನ ಬಗ್ಗೆ ಕಟುವಾ[illegible] ಸಾಧ್ಯವಿಲ್ಲ. ಹಾಗೆಯೇ ಈತನ ಮೆಚ್ಚಿನ ಗೆಂಡ[illegible] ಬಗ್ಗೆ ಕೂಡ. ಇದು ಓದುಗರಿಗೆ ತಿಳಿಯುತ್ತದೆ[illegible] ಭಾವಿಸುತ್ತೇನೆ.

-1999 ಪಿ.[illegible]

ಗೆಳೆಯನಾದ ಗುರು ಶಿವತೀರ್ಥನ್!

ವತೀರ್ಥನ್ ಒಂದು ವರ್ಷ ನನಗೆ ಪಾಠ ಹೇಳಿದ ಾಗಿದ್ದರು. 1970 ರಲ್ಲಿ ನಾನು ಮೈಸೂರು ಮಯ್ಯನವರ ಕಾಲೇಜು ಸೇರಿದ್ದೆ. ಅದನ್ನು ಕೆಲವರು ಮಯ್ಯನವರ ದೊಡ್ಡಿ ಎಂತಲೂ ಕರೆಯುತ್ತಿದ್ದರು. ೊಡ್ಡಪ್ಪನ ಮಗ ಚಿಕ್ಕಯ್ಯ ಮುನಿಸಿಪಲ್ ಹಾಸ್ಟೆಲಿನಲ್ಲಿ ಕೆಲಸ ಮಾಡುತ್ತಿದ್ದರು. ಆತ ಮದುವೆಯೊಂದಕ್ಕೆ ಬಂದಾಗ ಅದಾಗ ತಾನೆ ಎಸ್ಸೆಸ್ಸೆಲ್ಸಿ ಪಾಸಾಗಿದ್ದ ಆತನ ಕಣ್ಣಿಗೆ ಬಿದ್ದೆ. ಕೂಡಲೇ ಚಿಕ್ಕಯ್ಯ ನನ್ನನ್ನು ೂರಿಗೆ ಕರೆದುಕೊಂಡು ಹೋಗಿ ಮುನಿಸಿಪಲ್ ವಾರ್ಡನ್ ಆಗಿದ್ದ ವೆಂಕೋಬರಾವ್ ಶಿಫಾರಸ್ಸಿ ಬನುಮಯ್ಯನವರ ಕಾಲೇಜು ಸೇರಿಸಿದ್ದರು. ಆ ನಲ್ಲಿ ಎಂತೆಂತಹ ಘಟಾನುಘಟಿ ಉಪನ್ಯಾಸಕರಿದ್ದರು ದು ಕಾಲೇಜು ಬಿಟ್ಟ ನಂತರ ನನಗೆ ತಿಳಿಯಿತು. ಶಿವತೀರ್ಥನ್ ಕೂಡ ಒಬ್ಬರು.

ವತೀರ್ಥನ್ ಆದಾಗತಾನೆ ಎಂ.ಎ. ಮುಗಿಸಿ ಬಂದ ಉಪನ್ಯಾಸಕ. ಆ ಕಪ್ಪನೆಯ ಮುಖದಲ್ಲಿ ಕಣ್ಣು ಹೊಳೆಯುತ್ತಿದ್ದವು. ಸದಾ ಉತ್ಸಾಹದಿಂದ ುತ್ತಿದ್ದ ಅವರ ನಡಿಗೆ ನೋಡುವುದೇ ಚೆಂದ. ೊಗಿ ಪ್ಯಾಂಟಿನ ಶೈಲಿಯ ಟೈಟಾದ ಪ್ಯಾಂಟು, ತೊಟ್ಟು ಬರುತ್ತಿದ್ದ ಅವರನ್ನೊಮ್ಮೆ ಅಗ್ರಹಾರದಲ್ಲಿ ಲಿಸಿದೆ. ಇಂತದೇ ಕಾಲವಾದ್ದರಿಂದ ನಾಯಿಗಳು ುತ್ತಿದ್ದವು. ಅದನ್ನು ನನ್ನಷ್ಟೇ ಕುತೂಹಲದಿಂದ ತ್ತಾ ನಿಂತ ಗುರುವನ್ನು ನೋಡಿದ ನನಗೆ ಇವರು ಯೇ ಎಂದು ನೆನೆಸಿಕೊಂಡು ಖುಷಿಯಾಯ್ತು. ರಸ್ತೆಯಲ್ಲಿ ಹೋಗುವಾಗ ಕಣ್ಣಿಗೆ ಬಿದ್ದ ಹ್ಯಾಂಡ್ ಣನ್ನ ತೆಗೆದು ನೋಡಿ ಹೋಗುತ್ತಿದ್ದರು. ಹಳ್ಳಿಯಿಂದ ಬಾರಿ ಪಟ್ಟಣಕ್ಕೆ ಹೋಗಿದ್ದ ನನಗೆ ಹಳ್ಳಿ ಭಾಷೆ ಾಡುತ್ತಿದ್ದ ಶಿವತೀರ್ಥನ್ ಬಹಳ ಇಷ್ಟವಾಗಿದ್ದರು. ಪಾಠವಂತೂ ಹಾಸ್ಯೋತ್ಸವದಂತಿತ್ತು. ಹೆಣ್ಣುಮಕ್ಕಳು ಟೆವತು ಹೋಗುತ್ತಿದ್ದರು. ನಾನಾಗಲೇ ಹೇಳಿದಂತೆ ಂಗಿ ಪ್ಯಾಂಟಿನ ದೆಸೆಯಿಂದ ಅವರ ಕಾಲು ಲಿನಂತೆ ಕಂಡು ನಗು ತರಿಸುತ್ತಿತ್ತು. ಅವರ ಕಾಲನ್ನೇ ುತ್ತಿದ್ದ ಹುಡುಗನೊಬ್ಬನಿಗೆ "ಕಾಲೇನ್ನೋಡ್ತಿ ಮುಖ ಯ್ಯ" ಎಂದು ನಗಿಸಿದ್ದರು. ಅವರ ದನಿಯೂ ಅಕ್ಕಪಕ್ಕದ ರೂಮಿನಲ್ಲಿ ಪಾಠಮಾಡುವ ಉಪನ್ಯಾಸಕ ಂದರೆ ಕೊಡುತ್ತಿತ್ತು. ನಮ್ಮ ನಗುವಿನ ಸ್ಫೋಟದಿಂದ ದ ಕ್ಲಾಸಿಗೂ ತೊಂದರೆಯಾಗುತ್ತಿತ್ತು. ಯಾವುದಾದರೂ ನಗುವಿನ ಸ್ಫೋಟವಾದರೆ ಅಲ್ಲಿ ಶಿವತೀರ್ಥನ್ ುದೇ ಅರ್ಥ. ಆಗ ಅವರು ಕವಿ ಎಂಬುದು ಗೊತ್ತಿರಲಿಲ್ಲ. ಅವರು ರಸವತ್ತಾಗಿ ಪಾಠ ಮಾಡು ದ, ನಾನು ಕನ್ನಡದಲ್ಲಿ ಮಾತ್ರ ಪಾಸಾಗಿ ಉಳಿದ ನಲ್ಲಿ ಹೀನಾಯವಾಗಿ ಫೇಲಾದೆ. ಆನಂತರ ಊರಿಗೆ ಕುರಿ ಎತ್ತುಗಳೊಂದಿಗೆ ಬೇಸಾಯದ ಕೆಲಸದಲ್ಲಿ ುದೆ.


ಅದಾದ ಒಂದೂವರೆ ದಶಕದ ನಂತರ ಪತ್ರಿಕೆ ಆಫೀಸಿಗೆ ಹೋದಾಗ ಅಲ್ಲಿ ಶಿವತೀರ್ಥನ್ ಕೂತಿದ್ದರು. ನಾನು ತುಂಬಾ ಖುಷಿಯಿಂದ ಪರಿಚಯಿಸಿಕೊಂಡು, ಒಂದು ವರ್ಷ ಅವರ ಶಿಷ್ಯನಾಗಿದ್ದುದನ್ನು ಹೇಳಿದ್ದೇ ತಡ, ಲಂಕೇಶರಿಗೆ "ಈತ ನನ್ನ ಶಿಷ್ಯ ಸಾರ್" ಎಂದು ಹೆಮ್ಮೆಯಿಂದ ಹೇಳಿದರು. ಆಗ ಲಂಕೇಶರು "ನಾನಂಗನ್ನಂಡೆ ಕಣಯ್ಯ. ಇಂಥೋನು ನಿನ್ನ ಶಿಷ್ಯ ಅಲ್ಲದೆ ಇನ್ಯಾರಿಗೆ ಶಿಷ್ಯ ಅಂತ" ಎಂದು ನಕ್ಕರು. ಅದಾಗಲೇ ಎಣ್ಣೆಯ ಸಮಯವಾದ್ದರಿಂದ ಲಂಕೇಶ್ ವಿಸ್ಕಿ ತರಿಸಿ ಕೊಟ್ಟು ಶಿವತೀರ್ಥನ್ ಮಾತಾಡಲು ಅವಕಾಶ ಕೊಟ್ಟರು. ಎಂದಿನಂತೆ ಲಂಕೇಶ್ ಈಚೆಗೆ ಬರೆದ ಕತೆ ಮತ್ತು ಲೇಖನಗಳ ಸಾಲುಸಾಲುಗಳನ್ನು ಹೆಕ್ಕಿ ತೆಗೆದು ಅವು ತೋರುವ ದರ್ಶನವನ್ನು ಮನವರಿಕೆ ಮಾಡಿ, ಅಂತವುಗಳಲ್ಲೂ ಪ್ರಾಸದ ಹಾಸ್ಯ ಉಕ್ಕಿಸುತ್ತಿದ್ದರು. ಲಂಕೇಶ್‌ರು ಸೂಕ್ತ ಸಮಯದಲ್ಲಿ ಪಾರ್ಟಿ ಮುಕ್ತಾಯಗೊಳಿಸುತ್ತಿದ್ದರು. ಅದರಂತೆ ಗಡಿಯಾರ ನೋಡಿ "ಸರಿ ನಡೀರಿ ಎಂದರು". ನನ್ನ ಗುರುಗಳು ಅವರ ಗುರುವಿನ ಹತ್ತಿರ ಹೋಗಿ ತಬ್ಬಿಕೊಂಡು ಒಂದುಕ್ಷಣ ಧ್ಯಾನಸ್ಥರಂತೆ ಕಣ್ಣುಚ್ಚಿದರು. ಲಂಕೇಶ್ "ಸಾಕು ನಡಿಯೋ" ಎಂದು ಬೆನ್ನು ಸವರಿದರು. ಇದೀಗ ತಾನೆ ಗಹಗಹಿಸುತ್ತಿದ್ದ ಶಿವತೀರ್ಥನ್ ದನಿ ಏಕದಂ ಗದ್ಗದಿತವಾಗಿತ್ತು. ಮೇಷ್ಟ್ರನ್ನು ಬೀಳ್ಕೊಟ್ಟ ನಂತರ ನಾನೂ ಹೊರಟೆ. ಕೂಡಲೇ ಕೈಹಿಡಿದ ಗುರುಗಳು "ಎಲ್ಲಿಗೋಗ್ತಿಯಯ್ಯ. ಊಟ ಮಾಡುಸ್ತೀನಿ ನಡಿ" ಎಂದು ಹತ್ತಿರವೇ ಇದ್ದ ತಲೆಬಾಡಿನ ಹೋಟೆಲಿಗೆ ಕರೆದೊಯ್ದರು. ಸಪ್ಲೈಯರ್‌ಗೆ ಕೂಡ "ನನ್ನ ಶಿಷ್ಯ. ಭಾಳ ದಿನಗಳ ಮೇಲೆ ಸಿಕ್ಕಿದಾನೆ. ಒಳ್ಳೆ ತಲೆಮಾಂಸ ಕೊಡು" ಎಂದು ಆರ್ಡರ್ ಮಾಡಿದರು. ನಾನು ಬನುಮಯ್ಯನವರ ಕಾಲೇಜ್ ವಿಷಯ ಕೆದಕಿ ಅಲ್ಲಿದ್ದ ವೆಂಕೋಬರಾವ್ ಎಂಬ ಆರೆಸ್ಸೆಸ್ ಸಂಘಟಕ ಹೇಗಿದ್ದಾನೆ ಎಂದೆಲ್ಲಾ ವಿಚಾರಿಸಿದೆ. ಏಕೆಂದರೆ ಆತ ಹುಡುಗರನ್ನು ಪತ್ತೆಹಚ್ಚಿ ಆರೆಸ್ಸೆಸ್ ಸೇರುವಂತೆ ಮಾಡುತ್ತಿದ್ದರು. "ಅಯ್ಯೋ ಅವ್ನುನೀಗ ಕುಬೇರ. ಅವ್ನ ಸುದ್ದಿ ಯಾಕೆ ಸುಮ್ನೆ ತಲೆ ತಿನ್ನು" ಎಂದು ಗುರುಗಳು ಗಹಗಹಿಸಿ ನಕ್ಕರು. ಬಿಲ್ ಕೊಡುವಾಗ ಸಪ್ಲೈಯರ್ ಕರೆದು ಟಿಪ್ಸ್ ಕೊಟ್ಟರು. ಟೇಬಲ್ ಕ್ಲೀನ್ ಮಾಡಿದ ಹುಡುಗನನ್ನು ಕರೆಸಿ ಅವನ ಕೈಗೂ ಕಾಸಿಟ್ಟು "ನಿನ್ನೆಸರೇನಯ್ಯಾ?" ಎಂದರು. ಹುಡುಗ ಹೇಳಿತು. "ನನ್ನೆಸರೇನು ಅಂತ ಕೇಳ್ಬಿಲ್ಲ ನೀನು. ಶಿವತೀರ್ಥನ್ ಅಂತ. ಮೈಸೂರಿನ ಬನುಮಯ್ಯ ಕಾಲೇಜಲ್ಲಿ ಕನ್ನಡ ಪಾಠ ಮಾಡ್ತಿನಿ. ಬರ್ಲಾ ಮರಿ" ಎಂದು ಹೊರಟರು. ಕ್ಯಾಷಿಯರ್ ಸಮೇತ ಅಲ್ಲಿ ನಿಂತವರ ಮುಖದಲ್ಲಿ ನಗು ಮೂಡಿತು. ಅಲ್ಲಿದ್ದವರು ನನ್ನ ಗುರುವನ್ನು ಜಾಸ್ತಿ ಕುಡಿದು ಔಟಾದವರೆಂದು ಭಾವಿಸಿದ್ದರು. ಹೋಟೆಲಿಂದ ಹೊರಬಂದ ನಂತರ "ನಿಮ್ಮನ್ನು ಬಸ್ಸತ್ತಸ್ಲ ಸಾರ್?" ಎಂದೆ. "ಬೇಡ. ಮೈಸೂರು ರೋಡಿಗೋಗಿ ಅಲ್ಲಿ ಯಾವುದಾದ್ರೂ ಲಾರಿ ಹತ್ತಿಗಳ್ತಿನಿ. ತಿಂಗಳ ಬೆಳಕು ಚನ್ನಾಗ್ಯದೆ. ಹೊರಕ್ಕೆ ತಲೆ ಹಾಕಿ ಚಂದಮಾಮನ್ನ ನೋಡಿಕೊಂಡೋಯ್ತಿನಿ" ಎಂದು ಹೊರಟುಬಿಟ್ಟರು.

ಲಂಕೇಶರು ರೇವಜೀತು ಪ್ರಕರಣದ ವಿರುದ್ಧ ಸಂಬಂಧಪಟ್ಟ ಜಾಗದಲ್ಲಿಯೇ ಪ್ರತಿಭಟನೆ ಹಮ್ಮಿಕೊಂಡಿದ್ದರು. ಅಲ್ಲಿಗೆ ಸ್ಲೋಗನ್ ಬರೆದುಕೊಂಡು ಬಂದಿದ್ದ ಶಿವತೀರ್ಥನ್ 'ನಾವು ಎಂದರೆ ರಕ್ಷಕರು. ನೀವು ಎಂದರೆ ಭಕ್ಷಕರು" ಎಂದು ನಡುಗುವ ಆಕ್ರೋಶದ ದನಿಯಲ್ಲಿ ಅಬ್ಬರಿಸುತ್ತಿದ್ದರು. ಬರೀ ಘೋಷಣೆ ಕೂಗಲ್ಲ, ಇಲ್ಲಿ ಹಾಕಿರೊ ಬೇಲಿನ ಕಿತ್ತು ಹೊಗಿತಿನಿ ಎಂದರು. ಅಂತಹ ಪ್ರತಿಭಟನೆಯ ದನಿಯೂ ನಮ್ಮಲ್ಲಿ ನಗು ಉಕ್ಕಿಸಿತು. ಲಂಕೇಶರಿಗೆ 60 ವರ್ಷ ತುಂಬಿದಾಗ ರಾಮದಾಸರು ಮೈಸೂರಿನಲ್ಲಿ ಎರಡು ದಿನಗಳ ಗೋಷ್ಠಿ ಏರ್ಪಡಿಸಿದ್ದರು. ಲಂಕೇಶ್ ಸಾಹಿತ್ಯದ ಜೊತೆಗೆ ತೇಜಸ್ವಿ ಅನಂತಮೂರ್ತಿಯವರ ಸಾಹಿತ್ಯವನ್ನು ಸೇರಿಸಿ ಗೋಷ್ಠಿ ಏರ್ಪಡಿಸಿದ್ದರು. ಅದರಲ್ಲಿ ಲಂಕೇಶರ ಸಿನಿಮಾಗಳನ್ನು ಕುರಿತ ಗೋಷ್ಠಿಗೆ ಜಿ.ಕೆ. ಗೋವಿಂದ ರಾವ್ ಅಧ್ಯಕ್ಷರಾಗಿದ್ದರು. ನಿರೂಪಕರಾಗಿದ್ದ ಶಿವತೀರ್ಥನ್ "ಈ ಸಭೆಗೆ ಎಲ್ಲರನ್ನೂ ಸ್ವಾಗತಿಸೋದಕ್ಕೆ ಮೊದಲು ಹೃತ್ಪೂರ್ವಕವಾಗಿ ನನ್ನನ್ನೆ ನಾನು ಸ್ವಾಗತಿಸಿಕೊಳ್ತಿನಿ" ಎಂದಾಗ ನಗುವಿನ ಅಲೆ ಎದ್ದಿತು. ನಂತರ "ನಟ ಭಯಂಕರರಾದ ಗೋವಿಂದರಾಯರ ಪಕ್ಕ ನಾನಿರೋದು ಒಂದು ಕಪ್ಪು ಪರದೆಯಿದ್ದಂಗೆ. ಲಂಕೇಶರ ಸಿನುಮಾ 'ಪಲ್ಲವಿ'ಯಲ್ಲಿ ನಾನು ಒಂದು ಪಾತ್ರ ಮಾಡಿದ್ದೆ. ಸಿನುಮಾ ರಿಲೀಜಾದಾಗ ನೋಡಿದ್ರೆ ನನ್ನ ಪಾತ್ರನೇ ಇರಲಿಲ್ಲ. ಆಗ ಲಂಕೇಶರನ್ನ ಕೇಳಿದ್ದಕ್ಕೆ 'ಏ, ಅಲ್ಲಿ ಬ್ಲಾಕ್ ಔಟಾಗಿದೆಯಲ್ಲಯ್ಯ ಅಲ್ಯಲ್ಲಿ ನೀನೇ ಇರದು' ಎಂದರು. " ಎಂದೆಲ್ಲ ಹೇಳಿ "ಹೀಗೆ ನಿರೂಪಕನಾಗಿದ್ದ ಶಿವತೀರ್ಥನ್ ಎಲ್ಲರನ್ನು ವಿದೂಷಕನಂತೆ ನಗಿಸಿದ್ದರು.

ಅದಕ್ಕೂ ಮೊದಲು ಸಭಾಂಗಣದ ಹೊರಗೆ ಕುಳಿತಿದ್ದ ತೇಜಸ್ವಿ ಶಿವತೀರ್ಥನ್ ಕಾಣಿಸಿಕೊಂಡ ಕೂಡಲೇ "ಏನೋ ಬುಂಡೆ ಬೆಸ್ತ?" ಎಂದರು. ಕೂಡಲೇ ಗಹಗಹಿಸಿದ ಶಿವತೀರ್ಥನ್ ನಗುವಿನಿಂದಲೇ ಸುತ್ತಲಿನವರನ್ನು ಬೆಚ್ಚಿಸಿದ್ದರು. ನಂತರ ತೇಜಸ್ವಿ ಎದ್ದು ಹೊರಟಕೂಡಲೇ ಅವರನ್ನು ನೋಡುತ್ತ ಮುಂದೆ ಹೆಜ್ಜೆ ಇಡುತ್ತ ಒಂದು ರೀತಿ ಆನೆ ಮಾವುತನ ನಡಿಗೆ ದೃಶ್ಯ ಸೃಷ್ಟಿಸಿದರು.


ಇಂತಹ ನಮ್ಮ ಗುರು ಕ್ರಮೇಣ ಗೆಳೆಯರಾಗಿದ್ದರು. ಅವರಿದ್ದಲ್ಲಿ ನಗುವಿನ ಅರ್ಭಟ ಇದ್ದೇ ಇರುತ್ತಿತ್ತು. ಮಾತನ್ನು ಸೀಳಿ ಪ್ರಾಸಮಾಡಿ ನಗಿಸಿ ನಕ್ಕು ತಾವೇ ಸುಸ್ತಾಗುತ್ತಿದ್ದರು.

ಈ ಮಾತುಗಾರ ಗುರುವು ಮೌನ ವಹಿಸಿ ಮೂರ್‍ನಾಲ್ಕು ವರ್ಷಗಳೇ ಆಗಿದ್ದವು. ನಿಜಕ್ಕೂ ಅವರು ಮಾತು ಕಳೆದುಕೊಂಡಾಗಲೇ ತೀರಿಹೋಗಿದ್ದರು. ಇಂತಹ ಗುರುವಿನ ಮಾತನ್ನೇ ಕಿತ್ತುಕೊಂಡ ಆ ವಿಧಿ ಅಥವಾ ಅದ್ಯಾವ ಮಣ್ಣು ಮಸಿಯೋ ಅದಕ್ಕೆ ಧಿಕ್ಕಾರವಿರಲಿ! ಅಂತಹ ಧಿಕಾರವನ್ನು ನನ್ನ ಗುರುವೇ ತಮ್ಮ ಅವ್ಯಕ್ತ ಭಾವ ಮತ್ತು ಕಣ್ಣೀರಿನಿಂದಲೇ ವ್ಯಕ್ತಪಡಿಸುತ್ತಿದ್ದರು. ಅದಕ್ಕೂ ಅಂತಿಮ ತೆರೆಬಿದ್ದು ಶಿವ ತೀರ್ಥನ್ ಕಟ್ಟ ಕಡೆಯ ನಿಸ್ಸಹಾಯಕ ದಿನಗಳಿಗೆ ವಿದಾಯ ಹೇಳಿದ್ದಾರೆ.



• ಬಿ. ಚಂದ್ರೇಗೌಡ

ಗೆಂಡಗಯ್ಯ



ಡುಗಾಯಿ ಒಂದು
ುರಂ ಕೋಳಿ ಕೂಗ್ತ
ನೆ ಸೂರ್ಯ
ಳಿ ಕುಂತು ನಿಂತು ಆಡಾಡುತ್ತ
ಡುತ್ತ ಓಡುತ್ತ
ಕೊತಾವೆ
ಸು ಕೋಳಿ ಕುಟುಕಿನ ಜೀವ

ಸ್ನು ಒಪ್ಪರಸಲು
ವಡಿ ಕಟ್ಟೆ
ೀವು ಯಸನ ತಳಮಳ
ೀತಾವೆ ಕಣ್ಣು
ುಕೆ ಅಸಿವು ದಾವು
ಚಾತಾವೆ ಕಣ್ಣು

ಸ ಕೊಚ್ಚಿನೀರು
ಎರೆ ಉಳ ಗಾಳಕ್ಕೆ
ದು ಗಾಳ ಬೀಸಿ ಬಲೆ
ಸ್ತು ಕುಂತವ್ನೆ ಸಂತ

ಊರಲ್ಲಿ ಚಳಿ ಚಳಿ ಬಿಸ್ಲು
ೀರು ಸೀರು ಕೂರೆ ಕುಕ್ಕ
ುಸ್ನಿ ಯೆಂಗ್ಸ್ರು
ಊ ಮಾತು
ಕುಂತವ್ನೆ ಸಂತ

ಬೆಂದು ಉರೀತಾರೆ
ಸೀಗಡಿ ನಳ್ಳಿ ಸಿಕ್ತೆ
ಸೊಪ್ಪು ಅಂಬ್ಲಿ ದಕ್ತೆ
ಕಂತೋಯ್ತು

ಬರಿಬಾಯಿ ಬರಿಗೈ
ಕುಕ್ಕೆ ಬರಿಬರಿದೆ
ಕರೆಕೋತ ಕುಂದಿ

ಸುರೀತ ಕಾವಳ ಎಲುವೆಲ್ಲ ಥಂಡಿ
ಬರೀದೆ ಕುಂತವ್ನೆ ಸಂತ

ಕರಿಕಾಲ ಕಣ್ಣಿಬಿಟ್ಟದ ಮಾದಪ್ಪ
ನಂಜೆಲ್ಲ ನಂಜುಂಡಪ್ಪ
ಇಟ್ಟಂಗೆ ಇರ್ತಿವಿ ಸಾಪಾಳ್ಸಬ್ಯಾಡ
ಸಂತ ಮಾಡಾಕೆ ದಮ್ಮಡೀನೆ ಸೊನ್ನೆ,
ಸೊನ್ನೆ ಕುಂತವ್ನೆ ಸಂತ
ಸಿಡಿಲು ಗುಡುಗು ಬಂತೋ ಮಳೆ
ನಳ್ಳಿ ಸೀಗಡಿ ಮೀನ ಹೊಳೆ
ತೋರ ತೋರ ಮಾಪೂರ
ತೊಡೆ ಲಂಬ ತಲೆ ತೋರ ನೀರ ಬಾಳೆ

ಊರಿಗೆ ಊರೇ ವೊತ್ತು
ವೊತ್ತು ವೊತ್ತೂ ಸುಸ್ತು
ನಾಸ್ಟ ಅದೇ ಊಟ್ಕೋದು ಅದೇ ಅದೇ
ಉಂಡ್ರೂ ಕುಂತವ್ನೆ ಸಂತ

ಗಮಗಮಾ ದೂಪ ದೀಪ ದಾತು
ತಾಪ ತಪಿಸಿ ಒಡ ಮೂಡಿದ್ದೇ ಮಾತು

ಈಡುಗಾಯಿ ಮತ್ತೊಂದು

ಗೆಂಡಗಯ್ಯ ಗೆಂಡಗಯ್ಯ ನಾನಿನ್ನ ಪಿಲ್ಲ
ಮಾಬಾರತದ ಮೂಲ ಯಾಸ
ಸತ್ಯವತಿ ಅವ್ವ ಪರಾಸರ ಅಯ್ಯ
ಸಂತನೂ ಅಯ್ಯ
ಕರ್ಣ ಅಯ್ಯೋ ಪಾಪ ಮಾತ್ಮ

ತನಗೆ ತಾನೆ ಅದ್ರ
ಬಲೆ ಬೀಸ್ತ
ಗಾಳ ಆಕ್ತ
ತಪಿಸ್ತ ಕುಂತವ್ನೆ ಸಂತ

ಗೆಂಡಗಯ್ಯ ಗೆಂಡಗಯ್ಯ
ಬಾಬಾ ನಾ ಪಾತ್ರಿ

ನೀ ಯಾ ಲೋಕ ಕಂಡೆ
ನೀ ಯಾ ಪಾಕ ಉಂಡೆ

ನಾ ಆ ಲೋಕ ಕಾಣ್ತೇನಿ
ನಾ ಆ ಪಾಕ ಉಣ್ತೇನಿ

ದುಂಡಿ ಮಾದವ್ವ ಪಟ್ಟಲದಮ್ಮ
ಕರಿಕಾಲಕಣ್ಣಿ ಪಟ್ಟಲದಮ್ಮ
ಒಳಗೆರೆ ವುಚ್ಚಿ ಪಟ್ಟಲದಮ್ಮ

ಚಗು ಚಗ್ಗು ಚಗು ಚಗ್ಗು
ಚಗ್ಗುಣಕ್ಕನ್ ಚಗ್ಗುಣಕ್ಕನ್

ಪೂಜೆ ವೊತ್ತು ಪೂಜೆ ಕುಣಿ
ಪೂಜೆ ಬಳ್ಸಿ ಪೂಜೆ ಕುಣಿ
ನಾ ತಡೀಲಾರೆ ನಾ ಕುಣೀಲಾರೆ
ನಾ ಕುಣೀತೀನಿ ನಾ ತಡೀತೀನಿ

ಓ ಅಬೂತ
ಬೋಪಸಂದು

ಏನವ್ವ ಚೆಂದ ಒಳಗೆರೆ ಕೋಡಿ
ಕೋಡೀಲೆ ಮಗ್ನ ಕುಂತವ್ನೆ ಸಂತ
ಓಲಗ ಬಯ್ಯೋ ಮಲೆ ಮಾದಯ್ಯ
ಬಾ ಮಾದಯ್ಯ ಓಲಗ ಬಯ್ಯೋ

ಸುತ್ತೇಳು ಮಲೆ ಮಾದಯ್ಯ
ಮುತ್ತಿರುವ ಕಾಡು ಮಾದಯ್ಯ
ವುಲಿವಾನ ಮಾದಯ್ಯ
ಅಕ್ಕಿ ಚಲಿಮಿಲಿ ಮಾದಯ್ಯ

ಕಾವಿ ಕೌಪೀನ ಮಾದಯ್ಯ
ಮಾಟ ಚೆಂಬೊನ್ನು ಮಾದಯ್ಯ
ಕೆಂದೂಳಿ ಬಟ್ಟು ಮಾದಯ್ಯ
ಇಬೂತಿ ಪಟ್ಟು ಮಾದಯ್ಯ

ಮೆಳೆ ಬಿದಿರು ಮಾದಯ್ಯ
ಕೊಳಲೂದಿ ಮಾದಯ್ಯ
ಕರೆದಾವೆ ಮಾದಯ್ಯ
ಆಲು ಅಯನು ಮಾದಯ್ಯ

ಗೆಂಡಗಯ್ಯ ಗೆಂಡಗಯ್ಯ ನಾ ಪಾತ್ರಿ
ರಾತೋ ರಾತ್ರಿ ಜಾತ್ರಿ

ಮಂದಿ ದೊಂದಿ ಕುಣಿತಾ
ದೊಂದಿ ಮಂದಿ ಕುಣಿತಾ
ಉಘೇ ಉಘೇ

ಒಕ್ಕಳ ಕುಡಿ ಕಾಯೊ
ಒಡ್ಲು ಗುಡ್ಲು ಕಾಯೊ
ಮಾನ ಮರ್‍ವಾದಿ ಕಾಯೊ
ಅಂಗಂಗೆ ಕುಂತವ್ನೆ ಸಂತ

ಗೆಂಡಗಯ್ಯ ಗೆಂಡಗಯ್ಯ ಬಿತ್ನೆ ಬೀಜ
ಗೆಂಡಗಯ್ಯ ಗೆಂಡಗಯ್ಯ ರತ್ನ ಸಾಜ

ಗಿಡ ಮರ ಚಿಗುರಿ
ಅಕ್ಕಿ ದನಿ ಚದುರಿ
ಚಿಗರೆ ಮರಿ ಎಗುರಿ

ಆ ಎಸಳಿನ ವೂವು
ಆ ಅಣ್ಣುಕಾಯಿ
ಮಾಗಿ ಕುಂತವ್ನೆ ಸಂತ

ಎಲೆ ಬಾಲೆ ವೂವು ವೊಂಬಾಳೆ
ಎಳನೀರು ತಳಿಗೆ ತಂಬಿಟ್ಟು
ತುಪ್ಪಾದ ಕಜ್ಜಾಯ ಕರ್ಪೂರ ಜೋತಿ
ಎತ್ತಿ ಮಾಡ್ತೀವಿ ತಂಪು

ಗೆಂಡಗಯ್ಯ ಗೆಂಡಗಯ್ಯ ಜೀವಂತ
ತದೇಕ ಕುಂತವ್ನೆ ಸಂತ ಮುಪಂತ

ಗಮ ಗಮಾ ದೂಪ ದೀಪ ದಾತು
ತಾಪ ತಪಿಸಿ ಒಡ ಮೂಡಿದ್ದೇ ಮಾತು

• ಕೆ.ಸ. ಶಿವತೀರ್ಥನ್

ಕಿ.ರಂ. ನೆನಪಿಗೊಂದು ನವಿಲುಗರಿ

ಪುಸ್ತಕ ಪರಿಚಯ



• ಚಂದ್ರಶೇಖರ್ ಐಜೂರ್

ಪ್ರೊ.ಕಿ.ರಂ.ನಾಗರಾಜರು ತೀರಿಕೊಂಡ ನೆನಪಿಗೆ ಕಳೆದ ಆಗಸ್ಟ್ 7ರಂದು ಒಂದು ವರ್ಷ ತುಂಬಿತು. ಅಕಾಡೆಮಿಕ್ ಮತ್ತು ಸಾಹಿತ್ಯ ವಲಯದ ಹಿರಿಕಿರಿ ವಿದ್ವಾಂಸರಷ್ಟೇ ಅಲ್ಲದೆ ಕಿ.ರಂ. ತಾವು ಪ್ರತಿದಿನ ಎದುರುಗೊಳ್ಳುವ ಅನೇಕರೊಂದಿಗೆ ಒಡನಾಟವಿಟ್ಟು ಕೊಂಡಿದ್ದರು. ಗಾಂಧಿಬಜಾರಿನ ವಿದ್ಯಾರ್ಥಿ ಭವನದ ಮಾಣಿಗಳು, ಗೋವಿಂದರಾಜ ನಗರದ ಪುಟ್ಟ ಗೂಡೊಂದರಲ್ಲಿ ಕಂಪ್ಯೂಟರ್ ಇಟ್ಟುಕೊಂಡು ಒಂದೂ ತಪ್ಪಿಲ್ಲದೆ ಡಿಟಿಪಿ ಮಾಡುವ ಹುಡುಗ, ಅವೆನ್ಯೂ ರಸ್ತೆಯ ಇರುಕು ಗಲ್ಲಿಯೊಂದರ ಕೆಸೆಟ್ ಅಂಗಡಿಯ ಮಾಲಿಕ, ಕತ್ತರಿಗುಪ್ಪೆಯ ರಸ್ತೆಬದಿ ಅಗ್ಗದ ರೇಟಿಗೆ ಡಿವಿಡಿ ಮಾರುವ ಹುಡುಗರು... ಹೀಗೆ ಕಿ.ರಂ. ಸಖ್ಯದಲ್ಲಿದ್ದವರ ಪಟ್ಟಿ ಬೆಳೆಯುತ್ತದೆ. ಹೊಸ ತಲೆಮಾರಿನ ವಿಮರ್ಶಕ ಪ್ರದೀಪ್ ಮಾಲ್ಗುಡಿ ಕಿ.ರಂ. ಜೊತೆ ಒಡನಾಡಿದ ಅಕ್ಷರ ಬಲ್ಲ ಜಗತ್ತಿನ ಅನೇಕ ಲೇಖಕರಿಂದ ಕಿ.ರಂ. ಕುರಿತ 12 ಕವನ ಮತ್ತು 50 ಲೇಖನಗಳನ್ನೊಳಗೊಂಡ 'ನಿಜದ ನಾಡೋಜ' ಕೃತಿಯನ್ನು ಅಪಾರ ಪ್ರೀತಿ ಮತ್ತು ಶ್ರಮದಿಂದ ರೂಪಿಸಿದ್ದಾರೆ.



ಈ ಕೃತಿಯ ಬಹುಪಾಲು ಲೇಖಕರಲ್ಲಿ ಹೆಚ್ಚಿನವರು ಕಿ.ರಂ. ವಿದ್ಯಾರ್ಥಿಗಳು ಮತ್ತು ಅವರ 'ಸಾಹಿತ್ಯ ಪರಿಚಾರಿಕೆ'ಯ ಸಾಹಿತ್ಯ-ಸಂಸ್ಕೃತಿ ಚಿಂತನೆಗಳಲ್ಲಿ ಜೊತೆಯಾದವರು. ಕಿ.ರಂ. ಪಾಠ ಮಾಡುವಾಗ ಪುಸ್ತಕದ ಹೊಟ್ಟೆಯೊಳಗೆ ನವಿಲುಗರಿ ಬಚ್ಚಿಟ್ಟುಕೊಂಡು ತರಗತಿ ಮುಗಿದಕೂಡಲೇ ಅದನ್ನು ಒಮ್ಮೆಗೆ ಗಾಳಿಗೆ ಹಾರಿಬಿಟ್ಟ ಅನುಭವವನ್ನು ಈ ಕೃತಿ ಓದುಗರ ಕಣ್ಣಮುಂದೆ ತಂದು ನಿಲ್ಲಿಸುತ್ತದೆ. ಕಿ.ರಂ. ಅವರ ಸಾಹಿತ್ಯ ಪರಿಚಾರಿಕೆಯನ್ನು ಪತ್ರಿಕೆಯೊಂದು 'ಹಾಗೆಂದರೇನು?' ಎಂದು ಪ್ರಶ್ನೆ ಮಾಡಿತ್ತು, ಅದಕ್ಕೆ ಸಮರ್ಥವಾಗಿ ಈ ಕೃತಿ ಉತ್ತರ ನೀಡಬಲ್ಲದು. ಸಿದ್ದಲಿಂಗಯ್ಯನವರ 'ಹೊಲೆ ಮಾದಿಗರ ಹಾಡು' ಪ್ರಕಟಗೊಳ್ಳಲು, ದೇವನೂರರ 'ಕುಸುಮಬಾಲೆ' ಕಾದಂಬರಿಯನ್ನು ನಾಟಕವನ್ನಾಗಿಸುವಲ್ಲಿ ಕಿ.ರಂ. ಅವರ ಪ್ರಯತ್ನ ಮುಖ್ಯವಾದುದು. ಸ್ಯಾಫೋ ಕಾವ್ಯ, ಸಿಲ್ವಿಯಾ ಪ್ಲಾತ್, ಕನ್ನಡದ ಹಾಡು ಪಾಡು, ಎಡ್ವರ್ಡ್ ಸೈದ್, ಬಾಳಿನಲ್ಲಿ ಬೆಳಕು, ಕುವೆಂಪು ಕಥನ, ಮಾತನಾಡುವ ಹಕ್ಕಿ, ಮಾಪು ಚಿಟ್ಟೆ ಬೆಂಕಿ-ಬೆರಳು, ಸಿಮೊನ್ ದ ಬೊವಾರ 'ದ ಸೆಕೆಂಡ್ ಸೆಕ್ಸ್', ಟ್ರೋಜನ್ ಯುದ್ಧ ಕನ್ನಡ ನಾಟಕ-ಯಾಜಮಾನ್ಯ ಸಂಕಥನ... ಇವೇ ಮೊದಲಾದ ಕೃತಿಗಳನ್ನು ಕಾವ್ಯಮಂಡಲ (ಅಧ್ಯಯನ ಮಂಡಲ)ದಿಂದ ಪ್ರಕಟಿಸುವ ಮೂಲಕ ಕಿ.ರಂ. ತಮ್ಮ ಪರಿಚಾರಿಕೆಯ ಚೌಕಟ್ಟನ್ನು ಇನ್ನೂ ವಿಸ್ತರಿಸಿಕೊಂಡರು. ಕಿ.ರಂ. ತೆಗೆದುಕೊಂಡದ್ದಕ್ಕಿಂತ ಕೊಟ್ಟದ್ದೇ ಹೆಚ್ಚು, ಈ ಕೊಡುವ ಸುಖ ಮತ್ತು ಪಡೆದುಕೊಳ್ಳುವ ಧನ್ಯತೆಯ ನಡುವೆ ಇಲ್ಲಿನ ಬಹುಪಾಲು ಲೇಖಕರು ಕಿ.ರಂ.ರನ್ನು ಸಂತನನ್ನಾಗಿಸಿ ಗೋಡೆಗಂಟಿಸುವ ಅಪಾಯದಿಂದ ಪಾರುಮಾಡಿದ್ದಾರೆ.

ಡಾ.ಎಂ.ಎಸ್.ಆಶಾದೇವಿಯವರು ನಡೆಸಿರುವ ಅಪರೂಪದ ಸಂದರ್ಶನದಲ್ಲಿ ಕಿ.ರಂ. ಚೋಮ್‌ಸ್ಕಿ ಕುರಿತು 'ಅಮೆರಿಕಾದ ಸಂಚಿನ ನೆಲೆಗಳನ್ನು ಬಹಿರಂಗ ಪಡಿಸುತ್ತಿರುವ ಚೋಮ್‌ಸ್ಕಿ ಅನೇಕ ಕಾರಣಗಳಿಗೆ ನನಗೆ ಜೀನಿಯಸ್ ಅನ್ನಿಸ್ತಾನೆ. ಅವನು ಅಡ್ಡಾದಿಡ್ಡಿ ಬೆಳೆಯುತ್ತಿರುವ ವಿಜ್ಞಾನದ ಬಗ್ಗೆ ಅಮೆರಿಕಾದ ಆರ್ಥಿಕ ಕೋಟೆಯ ಬಗ್ಗೆ, ಪೊಲೀಸ್ ವ್ಯವಸ್ಥೆಯ ಬಗ್ಗೆ, ವಿಯೆಟ್ನಾಮ್ ಯುದ್ಧದ ಬಗ್ಗೆ -ಹೀಗೆ ನಮ್ಮನ್ನು ಕಾಡುವ ಎಲ್ಲ ವಿಷಯಗಳ ಬಗ್ಗೆ ಅಸಾಧಾರಣ ನೈತಿಕ ಸ್ಥೈರ್ಯದಿಂದ ಯೋಚಿಸುವ, ಬರೆಯುವ ಲೇಖಕ. ಅದಕ್ಕೆ ನನಗೆ ಅವನು ತುಂಬಾ ಮುಖ್ಯ' ಎಂದು ಹೇಳುತ್ತಾರೆ. ಈ ಕೃತಿಯಲ್ಲಿ ಕೊರತೆಗಳು ಇಲ್ಲವೆಂದಲ್ಲ, ಇಲ್ಲಿನ ಐದಾರು ಕಿರಿಯ ಲೇಖಕರ ಲೇಖನಗಳಂತೂ ವಂದನಾರ್ಪಣೆ ಮಟ್ಟ ಬಿಟ್ಟು ಅತ್ತಿತ್ತ ಸರಿದಿಲ್ಲ, ಇಷ್ಟು ಪರಿಶ್ರಮದಿಂದ ರೂಪಿಸಿರುವ ಕೃತಿಯಲ್ಲಿ ಸಂಪಾದಕರು ಕಿ.ರಂ. ಬರಹಗಳನ್ನು, ಅಕ್ಷರ ವಂಚಿತ ಲೋಕದೊಂದಿಗಿನ ಅವರ ನಂಟು ಮತ್ತು ಒಂದಷ್ಟು ಚೆಂದದ ಕಿ.ರಂ. ಫೋಟೋಗಳನ್ನು ಬಳಸಿಕೊಂಡಿದ್ದಿದ್ದರೆ ಇಡೀ ಕೃತಿಯ ತೂಕ ಹೆಚ್ಚುತ್ತಿತ್ತು.

ನಿಜದ ನಾಡೋಜ

ಸಂಪಾದಕ: ಪ್ರದೀಪ್ ಮಾಲ್ಗುಡಿ

ಪ್ರಕಾಶಕರು: ಸಂಸ ಪ್ರಕಾಶನ, ನಂ: 10, 13ನೇ ಮುಖ್ಯರಸ್ತೆ 4ನೇ ಬ್ಲಾಕ್, ನಂದಿನಿ ಬಡಾವಣೆ, ಬೆಂಗಳೂರು-96

ಪುಟಗಳು: 320, ಬೆಲೆ: ರೂ.200, ಪ್ರಕಟಣೆ: 2011

ಬದುಕಿನ ಬಹುದೊಡ್ಡ ಛಾಲೆಂಜ್

(3ನೇ ಪುಟದಿಂದ...)

ಸಾವಿರಾರು ಮಹಿಳೆಯರು ಅಂತಹ ಕ್ರೌರ್ಯವನ್ನು ಸಹಿಸಿಕೊಂಡು ಈಗಲೂ ದೂರು ನೀಡದೆ ಸುಮ್ಮನಿರಬಹುದು ಎಂದು ಊಹಿಸುವುದೂ ಅಸಾಧ್ಯ.

ಗಂಡ ನೀಡುವ ಹಿಂಸೆಯನ್ನು ಪತ್ನಿಯರು ಸಹಿಸಿಕೊಂಡು ಸುಮ್ಮನಿರುವುದರ ಹಿಂದೆ ಹಲವಾರು ಆಯಾಮಗಳಿರುತ್ತವೆ. ಮೊದಲನೆಯದಾಗಿ, ಹೆಂಡತಿಯನ್ನು ಹೊಡೆಯುವ ಹಕ್ಕು ಗಂಡನಾದವನಿಗೆ ಇದೆ ಎಂಬ ಕಲ್ಪನೆ. ಈ ಕಲ್ಪನೆಯನ್ನು ನಮ್ಮ ಸಿನಿಮಾಗಳು ಮತ್ತು ಸಾಂಪ್ರದಾಯಿಕ ಸಮಾಜ ಹೆಚ್ಚಿಸುತ್ತಲೇ ಬಂದಿವೆ. ಎರಡನೆಯದಾಗಿ ಬಹಳಷ್ಟು ಮಹಿಳೆಯರು ಆರ್ಥಿಕವಾಗಿ ಗಂಡನನ್ನೇ ಅವಲಂಬಿಸಿರುತ್ತಾರಾದ್ದರಿಂದ ನಾಳೆ ಆತನೇ ತನ್ನೊಂದಿಗೆ ಇಲ್ಲದಿದ್ದರೆ ತನ್ನ ಬದುಕಿನ ಗತಿ ಏನು ಎಂಬ ಭೀತಿ ಮಹಿಳೆಯರಲ್ಲಿ ಇರುತ್ತದೆ. ಮೂರನೆಯದಾಗಿ, ಗಂಡನ ವಿರುದ್ಧವೇ ದೂರು ನೀಡಿದ ಹೆಣ್ಣು ಎಂದು ಸಮಾಜದ ಅವಹೇಳನಕ್ಕೆ ಗುರಿಯಾಗುವ ಭಯ. ನಾಲ್ಕನೆಯದಾಗಿ, ಆ ದಂಪತಿಗೆ ಮಕ್ಕಳಿದ್ದರಂತೂ ಅದೇ ಆಕೆಯ ಬಂಧನವಾಗುತ್ತದೆ. ಕೊನೆಯದಾಗಿ ಗಂಡ ತನ್ನನ್ನು ತೊರೆದರೆ ತಾನು ಮುಂದೆ ಏಕಾಂಗಿಯಾಗಿ ಬದುಕಬೇಕಾದೀತು ಎಂಬ ಅಳುಕು ಕೂಡ ಇರುತ್ತದೆ. ಇವೆಲ್ಲ ಆಯಾಮಗಳು ಜೊತೆಗೂಡಿ ಕೌಟುಂಬಿಕ ಹಿಂಸೆ ಮುಂದುವರಿಯುವಂತಾಗಿದೆ.

ಇದೆಲ್ಲದರ ಜೊತೆಗೆ ನಮ್ಮ ನಗರಗಳಲ್ಲಂತೂ ಅಕ್ಕಪಕ್ಕದ ಮನೆಗಳಲ್ಲಿ ವಾಸ ಮಾಡುತ್ತಿರುವವರ ನಿರ್ಲಕ್ಷ್ಯವೂ ಕೌಟುಂಬಿಕ ಹಿಂಸೆ ನಾಲ್ಕು ಗೋಡೆಗಳ ಮಧ್ಯೆ ನಡೆಯುವ ಆದರೆ ಹೊರಗೆ ಕಾಣದಿರುವ ಅಪರಾಧವಾಗಿದೆ. ಒಂದು ಅಂದಾಜಿನ ಪ್ರಕಾರ ಭಾರತದ ಶೇ 30 ಕುಟುಂಬಗಳಲ್ಲಿ ಹೆಂಡತಿಯು ಗಂಡನಿಂದ ಕೌಟುಂಬಿಕ ಹಿಂಸೆಯನ್ನು ಅನುಭವಿಸುತ್ತಿರುತ್ತಾಳೆ. ಆದರೆ ನೆರೆಹೊರೆಯವರು ತಮಗೆ ಇದರ ಬಗ್ಗೆ ಏನೇನೂ ಗೊತ್ತಿಲ್ಲ ಎಂಬಂತೆ ವರ್ತಿಸುತ್ತಿರುತ್ತಾರೆ.

ಕಳೆದ ತಿಂಗಳು ಬೆಂಗಳೂರಿನಲ್ಲಿ ಒಂದು ಪ್ರಕರಣ ನಡೆಯಿತು. ಎಂದಿನಂತೆ ಕುಡಿದು ಬಂದಿದ್ದ ಗಂಡ ಅವತ್ತು ರಾತ್ರಿಯೂ ತನ್ನ ಹೆಂಡತಿಯನ್ನು ಥಳಿಸಲಾರಂಭಿಸಿದ. ಆಕೆಯ ಕೂಗು ಅಕ್ಕಪಕ್ಕದ ಮನೆಯವರಿಗೆ ಕೇಳಿಸಿದರೂ "ಅದು ಅವರ ಮನೆಯ ವಿಷಯ. ಅದರಲ್ಲಿ ನಾವ್ಯಾಕೆ ತಲೆಹಾಕಬೇಕು" ಎಂದು ಸುಮ್ಮನಾದರು. ಕೆಲ ಗಂಟೆಗಳ ಕಾಲ ನಡೆದ ಹೊಡೆತ-ಚೀರಾಟ ಕೊನೆಗೂ ಅಂತ್ಯಗೊಂಡಿತು. ಆದರೆ ಮಾರನೆ ದಿನ ಗೊತ್ತಾಗಿದ್ದೇನೆಂದರೆ ಆ ಮಹಿಳೆಯ ಚೀರಾಟ ಸ್ತಬ್ಧಗೊಂಡಿದ್ದು ಆಕೆಯ ಗಂಡ ಹೊಡೆಯುವುದನ್ನು ನಿಲ್ಲಿಸಿದ ಎಂಬ ಕಾರಣಕ್ಕಲ್ಲ, ಬದಲಾಗಿ ಆತ ಆಕೆಯನ್ನು ಎಷ್ಟು ಅಮಾನುಷವಾಗಿ ಹೊಡೆದಿದ್ದನೆಂದರೆ ಆಕೆ ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದಳು.

ಮೊನ್ನೆ ಇಂತಹ ಇನ್ನೊಂದು ಪ್ರಕರಣದ ಬಗ್ಗೆ ನನ್ನ ಗೆಳತಿಯೊಬ್ಬಳು ಹೇಳಿದಳು. ಅವತ್ತು ಆಕೆಯ ಪಕ್ಕದ ಮನೆಯಿಂದ ಸಂಜೆ ಹೊತ್ತು ಚೀರಾಟ ಕೇಳಿಸಲಾರಂಭಿಸಿತು. ಆರಂಭದಲ್ಲಿ ಆ ಮನೆಯ ಮಕ್ಕಳು ಆಟವಾಡುತ್ತಾ ಗಲಾಟೆ ಮಾಡುತ್ತಿರಬೇಕೆಂದು ಗೆಳತಿ ಸುಮ್ಮನಿದ್ದಳು. ಈಕೆ ಟಿವಿ ನೋಡುತ್ತಿದ್ದರಿಂದ ಆ ಚೀರಾಟ ಎಂತಹದ್ದೆಂದು ಮೊದಲು ಸ್ಪಷ್ಟವಾಗಿಲ್ಲ, ಆದರೆ ರಾತ್ರಿ ಹತ್ತು ಗಂಟೆಯಾದರೂ ಆ ಚೀರಾಟ ಮುಂದುವರೆದಾಗ ಈಕೆ ಕುತೂಹಲಗೊಂಡು ಸ್ವಲ್ಪ ಹೊತ್ತು ಆಲಿಸಿದಾಗ ಅದು ಮಕ್ಕಳ ಗಲಾಟೆ ಅಲ್ಲ ಬದಲಾಗಿ ಆ ಮನೆಯ ಮಹಿಳೆ ಕೂಗುತ್ತಿರುವುದು ಎಂದು ಅರಿವಾಯಿತು. ಗೆಳತಿಗೆ ಏನು ಮಾಡುವುದೆಂದು ಗೊತ್ತಾಗಲಿಲ್ಲ, ಅವರ ಮನೆಯ ಕಿಟಕಿಯಿಂದ ಇಣುಕಿ ನೋಡಿದಾಗ ಗಂಡ ತನ್ನ ಹೆಂಡತಿಯ ಮುಖಕ್ಕೆ ಮುಷ್ಟಿಯಿಂದ ಬಿಗಿಯುತ್ತಿರುವುದು, ದೊಣ್ಣೆಯಿಂದ ಬಾರಿಸುತ್ತಿರುವುದು ಕಾಣಿಸಿತು. ಆ ದೃಶ್ಯವನ್ನು ಕಂಡು ಗೆಳತಿ ಭಯಭೀತಳಾದಳು. ಅಕ್ಕಪಕ್ಕದ ಇತರೆ ಮನೆಯವರಾದರೂ ಬಂದರೆ ಎಲ್ಲರೂ ಹೋಗಿ ಏನಾಗುತ್ತಿದೆ ಎಂದು ವಿಚಾರಿಸಬಹುದು ಎಂದು ನೋಡಿದರೆ ಬೇರೆ ಮನೆಯವರೆಲ್ಲ ತಮಗೇನೂ ಕೇಳಿಸುತ್ತಿಲ್ಲ ಎಂಬಂತೆ ಲೈಟುಗಳನ್ನು ಆಫ್ ಮಾಡಿಕೊಂಡು ನಿದ್ದೆ ಮಾಡುತ್ತಿರುವವರಂತೆ ನಟಿಸುತ್ತಿದ್ದರು. ಪಕ್ಕದ ಮನೆಯಲ್ಲಿನ ಅಮಾನುಷ ದಾಳಿ ರಾತ್ರಿ ಎರಡು ಗಂಟೆಯತನಕ ಮುಂದುವರೆದಾಗ ಗೆಳತಿಗೆ ಸಹಿಸಲಾಗಲಿಲ್ಲ, ತನ್ನ ಫ್ರೆಂಡ್ಸ್‌ಗೆ ಫೋನ್ ಮಾಡಿ ಹೇಳಿದರು. ಅವರಲ್ಲಿ ಯಾರೋ ಒಬ್ಬರು ಆ ಏರಿಯಾದ ಪೊಲೀಸರಿಗೆ ಫೋನ್ ಮಾಡಿದರು. ಮಧ್ಯ ರಾತ್ರಿ ಪೊಲೀಸರು ಬಂದು ವಿಚಾರಿಸಿದಾಗ ಪಕ್ಕದ ಮನೆಯ ಗಂಡ ಮತ್ತು ಹೆಂಡತಿ ಇಬ್ಬರೂ ಏನೂ ನಡೆದಿಲ್ಲವೆಂದು, ಯಾರೋ ತಪ್ಪು ಮಾಹಿತಿ ಕೊಟ್ಟಿರಬೇಕೆಂದು ಸುಳ್ಳು ಹೇಳಿದರು. ಪೊಲೀಸರು ವಿಧಿ ಇಲ್ಲದೆ ವಾಪಸ್ ಹೋದರು.



ಮಾರನೆ ದಿನ ಆ ಹೆಂಡತಿಯ ಮುಖ ಊದಿಕೊಂಡಿತ್ತು, ತಲೆಗೆ ಬಿಗಿಯಾದ ಪೆಟ್ಟು ಬಿದ್ದು ರಕ್ತ ಹರಿಯುತ್ತಿತ್ತು. ಕೈಕಾಲುಗಳ ಮೇಲೆ ಬಾಸುಂಡೆಗಳೆದ್ದು ಅಲ್ಲಿ ರಕ್ತ ಹೆಪ್ಪುಗಟ್ಟಿತ್ತು. ಆದರೆ ಅವರಿಬ್ಬರೂ ಆಕೆ ಸ್ಕೂಟರ್‌ನಿಂದ ಬಿದ್ದಾಗ ಅದೆಲ್ಲ ಆಗಿದೆ ಎಂಬ ಸಬೂಬು ನೀಡಿದರು. ನನ್ನ ಗೆಳತಿಗೆ ನಿಜವಾದ ವಿಷಯ ಗೊತ್ತಿತ್ತು. ಆ ಮಹಿಳೆಗೆ ತನ್ನಿಂದ ಏನಾದರೂ ಸಹಾಯ ಬೇಕೆ ಎಂದು ಮಾತನಾಡಿಸಲು ನನ್ನ ಗೆಳತಿ ಪ್ರಯತ್ನಿಸಿದಳು. ಆದರೆ ಆಕೆ ಯಾರೊಂದಿಗೂ ಮಾತನಾಡದಂತೆ ಗಂಡ ಯಾವಾಗಲೂ ಆಕೆಯೊಂದಿಗೆ ಇರುತ್ತಿದ್ದ. ಒಂದು ರಾತ್ರಿ ಮನೆಯ ಬೋರ್‌ವೆಲ್ ಮೋಟಾರ್‌ಅನ್ನು ಆನ್ ಮಾಡುತ್ತೇನೆಂದು ಹೊರಗೆ ಬಂದ ಹೆಂಡತಿ ಕ್ಷಣಮಾತ್ರದಲ್ಲಿ ನಾಪತ್ತೆಯಾದಳು. ಗಂಡನ ಕೈಗೆ ಸಿಗಬಾರದೆಂದು ಆಕೆ ಬೆಂಗಳೂರನ್ನೇ ಬಿಟ್ಟು ದೂರದ ಊರಿಗೆ ಹೋದಳು. ಅಲ್ಲಿ ಸಿಕ್ಕ ಮಹಿಳಾ ಸಂಘಟನೆಗಳು ಆಕೆಯಲ್ಲಿ ಧೈರ್ಯ ತುಂಬಿದವು. ಹತ್ತು ದಿನಗಳ ನಂತರ ಬೆಂಗಳೂರಿಗೆ ವಾಪಸ್ ಬಂದ ಆಕೆ ತನ್ನ ಗಂಡನ ವಿರುದ್ಧ ಪೊಲೀಸರಿಗೆ ದೂರು ನೀಡಿದಳು.

ಆ ಮಹಿಳೆಯ ಸ್ಥಿತಿಗೂ ದರ್ಶನ್ ಪತ್ನಿ ವಿಜಯಲಕ್ಷ್ಮಿಯ ಪರಿಸ್ಥಿತಿಗೂ ಹೆಚ್ಚು ವ್ಯತ್ಯಾಸಗಳಿಲ್ಲ, ದರ್ಶನ್ ಓರ್ವ ಸ್ಯಾಡಿಸ್ಟ್ ಎಂಬುದು ಈಗ ಸ್ಪಷ್ಟವಾಗಿದೆ. ಅದಕ್ಕೆ ಆತನಿಗೆ ಕಾನೂನಿನಪ್ರಕಾರ ಶಿಕ್ಷೆ ಆಗಲೇ ಬೇಕು. ಹಾಗಾಗಬೇಕಾದರೆ ವಿಜಯಲಕ್ಷ್ಮಿ ಈಗಾಗಲೇ ಪೊಲೀಸರಿಗೆ ಕೊಟ್ಟಿರುವ ದೂರನ್ನು ಹಿಂದೆ ಪಡೆಯಬಾರದು. ದರ್ಶನ್ ಜೈಲುಪಾಲಾಗಿ ಶಿಕ್ಷೆ ಅನುಭವಿಸಿದರೆ ಮುಂದೆ ತಮ್ಮ ಹೆಂಡತಿಯರನ್ನು ಬಡಿಯುವ ಗಂಡಂದಿರಿಗೆ ತಮಗೂ ದರ್ಶನ್‌ಗೆ ಆದ ಗತಿ ಕಾದಿದೆ ಎಂಬ ಎಚ್ಚರವಂತೂ ಇರುತ್ತದೆ. ಹಾಗೆಯೇ ವಿಜಯಲಕ್ಷ್ಮಿಯಿಂದ ಸ್ಫೂರ್ತಿ ಪಡೆದು ಇತರೆ ಶೋಷಿತ ಹೆಣ್ಣುಮಕ್ಕಳೂ ತಮ್ಮ ಹಕ್ಕುಗಳಿಗಾಗಿ ಸೆಟೆದು ನಿಲ್ಲುವ ಧೈರ್ಯ ತೋರಿಸುತ್ತಾರೆ.. ಹಾಗಾದಾಗ ಮಾತ್ರ ನಮ್ಮ ಸಮಾಜದಲ್ಲಿ ಇದ್ದೂಇಲ್ಲದಂತಿರುವ ಕೌಟುಂಬಿಕ ಹಿಂಸೆಯನ್ನು ಸ್ವಲ್ಪ ಮಟ್ಟಿಗಾದರೂ ತಡೆಯಬಹುದು...

• ಗೌರಿ ಲಂಕೇಶ್

ಮರಣದಂಡನೆಯ[illegible] ರದ್ದುಗೊಳಿಸಬೇ[illegible]

21ನೇ [illegible]

ವಿಶ್ವದ 135 [illegible]

[illegible]

ಒಬ್ಬ[illegible] ಪತ್ರ[illegible]

[illegible]

- ವಿ.ವಿ.[illegible]

ಮಾಜಿ ಶಾಸಕರು [illegible]

...ನೇ ಆಗ್ಲಿ ದರ್ಶನ ಕಳನಾಯಕನ ಮಗಲವೆ?

...ಉಗ್ರಿ ಮತ್ತು ಜುಮ್ಮಿ ತೂಗುದೀಪ ಶ್ರೀನಿವಾಸನ ...ಮಾಡಿಕೊಂಡ ಅನಾಹುತಗಳನ್ನು ಅಳೆದು ಸುರಿದರು. ...ಕೇಳಿಸಿಕೊಂಡ ಕಾಳಮಾವ,

...ಮಲ್ಲಾರು ಮಾಡಬಾರದ್ದ ಮಾಡಿ ಜೈಲಿಗೋದ್ರೆ ... ಹೆಡತಿಗೊಡದು ಜೈಲಿಗೋದನಲ್ಲ, ಬದುಕ

...ಷ್ಟಪುರಾಣ

...ಲು ಸೀ ಮೆ

▶ಬಿ. ಚಂದ್ರೇಗೌಡ

...ಮಾಡಿಕಂಡರೆ?" ಎಂದ.

...ವುಳಿಷ್ಟ ಇಲ್ಲ ಅಂದ್ರೆ ಬುಟ್ಟು ಕಳಿಸಬೇಕಾಗಿತ್ತು ...ವ. ಅದುಬುಟ್ಟು ಕಿವಿಹರಕಳಂಗೆ ವಡುದವುನಲ್ಲ ...ಕ್ಯ ಸೇದ" ಎಂದಳು ಜುಮ್ಮಿ.

...ಯಾರು ಕೇಳೂರಿಲ್ಲ ಅಂತ ತಿಳಕಂಡನೇನೊ ಮುಂಡೆ ...ಎಂದ ಸೀರ.

...ಗವುನು ಮಾಡಿದ ನೋಡಿದ್ರೆ ಅಂಗೇ ಕಾಣ್ತದೆ. ... ಕೂರಿಸಿಗಂಡು ಕ್ವಲೆ ಮಾಡಿ ಕಾವೇರಿ ...ಕಕ್ಕೋಗಿದ್ನಂತಲ್ಲಾ ಇನ್ಯಂತಾ ಇವುನಿದ್ದನು?" ... ಜುಮ್ಮಿ.

... ಕಾವೇರಿ ಹ್ವಳಿಗಾಕಕ್ಕೆ ಹೋಗಿರಲಿಲ್ಲ ಕಣೇ. ... ಹ್ವಡದ್ರೆ ಕೂಗ್ತಳೆ, ಯಾರಾರ ಬತ್ತರೆ, ಅದ್ಕೆ ... ಕುಂದ್ರಿಸಿಗಂಡು ವಡದನಂತೆ."

... ಮಗಿಗೂ ವಡದನಂತಲ್ಲಾ ಅದೇನು ಮಾಡಿತ್ತು?"

...ವುಳು ಬ್ಯಾಡ ಅಂದಮ್ಯಾಲೆ, ಅವುಳ ಮಗನೂ ...ಂತ ಇವುನ ಲಕ್ಕ ಕಣೆ. ಎಷ್ಟೇ ಆಗ್ಲಿ ಖಳನಾಯಕನ ... ಮಾಡತ್ತಿದ್ದೋನ ಮಗಲವೇ ಅವುನು?"

...ದೇನೊ ನಿಜ ಬುಡು" ಎಂದ ಸೀರ.

...ವದ್ಯರಡು ವಳ್ಳೆ ಪಾರ್ಟುನೂ ಮಾಡಿದ್ದನಂತಲ್ಲಾ."

...ಮಾಡಿದ್ದ ಸರಿ. ಆದ್ರೆ ಸಿನಿಮಾಕ್ಕೆ ಬಂದಾಗ್ಲಿಂದ ...ಕೇಡಿ ಕ್ಯಲಸ ಮಾಡಿ ಕಡಿಗೆ ಗೂಸ ತಿಂದು ... ಪಾರ್ಟನೆ ಅಲವೇ ತೂಗುದೀಪ ಮಾಡಿದ್ದು. ... ಈ ದರ್ಶನ ಹುಟ್ಟುವಾಗ ಯಂತ ಪಾರ್ಟು ... ಅಂತೀ? ಅಲ್ಲಿಂದ್ಲೆ ಅಲವೆ ಅವುನು ಫೇಮಸ್ ...ಕ್ಕೆ ಬಂದಿದ್ದು."

...ದ್ಯಾವ ಪಾರ್ಟು ಮಾಡಿದ್ದಾ?"

...ಯಿ ರಾಮು ಅಂತ ಡಕಾಯಿತಿಗಳ ಸಿನುಮ ...ಮು. ಅದರಲ್ಲಿ ಈ ತೂಗುದೀಪ ಶ್ರೀನಿವಾಸ ...ಸಿಂಗನೋ, ಹರಿಸಿಂಗನೋ ಯಂತದೋ ಒಂದ ... ಕಣವೆ ಡಕಾಯಿತನ ಪಾತ್ರ ಮಾಡಿದ್ದ. ಆ ...ದಲ್ಲಿ ಹೆಡತಿಗೆ ವಡದು, ಬಡುದು ದಡಾಬಂದು ... ಆರತಿ ಮದಿವಾಗಕ್ಕೆ ನೋಡ್ತನೆ. ಆರತಿ ...ಮಾರನ್ನ ಲವ್ವು ಮಾಡಿರತಳೆ. ಆದ್ರು ತೂಗುದೀಪ ...ಗೂ ತೊಂದ್ರೆ ಕೊಟ್ಟು ಕಡಿಗೆ ರಾಜಕುಮಾರನಿಂದ್ಲೆ ...ಂತನೆ. ಆಗುಟ್ಟಿರೋ ಈ ದರ್ಶನ ಅದೇ ಕ್ಯಲಸ ...ನೆ ಅಂದ್ರೆ ಅದವುನ ತಪ್ಪೋ ಅವುರಪ್ಪನ ತಪ್ಪೊ ...ಹೇಳು."

"ಇಸಿಸಿ, ಅಪ್ಪ ಅಮಾದಿ ತಿಂತಿದ್ದ ಅದ್ಕೆ ನಾನು ತಿಂದೆ ಅನ್ನೋ ನ್ಯಾಯದ ಮಾತು ಎಷ್ಟು ಸರಿನ್ಲ, ಇದ್ಯಾವ ಸೀಮೆ ಮಾತಾಡ್ತೀ ನೀನು" ಎಂದ ಕಾಳಮಾವ.

"ನೀನೇಳದು ಸರಿಕಣಮಾವ, ಆದ್ರು ಈ ದರ್ಶನ ಅನ್ನೋನ ಚೇಷ್ಟೆ ಏನಿವತ್ತಿನದಲ್ಲ, ಆರು ತಿಂಗಳಿಂದೆ ಹೆಡತಿಗಿಡಕಂಡು ವಡದಿದ್ದನಂತೆ. ಆಗ ಶಿವರಾಜಕುಮಾರ ಹೋಗಿ ಬುದ್ಧಿ ಹೇಳಿ ಬಂದಿದ್ದನಂತೆ. ಆದ್ರು ತಿದ್ದಿಕಬಾರದೆ?"?

"ಅಂಕಾರ ಇದ್ದ ಮಂಸ್ಸ ಎಲ್ಲಿ ತಿದ್ದಿಕಂಡನೂ."

"ಅದ್ಕೆ ಅನುಭವುಸ್ತ ಅವುನಲ್ಲ ತಗೊ. ಅಲ್ಲಾ ಅದಿನೆಷ್ಟು ಕಾಯ್ಲ ಮಡಿಕಂಡಿದ್ದ ಅವುನು. ಯದೆ ನವ್ವು, ಅಸ್ತಮಾ, ಜಾಂಡೀಸು, ಲಿವರ್ ಪ್ರಾಬ್ಲಮ್ಮು... ಒಂದೇ ಯರಡೇ. ಇಷ್ಟು ಕಾಯಲ ಮಡಿಕಂಡು ಹೆಡತಿಯ ಆಸುಪತ್ರೆಗೆ ಸೇರಿಸಿದನಲ್ಲ, ದಡ್ಡಮುಂಡೆದು ಕಣಮಾವ" ಎಂದು ಉಗ್ರಿ ಕನಿಕರ ತೋರಿದ.

"ಮೋಸ್ಟಲಿ ಸಿನುಮಾದವ್ರಲ್ಲ ದಡ್ಡಮುಂಡೆವು ಕಣೊ ಉಗ್ರಿ. ಪೂಲಿಸ್‌ಫೆಲೊಗಳು. ಅದು ಈಗ ಸಾಬೀತಾಯ್ತು" ಎಂದುಕೊಂಡು ವಾಟಿಸ್ಸೆ ಬಂದ.

"ಅದ್ಯಂಗೇಳ್ತಿಯೋ?"

"ಅಲ್ಲಾ ಕಣೊ, ದರ್ಶನ ಹೆಡತಿಗೊಡದ ಅಂದೇಟಿಗೆ ನಿಖಿತಾ ಅನ್ನೊ ನಟಿಯ ಮೂರೊರ್ಸ ಕನ್ನಡ ಸಿನುಮಾದಿಂದ ತಗೀತರೆ ಅಂದ್ರೆ ಇವರು ಪೂಲಿಷ್‌ಫೆಲೊಗಳಲ್ಲವಾ? ಅಮ್ಯಾಲೆ ದರ್ಶನ್ನೆದ್ದಿ ಸ್ಟ್ರಾಂಗಾಗಿರೊ ಕಂಪ್ಲೇಂಟ್ ಕೊಟ್ಟ ಮ್ಯಾಲೆ ರಾಜಿ ಮಾಡಿ ಕೈತೊಳಕಂಡ್ರಲ್ಲಾ, ಕೋರ್ಟು ಸುಮ್ಮನಿದ್ದತೆ. ಒಂದೋಗಿ ಯರಡಾಯ್ತೀಗ."

"ಅದ್ಯಂಗೆ ಬುಡಿಸಿಗತ್ತರಪ್ಪ ಇದರಿಂದ?"

"ಅದ್ಯಂಗಾರ ಬುಡಿಸಿಗಳ್ಳಿ ಅದು ನಮ್ಮ ಪ್ರಾಬ್ಲಮ್ಮಲ್ಲ, ಆದ್ರೆ ಜನ ಕೆಟ್ಟು ಕ್ಯರ ಹಿಡದು ಗೊಬ್ಬರೆದ್ದೋಗ್ಯವುರೆ ಕಣೊ ಉಗ್ರಿ. ಸರಕಾರ ಕಾನೂನು ಜಾರಿಮಾಡಿದ್ರೆ ಅದೇ ತಪ್ಪು ಅಂತ ಜನ ಸಿಟಿಬಸ್ಸಿಗೆ ಕಲ್ಲು ಹ್ವಡದು, ಆಸುಪತ್ರೆ ಮುಂದೋಗಿ ಗಲಾಟೆ ಮಾಡ್ತರೆ ಅಂದ್ರೆ ಇವುಕೇನಾಗ್ಯದೆ ಅಂತ."

"ನಿಜಕಣೊ. ಆ ಬಳ್ಳಾರಿಲೂ ಅಂಗೆ ಮಾಡ್ಯವುರೆ. ಗಣಿಕಳ್ಳ ಮಾಡಿರದ್ಯಲ್ಲ ಸರಿ ಅನ್ನದಾದ್ರೆ ಇಂತ ಜನ ವಿಚಾರಿಸಿಗಳಕ್ಕೆ ಬ್ಯಾರೆ ಪೊಲೀಸೇ ಬೇಕು."

"ಬ್ಯಾರೇ ಪೊಲೀಸ್ ಬ್ಯಾಡ ಕಣೊ. ಈಗ ಹಾಲಿ ಇರವುಕೆಯ ಬ್ಯಾರೆ ಲಾಟಿ ಕೊಟ್ರಾಯ್ತು, ಚೆನ್ನಾಗೇ ರುಬ್ಬತರೆ.

ದರ್ಶನ ಹೆಡತಿಗೊಡದ ಅಂತ ನಾನು ಸಿಟಿಬಸ್ಸಿಗೆ ಕಲ್ಲು ಹ್ವಡಿತಿನಿ ಅನ್ನದಾದ್ರೆ ಜನಕೆ ತಲಿಕೆಟ್ಟದೆ."

"ದರ್ಶನಂಗೇ ಕೆಟ್ಟದೆ. ಇನ್ನ ಅವುನ ಅಭಿಮಾನಿಗಳಿಗೆ ಕೆಟ್ಟಿರದಿಲವೆ. ಈ ದರ್ಶನ ಯಾರು ಮಾಡಬಾರದ್ದೇನೂ ಮಾಡಿಲ್ಲ. ಹಿಂದೆ ಸಿನುಮಾರಂಗದೋರು ಮಾಡಿರದ್ರ ಕಾಲಭಾಗಮಾಡಿಲ್ಲ ಇವುನು. ಅಲವೇನೊ?"

"ಊ ಕಣೊ ಉಗ್ರಿ. ನಮ್ಮ ಅಣ್ಣಾವರು ಎಷ್ಟು ಡಿಗ್ನಿಟಿಯಿಂದ ಅವರ ಕಾಲ ನಿಭಾಯಿಸಿದ್ರು, ಗೊತ್ತ. ಇನ್ನ ಉದಯಕುಮಾರನ ಉಪಪತ್ನಿ ವಿಷಯ ಯಾರಿಗೂ ಗೊತ್ತಾಗ್ಲೇಯಿಲ್ಲ, ರಾಜೇಶ್ನ ವಿಷಯನೂ ಅಂಗೆಯ. ಆ ಜೆ.ವಿ.ಅಯ್ಯರ್ ಕರಾವಿನ ಯಮ್ಮ ತರದ ಯರಡೆಂಗಸರ ಕಟಗಂಡಿದ್ರೂ ಬರೇ ಶ್ರೀರಾಮನ ಕತೆ ಹೇಳೋರು. ಇನ್ನ ತಮುಳಲ್ಲಂತೂ ಎಂ.ಜಿ.ಆರ್ ಟೋಟಲ್ಲಿ ಮೂರು ಜನ ಮಾಡಿಕಂಡ. ಅದರಲ್ಲೂ ನಮ್ಮ ಗಣಪತಿಭಟ್ಟನ ಹೆಡತಿ ಜಾನಕಿಯ ಥೇಟ್ ರಾವಣನಂಗೆ ಹೊತಗಂಡೋಗಿ ಮಡಿಕಂಡಿದ್ದ."


"ನೀನು ಅವುನಂಗೆ ಹೊಡದಿದ್ದಿಯೇನ್ಲ?"

"ಯಾರೆದ್ದಿಗೊಡಿಯದಿಲ್ಲ ತೋರಸಕ್ಯ, ಆ ಜಗ್ಗೇಶ ಅನ್ನೋ ಪೋಲಿಮುಂಡೆದು ಹೆಡತಿ ತಲಿಗೆ ಯಂಗ್ವಡದಿದ್ದ ಅಂದ್ರೆ ಆ ತರ ನಾನೂ ಹ್ವಡದಿಲ್ಲ, ಅವುನಿವತ್ತು ಬೀದಿಲಿ ನಿಂತಗಂಡು ನ್ಯಾಯ ಹೇಳಂಗಾಗ್ಯವುನೆ. ಬಿಜೆಪಿಗೆ ಮಾರಿಕಂಡು ಮಾನ ಮರಿಯಾದಿ ಬುಟ್ಟು ಕಾಲ ಹಾಕ್ತಯಿರೊ ಅವುನುವೆ ಸಂಸಾರಸ್ಥರಿಗೆ ಗೈಡ್ ಮಾಡ್ತನೆ ಅಂದ್ರೆ ಲೋಕ ಎಲ್ಲೊ ಪೂರಾ ಕೆಟ್ಟೋಗ್ಯದೆ ದ್ವಡಪ್ಪ, ಇದಕೆ ನೀನೇನೇಳ್ತಿ?"

"ಅಮಾಸೆ ಯಾವತ್ಲ?"

"ಅಮಾಸೆಗೆ ಇನ್ನು ಹನ್ನೆರಡು ದಿನದೆ ದೊಡಪ್ಪ, ಬಂದೇ ಬತ್ತದೇ ಬುಡು."

"ಅಲ್ಲ ಕಂಡ್ಯ.ಈಟೊತ್ತಿಗೆ ರಾಗಿ ಪೈರು ಕಣಕಾಲಗಂಟ ಬರಬೇಕಾಗಿತ್ತು, ವಲ್ತಕ್ಕೋಗಿ ನೋಡಿದ್ರೆ ವಟ್ಟೆ ಉರಿತದೆ. ಈ ಮನಿಯಾಳ ಮಳೆ ಯತ್ತಗೋಯ್ತು ಅಂತ?" ಎಂದು ಕಾಳಮಾವ ಚಿಂತಾಕ್ರಾಂತನಾದ.



"ಅದು ಮಲ್ನಾಡ ಕಡೆ ಹುಯ್ತಾ ಅದಂತೆ ದ್ವಡಪ್ಪ, ಇನ್ನುಳದದ್ದು ಬೆಂಗಳೂರಿಗೆ ಹ್ವಡಿತಾ ಕುಂತದೆ. ಮಳೆ ನಮಿಗೇ ಹುಯ್ಯಬೇಕು ಅಂತ ಯಾವ ನಿಯಮಾನು ಇಲ್ಲ, ಜನ ಮಳೆ ಬೆಳೆ ಇಲ್ದಂಗೂ ಬದುಕದ ಕಲ್ತವರೆ. ಪರ್‌ಗೆಜಾಂಪಲ್ ಆ ಜನಾರ್ದನ ರೆಡ್ಡಿತ ಮನೆಮಠ ಹೊಲ ಏನೂ ಇರಲಿಲ್ಲ, ಅಂಥೋನು ಸಿಂಹಾಸನದ ಮೇಲೆ ಕುಂತು ಬಳ್ಳಾರಿ ದೇಸದ ರಾಜ್ಯಭಾರ ಮಾಡೇಬುಟ್ಟ."

"ಎಲ್ಲಿಗೆ ಬತ್ಲ ಅವುನ ಕತೆ?"

"ಅವುನ ಕತೆ ಯಾವ ಶತ್ರುಗೂ ಬ್ಯಾಡ ದ್ವಡಪ್ಪ, ರಾಜ್ಯಕೋಶನ್ಯಲ್ಲ ಕಳಕಂಡು, ಹೈದರಾಬಾದಿನ ಜೈಲಲ್ಲಿ ಮರದ ಕ್ಯಳಗಡೆ ನೀರುಯ್ಯಕಂಡು, ಕೈದಿಗಳ ಜೊತೆ ಕ್ಯೂನಲ್ಲಿ ನಿಂತಗಂಡು, ಆರುನೂರು ಗ್ರಾಂ ಅನ್ನ ಈಸಗತ್ತ ಅವುನೆ. ಅವುನು ಮಾಡಿರೊ ಅನಾಹುತ ನೋಡಿದ ಜಡಜ್‌ಗಳು ಬೇಲ್ ಕೊಡಲಿಲ್ವಂತೆ. ತಿರಗ ಸಿಬಿಐನೋರು ಎತ್ತಾಯ್ಕಂಡೋಗಿ ಗಡ್ಕರಿ ಕತ್ತಿ, ತಿರುಪ್ತಿ ತಿಮ್ಮಪ್ಪನ ಕಿರೀಟ ಯಂಗೆ ಮಾಡಿಸ್ದೆ ಹೇಳು ಅಂತ ಕುಂತವುರಂತೆ. ಅಂತೂ ಜೈಲಿಂದ ಬಂದ ಮ್ಯಾಲೆ ರೆಡ್ಡಿ ರೆಡ್ಡಿಯಾಗಿರದಿಲ್ಲ, ರಾಡಿಯಾಗಿರತನೆ!"

"ನಿಜವೇನ್ಲ ನೀನೇಳತಾಯಿರದು?"

"ಸುಳ್ಳೇಳದ್ರಿಂದ ನನಿಗ್ಯಾವ ಲಾಭನಕ್ಯ? ಎನ್‌ಟಿಆರ್ ನಂತೂ ಸಾಯೋಕಡೆಸತಿ ಶಿವಪಾರ್ವತಿ ಕಾಲಿಡಕಂಡಿದ್ದ. ಇನ್ನ ಹಿಂದಿಲ್ಲಂತೂ ಕೇಳದೆ ಬ್ಯಾಡ. ಅದೊಂತರ ಬಾಂಬೆ ಹತ್ರ ಯಿರೊ ಸಮುದ್ರ. ಯಾವ ಮುಂಡೆ ಮಗನ ಚರಿತ್ರೆ ಕೆದಕಿದ್ರೂ ಇಟಗಂಡೋರು ಇಬ್ಬರು, ಕಟಗಂಡೋಳು ಒಬ್ಬಳು ಅನ್ನೋ ಚರಿತ್ರೆನೆ ಅಲ್ಲದೆ. ಅದೂ ಬ್ಯಾಡಪ್ಪ ನಮ್ಮ ಕಮಲಹಾಸನ್ ಬೇಜಾರಾದೇಟಿಗೆ ಯಂಗೆ ದೂರಾದ ಅಂತ. ಈಗವುನಿರು ವುದು ಮೂರನೆ ಹೆಂಡತಿ ಹತ್ರ ಗೊತ್ತೇ? ಈ ಮುಂಡೆಮಗ ದರ್ಶನಂಗೆ ವಿಜಯಲಕ್ಷ್ಮಿ ಬ್ಯಾಡವಾಗಿದ್ರೆ ಅವುಳಿಗೆ ಅದ ಹೇಳಿ ಜೀವನಾಂಶ ಕೊಟ್ಟು ಕಳುಸಬೇಕಾಗಿತ್ತು, ಅವುಳೇನು ಹೋಗದಿಲ್ಲ ಅಂತಿದ್ಲೆ. ಅದು ಬುಟ್ಟು ನಾನು ನನ್ನೆದ್ದಿಗೊಡದಂಗೆ ಹೊಡದ್ರೆ ಕೇಳ್ತಲ ಅವುಳು?"

"ದರ್ಶನ ಜೈಲಿಂದ ಬಂದಮ್ಯಾಲೆ ಅದಿನ್ಯಾರು ಅವುನ ಸಿನುಮ ನೋಡ್ತರೆ? ಅವುನ ಬೆಲೆನೂ ಹೋಯ್ತು."

"ಆದ್ರು ವಿಲನ್ ರೋಲ್ ಮಾಡಬವುದಲ್ಲೊ ಉಗ್ರಿ. ಹೆಡತಿ ಕೊಲ್ಲದು, ಮಕ್ಕಳ ಚಚ್ಚೊ ರೋಲ ಆರಾಮಾಗಿ ಮಾಡಬವುದು!"

❖

...ಂಗಾಲಿಯ ನಂಬಿಕೆ




...ಗಾಲಿ ಲಾಫ್ರೋರ್ಡ್. ಆಸ್ಟ್ರೇಲಿಯಾದ ಮೂಲಜನತೆಯಲ್ಲಿ ಒಬ್ಬಳೀಕೆ. ನಾವು ಸುಮ್ಮನೇ ...ಯಾದ ಮೂಲ ನಿವಾಸಿಗಳು, ಮೂಲಬುಡಕಟ್ಟು, ಆಸ್ಟ್ರೇಲಿಯಾದ ಪೂರ್ವಿಕರು-ಹೀಗೆ ... ಆ ಮಾತುಗಳು ಅಡಗಿಸಿಟ್ಟುಕೊಂಡ ನೆನಪು ಮತ್ತು ವಿಕಾಸ ಗೊತ್ತಾಗುವುದಿಲ್ಲ. ...ಯಾ ಖಂಡ ಎಲ್ಲ ಖಂಡಗಳಿಗಿಂತಲೂ ದೂರವಿರುವ, ಏಷ್ಯಾ, ಯೂರೋಪ್, ... ಅಮೆರಿಕಾ ಸಂಪರ್ಕದಿಂದ ಹೊರತಾಗಿರುವ ಭೂಭಾಗ. ನೀವು ಭಾರತದಿಂದ ... ಏಷ್ಯಾದ ಎಲ್ಲಾ ಭಾಗಗಳು, ಆಫ್ರಿಕಾ, ಯೂರೋಪ್ ಎಲ್ಲವನ್ನೂ ನೋಡಿಕೊಂಡು ... ಸ್ಥಿತಿಯಲ್ಲಿರುವ ಸೈಬೀರಿಯಾ ಮೂಲಕ ಅಲಾಸ್ಕ, ಕೆನಡಾಕ್ಕೆ ಹೋಗಿ ಅಲ್ಲಿಂದ ...ಅಮೆರಿಕಾಕ್ಕೆ ಹೋಗಬಹುದು-ಅಂದರೆ ಆಸ್ಟ್ರೇಲಿಯಾ ಬಿಟ್ಟು ಭೂಮಿಯ ಎಲ್ಲಾ ...ನೀವು ಭೂಸಂಪರ್ಕದ ನೆರವಿನಿಂದಲೇ ಹೋಗಬಹುದು. ಆದರೆ ಆಸ್ಟ್ರೇಲಿಯಾಕ್ಕೆ ...ಹೋಗಲಾಗುವುದಿಲ್ಲ, ಸಾವಿರಾರು ಮೈಲಿ ಸಮುದ್ರದಲ್ಲಿ ಹೋಗಬಲ್ಲ ಹಡಗು ಮತ್ತು ಆಕಾಶದಲ್ಲಿ ಹೋಗಬಲ್ಲ ... ಬಂದಮೇಲೆ ಆಸ್ಟ್ರೇಲಿಯಾ ಬೇರೆ ಖಂಡಗಳ ಜೊತೆಯ ಸಂಪರ್ಕ ಪಡೆಯಿತು. ಅಲ್ಲಿಯವರೆಗೆ ಹತ್ತೊಂಭತ್ತನೇ ...ನಲ್ಲಿ ಕೂಡ ಬ್ರಿಟಿಷರು ಆಸ್ಟ್ರೇಲಿಯಾವನ್ನು ಕರಿನೀರಿನ ಜಾಗವಾಗಿ, ಬಂದೀಖಾನೆಯ ಖಂಡವಾಗಿ ಬಳಸುತ್ತಿದ್ದರು. ...ಗಾದರೆ ಆಸ್ಟ್ರೇಲಿಯಾದಲ್ಲಿ ಜನರೇ ಇರಲಿಲ್ಲವೆ? ಅದು ಬಹುಮುಖ್ಯ ಪ್ರಶ್ನೆ. ಕೋಟ್ಯಂತರ ವರ್ಷಗಳ ಹಿಂದೆ ... ಮತ್ತು ಏಷ್ಯಾದ ಭೂಭಾಗಗಳು ಸೇರಿಕೊಂಡಿದ್ದಾಗ ಆಸ್ಟ್ರೇಲಿಯಾದಲ್ಲಿ ಉಳಿದಿರಬಹುದಾದ ಜನ ... ಅವರೇ ನಿಂಗಾಲಿ ಲಾಫ್ರೋರ್ಡ್‌ಳ ಕುಲದವರು.

ನಮಗೆ ಈ ಜನರ ಬಗ್ಗೆ ಗೊತ್ತಾದದ್ದು ಯೋಂಗ್ ಗೂಲಾ ಗಾಂಗ್ ಎಂಬ ನಿಂಗಾಲಿಯ ಬುಡಕಟ್ಟಿನ ಹುಡುಗಿ ಹೆಂಗಸರ ವಿಂಬಲ್ಡನ್ ಟೆನ್ನಿಸ್ ಗೆದ್ದಾಗ, ಮತ್ತು ಮಾನವಶಾಸ್ತ್ರಜ್ಞರು ಈ ಜನರ ಬಗ್ಗೆ ಬರೆದಾಗ.


ನಿಂಗಾಲಿ ಲಾಫ್ರೋರ್ಡ್ ಈಗ ಸುದ್ದಿಯಲ್ಲಿದ್ದಾಳೆ. ಪಶ್ಚಿಮ ಆಸ್ಟ್ರೇಲಿಯಾದ ಬಡಕುಟುಂಬದ ಈ ಹುಡುಗಿ ಮೊನ್ನೆ ಇಂಗ್ಲೆಂಡಿನಲ್ಲಿ ಒಂದೂವರೆ ಗಂಟೆಯ ರಂಜನೆಯ ಪ್ರದರ್ಶನ ನೀಡಿದಳು. ನರ್ತಿಸುವ, ಹಾಡುವ, ಕತೆಯಾಗಿ ತನ್ನ ಜೀವನವೃತ್ತಾಂತ ಹೇಳುವ ಈಕೆ ಕಲಿತ ಇಂಗ್ಲಿಷ್‌ನಲ್ಲಿ ಮತ್ತು ತನ್ನ ಮಾತೃಭಾಷೆಯಲ್ಲಿ ಈ ಪ್ರದರ್ಶನ ನೀಡಿದಾಗ ಎಲ್ಲರೂ ಪುಳಕಿತರಾದರು. ಈಕೆ (ನಮ್ಮೆಲ್ಲರಂತೆಯೇ) ತನ್ನ ಹದಿಮೂರನೇ ವಯಸ್ಸಿನಲ್ಲಿ ಚೂರುಪಾರು ಇಂಗ್ಲಿಷ್ ಕಲಿತು ಅದರ ನೆನಪಿನಿಂದ ತನ್ನ ಬುಡಕಟ್ಟಿನ ಮಾತೃಭಾಷೆಯಲ್ಲೇ ರಂಗಭೂಮಿಯ ಕತೆ ಹೇಳುತ್ತಾಳೆ. "ಏಕೆ, ನಿನ್ನ ಭಾಷೆಯಲ್ಲೇ ಮಾತಾಡುತ್ತೀ" ಎಂದರೆ ನಿಂಗಾಲಿ ಹೇಳಿದಳು: ಅವಳ ತಾತ ಅವಳಿಗೆ ಹಿತವಚನ ಹೇಳಿದನಂತೆ. ಆಕೆ ಎಲ್ಲೇ ಹೋಗಲಿ, ಏನನ್ನೇ ಮಾಡಲಿ, ತನ್ನ ಭಾಷೆಯನ್ನು ಕಳೆದು ಕೊಳ್ಳಬಾರದು. ಒಬ್ಬ ವ್ಯಕ್ತಿಯ ಕಲೆ, ಕನಸು ಎಲ್ಲ ಬರುವುದು ಮಾತೃಭಾಷೆಯಲ್ಲೇ. ಮಾತೃಭಾಷೆ ಇಲ್ಲದವನಿಗೆ ವ್ಯಕ್ತಿತ್ವವೇ ಇಲ್ಲ...

ಕೋಟ್ಯಂತರ ವರ್ಷ ನಮ್ಮಲ್ಲಿ ವಿಕಾಸಗೊಂಡದ್ದು ನಮ್ಮ ಭಾಷೆ. ನಮ್ಮ ಪ್ರಜ್ಞೆಯ ಬೇರುಗಳು ಮತ್ತು ಚಿಂತನೆಯ ಸ್ಫೂರ್ತಿ ಇರುವುದು ಆ ಬೇರುಗಳಲ್ಲಿ. ಈ ಬಗ್ಗೆ ನಂಬಿಕೆ ಬಂದರೆ ಮಾತ್ರ ನಮ್ಮಲ್ಲಿ ಒಬ್ಬ ಕುವೆಂಪು, ಒಬ್ಬ ಬೇಂದ್ರೆಯ ಅಂಶ ಮೊಳಕೆಯೊಡೆಯುತ್ತದೆ.

–ನವೆಂಬರ್ 8, 1995



ಮಾಡಬಾರದ್ದು ಮಾಡಿದ್ರೆ ಆಗಬಾರದ್ದು ಆಯ್ತದೆ



ಎಚ್.ಎಲ್. ಕೇಶವಮೂರ್ತಿ

ಅಣಕ

ಥೂ ಥೂ ಈ ಹೆಂಗುಸರದ್ದು ಬಲೇ ಆಗೋಗದೆ. ಹಾಳಾದ ಮಾಧ್ಯಮದವರು, ಕೆಲವು ಸಂಘಟನೆಗಳು ಅವರ ಕಡೇಕೆ ವಾಲುತ್ತಿವೆ. ಅವರು ಮಾಡಿದ್ದೇ ಸರಿ ಅಂತ ಬಿದ್ದಿವೆ. ಅಲ್ಲ ಸಂಸತ್ತಿಗೆ ಪುರುಷ ಸಂಸದರಿಗಿಂತ ಮಹಿಳಾ ಸಂಸದರೇ ಹೆಚ್ಚು ದಿವಸ ಹಾಜರಾಗೋದ್ನ ಏನೋ ವಿಶೇಷ ಕಂಡಂಗೆ ಬೊಗಳ್ತಾ ಕುಂತವೆ. ಬ್ಯಾರೆ ಏನಾದ್ರೂ ಕೇಮೆ ಇದ್ರಲ್ವ ಕಿಸಿಯೋಕೆ. ಪರೀಕ್ಷೆ ಫಲಿತಾಂಶ ಬಂದಾಗ ನೋಡಬೇಕು ಅವರ ಆರ್ಭಟನಾ. 'ಎಂದಿನಂತೆ ಬಾಲಕಿಯರದ್ದೇ ಮೇಲುಗೈ' ಅಂತ ಸಾರ್ತವೆ. ಇದರಲ್ಲಿ ಏನು ವಿಶೇಷ ಅಂತೀನಿ. ಅವ್ಕೆ ಮನೆ ಆದಬುಟ್ರೆ ಕಾಲೇಜು; ಕಾಲೇಜು ಆದ ಬುಟ್ರೆ ಮನೆ. ಇವಬುಟ್ಟು ಮೂರನೆಯದು ಅಂತ ಏನಾರ ಇದ್ದಾತಾ. ಮನೇಲಿ ತಾನೆ ಏನು ಮಾಡ್ತವೆ. ಕೇಮೆ ಇಲ್ವಲ್ಲ ಪುಸ್ತಕಕ್ಕೆ ತಗುಲಾಕ್ಕತ್ತವೆ. ಹಿಂಗಾಗೊಹೊತ್ಗೆ ಬ್ಯಾಡಬ್ಯಾಡ ಅಂದ್ರೂ ಪಾಸಾಯ್ತವಪ್ಪ. ಇದೇ ಬೋ ಹೆಚ್ಚುಗಾರಿಕೆ ಅನ್ನೊ ಹಂಗೆ ಬಿಂಬಿಸುತ್ತಾ ತಲೆ ಮೇಲೆ ಕೂರಿಸಿಕೊಂಡು ಮೆರುಸ್ತವೆ. ಹೆಂಗಸರು ಅಂದಮೇಲೆ ಎಲ್ಲಿ ಬೇಕೋ ಅಲ್ಲಿ ಬಿದ್ದಿರಬೇಕು; ಹೆಂಗಿರಬೇಕೋ ಹಂಗಿರಬೇಕು. ಎಲ್ಲಾವುದ್ನೂ ಬುಟ್ಟುಬುಟ್ಟು ನನ್ಕೈಲೇ ಎಲ್ಲಾ ಅದೆ ಅಂತ ಆಡಬಾರದ್ದ ಆಡ್ತ ಕುಂತ್ರೆ ಆಗಬಾರ್ದು ಆಗೇ ಆಗ್ತದೆ. ಅಷ್ಟಲ್ದೆ ಹಿರೀಕರು ಹೇಳಿದ್ದಾರಾ ಹೆಂಗುಸಿನ ಬುದ್ಧಿ ಮೊಣಕಾಲ ಕೆಳಗೆ ಅಂತಾವ.

ದರ್ಶನ್ ಅಂದ್ರೆ ಯಾರು? ಏನು ಕತೆ? ಚಾಲೆಂಜಿಂಗ್ ಸ್ಟಾರ್ ಅಲ್ವ. ಚಾಲೆಂಜಿಂಗ್ ಸ್ಟಾರ್‌ಗೇ ಚಾಲೆಂಜ್ ಮಾಡ್ತ ಕುಂತವ್ಳಲ್ಲಾ ಹೆಂಡತಿ ವಿಜಯಲಕ್ಷ್ಮಿ ಅನ್ನೋಳು. ಇದ್ಕೆ ಏನು ಹೇಳಾನ. ಹೆಂಡ್ತಿ ಅಂದಮೇಲೆ ತಗ್ಗಿಬಗ್ಗಿ ನಡೀಬೇಕು. ಇದು ಯಾರಾದ್ರೂ ಹೇಳೋಮಾತೇಯ. ಪೊಗರು ನೋಡಿ ಹಿಂಗಿರಾಕೆ ಬುಡ್ತಾ ಇಲ್ಲ. ಗಂಡಸು ಅಂದ್ಮೆಲೆ ಒಬ್ಬಳ್ನೇ ಏನು ಹತ್ತಾರು ಜನ ಆಳ್ತಾನಪ್ಪ ಇದ್ನೇ ತಪ್ಪು ಅಂತದೆ ಆ ಮುಕ್ಕ. ಕುಡೀತಾನೂ ಇದ್ನಂತೆ. ಅಲ್ಲ ಕುಡಿಯೋದೇನು ಮಹಾ ಪಾಪವಾ? ಅಷ್ಟಕ್ಕೇ ಗಂಡನ ಮನೆ ಬುಟ್ಟುಬುಟ್ಟು ಹೋಗ್ಬುಡಾದಾ. ಹೋದ್ರೆ ಹೋದ್ಳು ಅಂತ ಇರಬಹುದಾಗಿತ್ತೇನೋ. ತಾಳಿ ಕಟ್ಟಸ್ಕೊಂಡೋಳಲ್ವ ಸಾಯೋತನ್ಕ ಜೊತೇಲೇ ಬಿದ್ದಿರ್ತಾಳೆ, ಎಲ್ಲಿಗೋಗೋಕೆ ಹೋದಾಳು ಅಂತಾವ ಅದೆಷ್ಟೊ ಲಕ್ಷದ ಆಸ್ತೀನ ಅವುಳೆಸುರ್ಗೆ ಬರೆಸವ್ರೆ. ಹಿಂಗೆ ನಡುಮಧ್ಯದಲ್ಲೇ ಓಡೋಯ್ತಾಳೆ ಅಂದಿದ್ರೆ ಅದರ ಕತೇನೆ ಬ್ಯಾರೆ ಇರ್ತಿತ್ತು. ಅದಂಗಾಗಿರಲಿಲ್ವಲ್ಲ. ಅವಳಿದ್ದ ಜಾಗಕ್ಕೇ ಹೋಗವ್ರೆ. ನೀನೆಂಗಿದ್ರೂ ನನ್ನ ಬುಟ್ಟು ಹೋಗಿದೀಯ. ಆಸ್ತಿ ಎಲ್ಲಾನೂ ನನ್ನೆಸುರ್ಗೆ ಬರೆದುಕೊಡು ಅಂತ ನ್ಯಾಯಂವಾಗೇ ಕೇಳವ್ರೆ. ಅವು ದುಡಿದಿದ್ದಲ್ವ? ಅದ ಬರ್ದು ಕೊಡು ಅಂದವ್ರೆ. ಅದ್ದೇನು ಅವ್ಳು ಅವರಪ್ಪನ ಮನೆಯಿಂದ ಹೊತ್ಕೊಂಡು ಬಂದಿದ್ಲಾ ಇಲ್ಲ ಅನ್ನಾಕೆ. ಹಂಗಿದ್ರೂ ಬರ್ಕೊಡಾಕಿಲ್ಲ ಅಂದವ್ಳೆ. ಇಂತ ಮಾತ ಆಡಿದ್ರೆ ಯಾವ ಗಂಡಸಿಗಾದ್ರೂ ಕ್ಯಾಣ ಹತ್ತದೇಯ. ಅವರ್ಗೂ ಹಂಗಾಗದೆ. ಆ ಭರದಲ್ಲಿ ಸಾಯಿಸಿ ಬುಡ್ತೀನಿ ಅಂದಿರಬೋದು. ನಾಕು ಬಡಿದಿರಲೂಬೋದು. ಸಿಗರೇಟು ಸೇದೋ ಚಟಗಾರ ಗಂಡಸಲ್ವ ಅವ್ರು. ಇದೆಲ್ಲ ನಡೀವಾಗ ಕೈಲೇ ಉರೀತಿದ್ದ ಸಿಗರೇಟು ಇತ್ತ್ರೋ ಏನು ಕತೆಯೋ. ಅದ್ರಲಿ ಸುಟ್ಟಿರಲೂಬೋದು. ಇಷ್ಟಕೇ ಏನೋ ಮಾಡಬಾರದ್ದ ಮಾಡ್ಬುಟ್ಟ ಅನ್ನೋ ಹಂಗೆ ಅವರ ಮೇಲೆ ಪೊಲೀಸ್ನೋರ್ಗೆ ದೂರು ಕೊಟ್ಟವ್ಳಲ್ಲ. ಕಟ್ಕೊಂಡ ಗಂಡನ ಮೇಲೆ ಹಿಂಗೆಲ್ಲ ದೂರು ಹೇಳ್ತಾ ಅವ್ಳಲ್ಲ ಅವ್ಳೂ ಒಬ್ಬ ಹೆಂಗುಸಾ ಅಂತೀನಿ. ಹೆಂಗಸಿನ ಕುಲಕ್ಕೇ ಅವಮಾನಾಪ್ಪ.

ಆಯಮ್ಮ ಮಾಡಿರೋದು ತಪ್ಪು ಅಂತ ತಟ್ಟನೆ ಗೊತ್ತಾಗಿರೋದು ಅಂಬರೀಸಣ್ಣಾರಿಗೆ. ಅವರ್ಗೂ ಹೆಂಡ್ತಿ ಅವ್ರೆ. ಮಗ ಅವ್ನೆ. ಅಂದಮೇಲೆ ಅನುಭವಸ್ತರೇ ಅಲ್ವಾ. ಮನೆ ಅನ್ನೋದು ನೆಟ್ಟಗಿರಬೇಕಾದ್ರೆ ಹೆಂಗ್ಸು ಅನ್ನೋಳು ಎಷ್ಟರಲ್ಲಿರಬೇಕೋ ಅಷ್ಟರಲ್ಲಿರಬೇಕು. ಇಲ್ದಿದ್ರೆ ಸಂಸಾರ



ಅನ್ನೋದು ಯಕ್ಕುಟ್ಟಿ ಹೋಯ್ತದೆ ಅನ್ನೋದ ತಿಳ್ದಿರೋರು. ಹೆಂಗ್ಸು ಮಿತಿ ಮೀರಿ ನಡ್ಕೊಂಡ್ರೆ ಗಂಡ ಆದವನು ಒದ್ದು ಬುದ್ಧಿ ಕಲಿಸಬೇಕು; ಅವ್ಳು ಹೆಂಗೋ ಹಿಂಗೇ ಸರೋಯ್ತದೆ ಅಂತಿದ್ರೆ ಮಗನಾದ್ರೂ ಅವ್ವ ಅನ್ನಿಸಿಕೊಂಡೋಳ್ಗೆ ಹೊಡ್ದುಬಡ್ದು ಸರಿದಾರಿಗೆ ತರಬೇಕು ಅನ್ನೋದ ಅನುಭವದಿಂದ ತಿಳ್ದಿರೋರು. ಕಾಲ್ದಿಂದ್ಲೂ ನಡ್ಕೊಂಡು ಬಂದಿರೋದು ಹಿಂಗೇ ಅಲ್ವಾ. ಇಂತಾದ್ನೆಲ್ಲ ಹಾದಿರಂಪ ಬೀದಿರಂಪ ಮಾಡಬಾರದು. ನೀನು ಮಾಡಿದ್ದೀಯಲ್ಲಮ್ಮ ಅಂತ ನಾಕು ಬುದ್ಧಿ ಮಾತು ಹೇಳವ್ರೆ.

ಇತ್ತ ಕಡೆ ಏನಾಗದೆ. ಚಾಲೆಂಜಿಂಗ್ ಸ್ಟಾರ್ ಅಭಿಮಾನಿಗಳಿದ್ರಲ್ಲಾ, ಅವ್ರೂ ಅಂಬರೀಸಿಣ್ಣಾರ ಜಾಯಮಾನ ದೋರೇಯ. ಯಕಶ್ಚಿತ್ ಹೆಂಗ್ಸೊಂದು ದೂರು ಕೊಟ್ಟದ್ನೇ ದೊಡ್ಡದು ಅಂತ ತಮ್ಮ ಗುರುವನ್ನು ಪೊಲೀಸ್ನೋರು ಎಳ್ಕಂಡೋಗಿ ಸ್ಟೇಷನ್ನಿನಲ್ಲಿ ಕೂಡಾಕವ್ರೆ ಅಂದ್ರೆ ಅವರಿಗೆಂಗಾಗಬೇಕು? ಸಿಟ್ಟು ಅನ್ನೋದು ನೆತ್ತಿಗೇರದೆ. ಬುದ್ಧೀಯ ಸಿಟ್ಟಿನಕೈಗೆ ಕೊಟ್ಬರೆ ಏನೇನು ಆಗಬೇಕೋ ಅದೆಲ್ಲ ಆಗೋಗದೆ. ಹಿಂಗೆಲ್ಲ ಮಾಡ್ತೋರು ಬರೀ ಬೆಂಗ್ಳೂರಿನ ಪಡ್ಡೆ ಹುಡುಗ್ರು ಅನ್ಕೊ ಬ್ಯಾಡಿ. ಬ್ಯಾರೆ ಊರಿಂದ್ಲೂ ಬಂದಿದ್ರಂತೆ. ಆರೋಪಿ ಬುಡಿಸೋಕೆ ಮಂಡ್ಯದಿಂದ್ಲೂ ಒಂದು ಹೆಂಗಸರ ಗುಂಪೇ ಹೋಗಿತ್ತು ಅಂತೀನಿ.... ಸಧ್ಯ ಮಂಡ್ಯದ ಮರ್ಯಾದೇನ ಇವರಾದ್ರೂ ಉಳಿಸಿದ್ರು!

ದರ್ಶನ್ ಉಳಿಸೋಕೆ ಮಂಡ್ಯದಿಂದ ಹೆಂಗಸರ ಒಂದು ಗುಂಪೇ ಬಂದದೆ ಅಂತ ಅಂಬರೀಸಣ್ಣಾರ್ಗೆ ತಿಳ್ದು ಎದೆ ಉಬ್ಬಿ ಹೋಗಿರಬೇಕು. ಆಹಾ ನಮ್ಮೂರಿಂದ್ಲೂ ಜನ ಬಂದವ್ರಲ್ಲಾ ಅವರ ಮನಸ್ಸಿಗೆ ಹಿತವಾಗೋ ಹಂಗೆ ನಾಕು ಮಾತಬಿಸಾಕಾನ ಅಂತ ಅವರಿದ್ದ ತಾವ್ಗೆ ಹೋಗವ್ರೆ. ನೋಡ್ರವ್ವ ತಾಯಂದಿರಾ ಎಲ್ಲ ಸರೋಯ್ತದೆ; ನಾನೆಲ್ಲ ಸರಿಮಾಡಿವ್ನಿ ಅಂತೇನೇನೋ ಹೇಳವ್ರೆ. ಹಿಂಗೆ ಹೇಳಿದ್ನೇ ಹಿಡ್ಕಂಡು 'ಮಹಿಳೆಯ ಮೇಲಿನ ದೌರ್ಜನ್ಯ' 'ಕೌಟುಂಬಿಕ ಹಿಂಸೆ' ಇವು ನಿಲ್ಲಬೇಕು; ದರ್ಶನ್ ಪರವಾಗಿ ಅಂಬರೀಷ್ ನಿಂತಿರುವುದು ತಪ್ಪು ಅಂತೆಲ್ಲ ಕೂಗೆಬ್ಬಿಸ್ತಾ ಅವ್ರೆ. ಅಲ್ಲ ಅಂಬರೀಸಣ್ಣಾರು ಚಿತ್ರರಂಗದ ಹಿರೀಕರು. ಅದರ ಉಳಿವಿಗಾಗಿ ಇಂತಾವ್ನೆಲ್ಲ ಮಾಡಬೇಕಾಯ್ತದೆ. ಇದ್ನೇ ತಪ್ಪು ಅಂತ ಪಟ್ಟು ಹಿಡ್ಕಂಡ್ರೆ ಯಾರೂ ಏನೂ ಮಾಡೋ ಹಂಗಿಲ್ಲ.

ಅಭಿಮಾನಿಗಳು ದರ್ಶನ್ ಅರೆಸ್ಟ್ ಆಗೋದು ಬ್ಯಾಡ ಅಂತಾವ್ರೆ. ಸಿನಿಮಾದೋರೂ ಅದೇ ಹೇಳ್ತಾ ಅವ್ರೆ. ಮಂಡ್ಯದಿಂದ ಬಂದಿದ್ದ ಹೆಂಗುಸ್ರೂ ಹಂಗೇ ಅಂತ ಅವ್ರೆ. ಇದ್ನೆಲ್ಲ ಕೇಳಿ ಆಯಮ್ಮನಿಗೆ ಬುದ್ಧಿ ಬಂದಿರಬೇಕು. ನನ್ನ ಗಂಡ ಅನ್ನೋನು ಏನೂ ಮಾಡ್ಲೇ ಇಲ್ಲ, ಅವ್ನು ಹಸುವಿನಂತ ಪ್ರಾಣಿ. ಬಾತ್‌ರೂಮಲಿ ಬಿದ್ದು ನನ್ನ ತಲೆ ಒಡ್ದೋಗದೆ ಅಷ್ಟೇಯ ಅಂತ ಏನೇನೋ ನ್ಯಾಯಾಧೀಶರ ಮುಂದೆ ಹೇಳದ್ಲಂತೆ.

ಇತ್ತ ಚಲನಚಿತ್ರ ನಿರ್ಮಾಪಕ ಸಂಘ ಇತ್ತಲ್ಲ, ಅದ್ಕೆ ಕ್ಯಾಣ ಹತ್ತದೆ. ದರ್ಶನ್‌ದು ಚಿನ್ನದಂತಹ ಸಂಸಾರ. ಹಾಲುಜೇನು ಇದ್ದಂಗಿತ್ತು. ಇದ್ಕೆ ಹುಳಿ ಹಿಂಡಿದೋರು ಯಾರು ಅನ್ನೋ ತಲಾಷ್‌ಗೆ ನಿಂತವ್ರೆ. ಅಲ್ಲೂ ಒಂದೆಂಗ್ಸು ಅವುರ್ಗೆ ಸಿಕ್ಕಬಿದ್ದದೆ. ಈ ಹಾಳಾದ ಹೆಣ್ಣೇ ಇದ್ಕೆಲ್ಲ ಕಾರಣ ಅಂತಾವ 'ಮೂರು ವರ್ಷ ಇವ್ಳ ಯಾರೂ ಸಿನಿಮಾಕ್ಕೆ ಸೇರಿಸ್ಕೊ ಕೂಡ್ದು' ಅಂತಾವ ಠರಾವು ಮಾಡವ್ರೆ. ನ್ಯಾಯವೇ ಅಲ್ಲವೇನ್ರಿ! ಇದೇನಿದು ಅಸಂಗತ ಸಿನಿಮಾದ ಕತೆ ತರ ಎತ್ಲಿಂದ ಎತ್ಲಗೋ ಹೋಯ್ತಾಬಿದ್ದದಲ್ಲ, ಎಮ್ಮೆಗೆ ಜ್ವರ ಬಂದ್ರೆ ಎತ್ತಿಗೆ ಬರೆ ಹಾಕ್ದಂಗೆ ಆಯ್ತು ಅದಲ್ಲ ಅಂದ್ರೆ ಅದು ಹಂಗಲ್ಲವಂತೆ. ಅವಳಿಗೂ ದರ್ಶನ್‌ಗೂ ಸಂಬಂಧ ಇದ್ದತ್ತಂತೆ. ಸಂಬಂದ ಅಂದ್ರೆ ಎಂತಹ ಸಂಬಂಧ ಅಂತ ಕೇಳಲೇಬೇಕಿಲ್ಲವಲ್ಲ, ಇರೋದು ಅದೊಂದೇ! ನಿರ್ಮಾಪಕರೂನೆ ಅದೇಅದೇ ಇರೋದು ಅಂತಾವ ಐನಾತಿ ನ್ಯಾಯ ನೀಡವ್ರೆ. ಇದರಲ್ಲಿ ದರ್ಶನ್ ದೋಷವೇ ಇಲ್ಲವಾ... ಕೇಳಬಾರ್ದು. ಅವಳು ಹೆಂಗ್ಸು. ಅವ್ಳು ಕೂಡಿದ... ಇವನು ಗಂಡ್ಸು. ಸಾವಿರ ಜನ ಬೇಕಾರೂ ಆಳ್ತಾನೆ. ... ತಪ್ಪೆ? ಆಳಿಸ್ಕೊಳ್ಳೋಳ್ದು ತಪ್ಪೆ? ಅದೂ ಅಲ್ದೆ ಇ... ಸೂಕ್ಷ್ಮ ಅದೆ. ದರ್ಶನ್ ಮೇಲೆ 40 ಕೋಟಿ ರೂ... ಬಂಡವಾಳ ಹಾಕಾಗಿದೆ. ಅವನ್ದೆಂಗ್ರಿ ತಪ್ಪು ಅನ್ನಾಕ... ಹಿಂಗೆಲ್ಲ ಮಾಡಬಾರ್ದು ಅಂದ್ರೆ ದರ್ಶನ್‌ಗೆ ಬ... ಹಾಕಿ ನಿರ್ಮಾಪಕರೆಲ್ಲ ಬೀದಿಗೆ ಬೀಳಬೇಕಾಯ್ತದೆ ಲ...

ಆದ್ರೆ ಒಂದು ಸಂತೋಷದ ಸುದ್ದಿ. ರಾಜಕಾ... ಬರ್ತಿದ್ದ ರೋಗ ಈಗ ದರ್ಶನ್‌ಗೆ ಬಡಿದಿದೆಯಂ... ವೈದ್ಯರು ಅವರು ಇಲ್ಲೇ ಒಂದು ವಾರ ರೆಸ್ಟ್ ತಗೆ... ಅಂದವ್ರಂತೆ!

ಆಯುರಾರೋಗ್ಯ!

ಆಯುರಾರೋಗ್ಯದಿಂದ ಇರಿ ಎಂದು ಆ... ಸುತ್ತಿದ್ದುದು ಹಿಂದಿನಿಂದಲೂ ಬಂದಿರುವ ಸಂ... ಈಗ ಯಾರಾದರೂ ಆ ಮಾತು ಹೇಳಿದರೆ ಅನು... ವಂತಾಗಿದೆ!

ಯು.ಆರ್. ಅನಂತಮೂರ್ತಿಯವರು ... ರೆಡ್ಡಿಗಳು ಆಯುರಾರೋಗ್ಯದಿಂದಿರಲಿ" ಎಂ... ಜ್ಞಾನಪೀಠಿಗೂ ಅವರಿಗೂ ಎಣ್ಣೆಸೀಗೆಕಾಯಿ ಬ... ಇದೇನು ಈ ರೀತಿ ಆಶೀರ್ವದಿಸುತ್ತಿದ್ದಾರಲ್ಲ ಎಂ... ಮಾನ ಮೂಡುವುದು ಸಹಜ. ಸಕಲ ಜೀವರಾಶಿ... ಒಳಿತನ್ನೆ ಬಯಸುವ ಸಂಸ್ಕೃತಿಯಿಂದ ಹೀಗೆ ಆಗಿರ... ಎಂದು ಭಾವಿಸಿದ್ದೆ. ಅದಕ್ಕೆ ಅವರೇ ವಿವರಣೆ ನಿ... ಗಣಿಧೂಳನ್ನು ಮೈತುಂಬ ತುಂಬಿಕೊಂಡು ದುರ... ದಿಂದ ಮೆರೆಯುತ್ತಿರುವ ರೆಡ್ಡಿಗಳು ಆರೋಗ... ಗಿರಬೇಕು. ಅನಾರೋಗ್ಯವಾದರೆ ಜೈಲಿನಿಂದ ... ಬರುತ್ತಾರೆ!

ಈಗ ಇಂತಹದ್ದೇ ಅನುಮಾನ ಕಾಡುತ್ತಿದೆ.

ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅವ... ಮುಖ್ಯಮಂತ್ರಿಯವರನ್ನ 'ದಿನಗೂಲಿ' ಮುಖ... ಅಂದಿದ್ದಾರೆ. ಸದಾನಂದ ಗೌಡರು ಇ... ನೊಂದುಕೊಂಡಿಲ್ಲ, ಹೌದು ನಾನು ಆರು ಕೋಟಿ ... ಸೇವಕ–ಇದನ್ನು ನಾನೇ ಹೇಳಬೇಕೆಂದಿದ್ದೆ. ಕುಮಾ... ಯವರು ಹೇಳಿ ಒಳ್ಳೆಯದು ಮಾಡಿದ್ದಾರೆ. ... ಹಿತೈಷಿಗಳು ಹೆಚ್ಚಲಿ. ಅವರಿಗೆ ಭಗವಂತ ಆಯುರ... ನೀಡಲಿ ಎಂದು ಪ್ರಾರ್ಥಿಸುತ್ತೇನೆ ಅಂದಿದ್ದಾರೆ.

ಹೀಗೆ ಹೇಳುವಾಗ ಗೌಡರ ಹಲ್ಲಿನಲ್ಲಿ... ಮುಖದಲ್ಲಿರಲಿಲ್ಲ!

ಇವರ ಆಶಯವೂ ಅನಂತಮೂರ್ತಿಯವರ ತ... ಅಂತ ಒಂದು ಅನುಮಾನ!

ಉಪ್ಪು ತಿಂದ ದರ್ಶನ್ ನೀರು ಕುಡಿಯಲೇಬೇಕು

ಕಳೆದ ಸಂಚಿಕೆಯಲ್ಲಿ ಇಂದಿರಾ ಅಮ್ಮ ಬರೆದ ಲೇಖನ ಓದಿದೆ. ಇಂದಿರಾ ಅಮ್ಮನಲ್ಲಿ ಇಷ್ಟೊಂದು ಪ್ರಬುದ್ಧವಾಗಿ ಬರೆಯುವ ತಾಕತ್ತು ಶಕ್ತಿ ಇದೆ ಎಂಬುದನ್ನು 'ಹುಳಿಮಾವು ಮತ್ತು ನಾನು' ಸಾಬೀತು ಮಾಡಿದೆ.

ಇಷ್ಟು ದಿನಗಳವರೆಗೆ ಅವರು ಲೇಖನಗಳನ್ನು ಬರೆಯದೆ ಮನೆಯಾಯ್ತು, ಇಬ್ಬರು ಹೆಣ್ಣು ಮಕ್ಕಳಾಯ್ತು, ಪುಟ್ಟ ಇಶಾ ಆಯ್ತು ಎಂದುಕೊಂಡಿದ್ದವಂತೆ. ಬರೆಯಲು ಪ್ರೋತ್ಸಾಹಿಸಿ ಬರೆಸುತ್ತಿರುವ ನಿಮಗೆ ಅಭಿನಂದನೆಗಳು.

ಅವರ ಅನುಭವಗಳು ನನಗೆ ಮುದ ನೀಡುತ್ತಿವೆ. ಈ ಧಾರಾವಾಹಿಯನ್ನು ನನಗೆ ಪುಸ್ತಕ ಮಾಡಲು ಅನುಮತಿ ಕೊಡಿಸಿ (ಬ್ಲಾಂಕ್ ಚೆಕ್ ಕಳಿಸುತ್ತೇನೆ. ಪ್ಲೀಸ್ ತಮಾಷೆಗಲ್ಲ).

ಯಾರನ್ನೂ ಅಷ್ಟಾಗಿ ಹಚ್ಚಿಕೊಳ್ಳದ, ಓರ್ವರೇ ಏನನ್ನೋ ಯೋಚಿಸುತ್ತಿರುವಂತೆ ಯಾರ ಹತ್ತಿರನೂ ಅಷ್ಟಾಗಿ ಮಾತನಾಡದ ಮಿತಭಾಷಿ ಮೇಸ್ಟ್ರ ಸಮಕಾಲೀನರಾದ ಕಡಿದಾಳು ಶಾಮಣ್ಣ ಬಗ್ಗೆ ನಿಮ್ಮ ಪ್ರೀತಿ ಅನನ್ಯ. ಯಾಕೆಂದರೆ ಸದ್ಯಕ್ಕೆ ಲಂಕೇಶ್ ಬಳಗದ ಹಿರಿತಲೆ, ಬಳಿತಲೆ, ಬಳಿಗಡ್ಡ ಇವರೊಬ್ಬರೆ.

ಗಿರೀಶ್ ಕಾರ್ನಾಡ್ ಬಗ್ಗೆ ಬರೆಯುತ್ತಿದ್ದಾಗ ಒಂದು ತಪ್ಪಾಗಿದೆ. ಕಾರ್ನಾಡ್ ಮತ್ತು ವಿಷ್ಣುವರ್ಧನ್ ಜೊತೆಯಾಗಿ ಅಭಿನಯಿಸಿದ್ದು 'ನೀ ತಂದ ಕಾಣಿಕೆ' ಸಿನಿಮಾದಲ್ಲಿ, 'ನೀ ಬರೆದ ಕಾದಂಬರಿ' ಅಲ್ಲ, ಈ ಚಿತ್ರದಲ್ಲಿ ವಿಷ್ಣುವರ್ಧನ್ ಭಯಂಕರ ಕುಡುಕ.


-ಶೂದ್ರ ಸಂತೋಷ್, ಅಜ್ಜಂಪುರ

(ಹಾಗೆಯೇ ಕಳೆದವಾರದ 'ಕಂಡಹಾಗೆ'ಯಲ್ಲಿ ಕಾರ್ನಾಡರ ಪುಸ್ತಕದ ಶೀರ್ಷಿಕೆಯನ್ನು 'ಆಡಾಡುತ್ತಾ ಆಯುಷ್ಯ' ಎಂದು ತಪ್ಪಾಗಿ ಮುದ್ರಿತವಾಗಿದೆ. ಸರಿಯಾದ ಶೀರ್ಷಿಕೆ 'ಆಡಾಡತ ಆಯುಷ್ಯ'

-ಸಂ)

ಚೊಚ್ಚಲ ಹೆರಿಗೆಯ ಸಂದರ್ಭದಲ್ಲಿ ಹೆಣ್ಮಕ್ಕಳು ಅನುಭವಿಸುವ ಯಾತನೆಯ ತರಹೇವಾರಿ ಕಥೆಗಳನ್ನು ನಮ್ಮವ್ವನಿಂದ ಕೇಳಿದ್ದೇನೆ. ಸುಮಾರು ವರ್ಷಗಳ ಹಿಂದೆ ನಮ್ಮವ್ವ ಗುಡಿಸಲಿನಲ್ಲಿ ಹೆರಿಗೆ ಬೇನೆ ತಿನ್ನುತ್ತಿದ್ದರೆ, ಕೂಡಲೇ ಅಪ್ಪ ಸೂಲಗಿತ್ತಿಯನ್ನು ಕರೆ ತಂದರು. ಅವ್ವ ಒಂದೇ ಸಮನೇ ಅಳುತ್ತಿದ್ದಳು. ತೀರಾ ಚಿಕ್ಕವನಾದ ನಾನು ಅವಳ ಪಕ್ಕದಲ್ಲೇ ನಿಂತು ಆಕೆ ಅಳುವುದು ನೋಡಿ ನಾನು ಅಳುತ್ತಿದ್ದುದು ಇನ್ನೂ ನೆನಪಿದೆ. ನಮ್ಮ ಗುಡಿಸಲು ಪಕ್ಕದ ನಾಲ್ಕಾರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.




ಹೆಣ್ಣುಮಕ್ಕಳು, ಸೂಲಗಿತ್ತಿ ತಾಸಿಗೂ ಮಿಕ್ಕಿ ಇದ್ದು, ಅವ್ವನ ಬಾಣಂತನ ಮಾಡಿದರು. ಅವತ್ತು ನಮ್ಮ ಗುಡಿಸಲಿಗೆ ತಂಗಿ ಕಾಲಿಟ್ಟಿದ್ದಳು. ಇಂದಿರಾ ಮೇಡಂ ಅವರು ಮೊದಲ ಹೆರಿಗೆಯಲ್ಲಿ ಅನುಭವಿಸಿದ ಘಟನಾವಳಿಗಳನ್ನು ಮೆಲುಕು ಹಾಕಿರುವುದನ್ನು ಓದುತ್ತಲೆ ನನ್ನ ಹಳೆಯ ನೆನಪುಗಳಿಗೆ ಜಾರಿದೆ.

- ಬಸವರಾಜ ಹಳ್ಳಿ, ಹಸಮಕಲ್

ನಾನು ಪ್ರತಿ ಬಾರಿ ಊರಿಗೆ ಹೋದಾಗ ಊರಲ್ಲಿ ಬಸವರಾಜನ (ಬಸಿಯ) ಬಗ್ಗೆ ಒಂದಲ್ಲ ಒಂದು ರೀತಿಯ ಚರ್ಚೆ ನಡೆಯುತ್ತಲೇ ಇರುತ್ತೆ, ಅದಕ್ಕೆ ಕಾರಣ ಆತ ತನ್ನ ಹೆಂಡತಿಯ ಮೇಲೆ ಮಾಡುವ ಮಾರಣಾಂತಿಕ ಹಲ್ಲೆಗಳು. ಇದರಿಂದ ಆತನ ಹೆಂಡತಿ ನಲುಗುತ್ತಿದ್ದರಿಂದ ಊರಿನ ಜನ ಪಂಚಾಯತಿ ಮಾಡಿ ಬಸಿಯನಿಗೆ ಕ್ಯಾಕರಿಸಿ ಉಗಿದರು. ಆದರೆ ಆತ ಮನೆಗೆ ಹೋದ ಮೇಲೆ ಪುನಃ ಹೆಂಡತಿಯನ್ನು ಹೊಡೆಯುವ... ಮುಂದುವರೆಸಿದ. ಹೀಗೆ ನಿರಂತರವಾಗಿ ನಾಲ್ಕಾರು ವರ್ಷ ನಡೆ... ಇತ್ತೀಚೆಗೆ ಹೆಂಡತಿಯನ್ನು ಹೊಡೆಯುವ ಚೈತನ್ಯ ಕಳೆದುಕೊಂ... ಬಸಿಯ ಈಗ ಕಂಡುಕೊಂಡಿರುವ ಉಪಾಯ ಯಾವುದೆಂದರೆ ... ವಿಷ ಕುಡಿದು ಸಾಯುವುದು. ಆಕೆ ದುಡಿದ ಹಣ... ಪೂರ್ತಿಯಾಗಿ ಕುಡಿದು ಮುಗಿಸುವುದು ಮತ್ತು ಜೊ... ಆಕೆಗೆ ನೂರಾರು ರೀತಿಯ ಹಿಂಸೆ ನೀಡುವುದು ಬ... ಕಾಯಕವಾಗಿತ್ತು. ಗಂಡನನ್ನು ಬಿಟ್ಟು ಹೋಗಲ... ಅಸಹಾಯಕತೆ ಒಂದೆಡೆಯಾದರೆ, ಕಾನೂನಿನ ಪರಿ... ಇಲ್ಲದಿರುವುದು, ಮತ್ತೊಂದು ಕಡೆ ಬಸಿ... ಹೆಂಡತಿಯನ್ನು ಅಸಹಾಯಕತೆಗೆ ದೂಡಿದ್ದವು. ಮುಖ್ಯ ವಿಷಯ ಯಾವುದೆಂದರೆ ನಮ್ಮ ಇಡೀ ... ಆ ಹೆಣ್ಣುಮಗಳ ಕಷ್ಟಕ್ಕೆ ಮರುಗಿ ಎಲ್ಲರೂ ಬಸಿ... ವಿರುದ್ಧ ನಿಂತಿದ್ದು.

ಈ ಹಿನ್ನೆಲೆಯಲ್ಲಿ ನೋಡಿದರೆ ಮೊನ್ನೆ ಬೆಂಗಳೂರಿನಲ್ಲಿ ನಡೆದ... ನಟ ದರ್ಶನ್ ಪ್ರಕರಣದಲ್ಲಿ ಯಾವ ಅಪರಾಧಿಗೆ ಶಿಕ್ಷೆ ನೀಡಬೇಕ... ಆತನ ಪರವಾಗಿ ಅಭಿಮಾನಿಗಳು ಮತ್ತು ಚಿತ್ರರಂಗ ನಿಂತಿದ್ದು ನ... ಅಚ್ಚರಿ ಆಯಿತು. ಹಾಗೆ ಮಾಡುವ ಮೂಲಕ ನೊಂದ ಮ... ಇನ್ನಷ್ಟು ನೋವು ನೀಡಿರಬಹುದು. ಇದನ್ನೆಲ್ಲ ನೋಡಿ ಬೆಂಗಳೂರಿನ... ವಿದ್ಯಾವಂತರಿಗಿಂತ ನಮ್ಮ ಗ್ರಾಮೀಣ ಪ್ರದೇಶದಲ್ಲಿರುವ ಮುಗ್ಧ ... ಎಷ್ಟೋ ವಾಸಿ ಅನ್ನಿಸುತ್ತದೆ.

ಅಭಿಮಾನಿಗಳ ಬೆಂಬಲ, ಹಣ, ಅಧಿಕಾರದ ಬಲವಿದ್ದರೆ ... ಮಾಡಿದರೂ ನಡೆಯುತ್ತದೆ ಎಂಬ ಭ್ರಮೆಯಲ್ಲಿರುವವರಿಗೆ ನಿಧಾ...





ವಿಷ್ಣುವರ್ಧನನಿಗೆ ಪರಮಾತ್ಮನ ಭಯ

ಇತ್ತೀಚೆಗೆ ಹಲವಾರು ರಗಳೆಗಳ ಮಧ್ಯೆ ಕಳೆದುಹೋಗಿರುವ ಚಿತ್ರರಂಗದಲ್ಲಿ ಮೆಲ್ಲಗೆ 'ಪರಮಾತ್ಮ'ನ ಕಾವು ಏರುತ್ತಿದೆ.

'ಜಾಕಿ' ಚಿತ್ರದ ನಂತರ ಪುನೀತ್ ನಟಿಸುತ್ತಿರುವ ಚಿತ್ರವೊಂದು ತೆರೆಗೆ ಬರುತ್ತಿರುವುದರಿಂದ ಜನರ ಕುತೂಹಲ ಹೆಚ್ಚಾಗಿದೆ. ನಿರ್ದೇಶಕ ಯೋಗರಾಜ್ ಭಟ್ಟರು ಈ ಹಿಂದಿನಂತೆ ಪಬ್ಲಿಸಿಟಿ ಬೂಸ್ಟ್‌ಅಪ್ ಮಾಡುವುದನ್ನು ನಿಲ್ಲಿಸಿ ಸಿನಿಮಾವನ್ನು ಸದ್ದಿಲ್ಲದೆ ತೆರೆಗೆ ತರುವ ಹೊಸ ತಂತ್ರವನ್ನು ಹೆಣೆದಿದ್ದಾರೆ. ಸಿನಿಮಾಗೆ ಸಿಕ್ಕಾಪಟ್ಟೆ ಪ್ರಚಾರ ಮಾಡಿ ಜನರಲ್ಲಿ ಅತಿಯಾದ ನಿರೀಕ್ಷೆ ಹುಟ್ಟುಹಾಕಿದರೆ ನಷ್ಟ ತಮಗೇ ಅನ್ನೋದನ್ನು ಬಹುಶಃ ಭಟ್ಟರು ಅರ್ಥಮಾಡಿಕೊಂಡಿದ್ದಾರೆ.

ಉದಾಹರಣೆಗೆ ಎರ್ರಾಬಿರ್ರಿ ಪ್ರಚಾರ ಪಡೆಯಲು ಹೋಗಿ ಪುನೀತ್‌ರ 'ರಾಜ್' ಮತ್ತು ಶಿವಣ್ಣನ ನೂರನೇ ಸಿನಿಮಾ 'ಜೋಗಯ್ಯ' ಸೇರಿದಂತೆ ಸತತ ಮೂರು ಭಯಾನಕ ಸೋಲುಗಳಿಗೆ ಎದೆಯೊಡ್ಡಿರುವ ನಿರ್ದೇಶಕ ಪ್ರೇಮ್ ಮುಂದೆ ಭಟ್ಟರು ಸದ್ದೇ ಇಲ್ಲದೆ ಸಿನಿಮಾವನ್ನು ಗೆಲ್ಲಿಸುವ ಪ್ಲಾನು ಮಾಡಿದಂತಿದೆ.

ಸಿನಿಮಾ ಮಾಡುವುದರಲ್ಲಿ ಭಟ್ಟರು ಎಷ್ಟು ಚಾಲಾಕಿಯಾಗಿದ್ದಾರೆಂದರೆ, ಚಿತ್ರದ ಮುಹೂರ್ತ ನಡೆದ ಕೂಡಲೇ ಈ ಚಿತ್ರದ ಟೀವಿ ರೈಟ್ಸ್‌ಅನ್ನು ಮಾರಾಟಕ್ಕಿಟ್ಟರು. ಮೊದಲು ಉದಯ ಟೀವಿಯವರು ಎರಡೂವರೆ ಕೋಟಿತನಕ ಆಫರ್ ಮಾಡಿದ್ದರು. ಆದರೆ ಅಷ್ಟರಲ್ಲಿ ಸುವರ್ಣ ಟಿವಿಯವರು ಒಂದೇ ಏಟಿಗೆ ಮೂರೂವರೆ ಕೋಟಿಗೆ ಅದನ್ನು ಖರೀದಿಸಿದ್ದಾರೆ.




ಅಲ್ಲಿಗೆ ಚಿತ್ರಕ್ಕೆ ಖರ್ಚಾದ ಮುಕ್ಕಾಲು ಪಾಲು ದುಡ್ಡು ಬಂದಂತಾಯಿತು. ಹೆಸರಿಗೆ ಈ ಚಿತ್ರಕ್ಕೆ ಜಯಣ್ಣ ನಿರ್ಮಾಪಕನಾದರೂ ಭಟ್ಟರು ಮತ್ತು ಅವರ ಹಳೇ ಪಾರ್ಟನರ್ ಸುಬ್ರಹ್ಮಣ್ಯ ಅವರ ಶೇರು ಕೂಡಾ ಇದೆ. ಈಗ ಅಶ್ವಿನಿ ಆಡಿಯೋದವರು ಆಡಿಯೋ ಹಕ್ಕಿಗೆ ಬರೋಬ್ಬರಿ ತೊಂಭತ್ತು ಲಕ್ಷ ರೂಪಾಯಿ ನೀಡಿದ್ದಾರೆ. ಇವತ್ತಿನ ದಿನದಲ್ಲಿ ನಿರ್ಮಾಪಕರೇ ಕಾಸು ಖರ್ಚು ಮಾಡಿ ಸೀಡಿ ತಯಾರಿಸಿದರೂ ಆಡಿಯೋ ಕಂಪೆನಿಯವರು ಅದನ್ನು ಮಾರ್ಕೆಟ್ ಮಾಡಲು ಹಿಂದುಮುಂದು ನೋಡುತ್ತಾರೆ. ಇಂಥದ್ದರಲ್ಲಿ ತೊಂಭತ್ತು ಲಕ್ಷ ಎಂದರೆ ಸುಮ್ಮನೆ ಮಾತೇ?

ಅಲ್ಲಿಗೆ ನಾಲ್ಕು ಕೋಟಿ ನಲವತ್ತು ಲಕ್ಷ ರೂಪಾಯಿ 'ಪರಮಾತ್ಮ'ನ ಪಾದಕ್ಕೆ ಈಗಾಗಲೇ ಬಂದು ಬಿದ್ದಿದೆ. ಹೀಗಿರುವಾಗ ಸಿನಿಮಾ ಬಿಡುಗಡೆಯ ನಂತರ ನಷ್ಟದ ಮಾತೇ ಇಲ್ಲ, ಇದು ಯೋಗರಾಜ್ ಭಟ್ ಮತ್ತು ಪುನೀತ್ ಕಾಂಬಿನೇಷನ್‌ನ ಮೊದಲ ಚಿತ್ರವಾಗಿರುವುದರಿಂದ ಮತ್ತು ಹಾಡುಗಳಲ್ಲಿನ ಗಿಮಿಕ್ಕು ಮತ್ತು ಹೊಸತನ ಇರುವುದರಿಂದ ಚಿತ್ರಕ್ಕೆ ಸುಲಭವಾಗಿ ಪ್ರಚಾರ ಗಿಟ್ಟುತ್ತದೆ.

ಕೋಟ್ಯಂತರ ರೂಪಾಯಿ ಖರ್ಚಿನಲ್ಲಿ ದ್ವಾರಕೀಶ್ ನಿರ್ಮಿಸಿರುವ 'ವಿಷ್ಣುವರ್ಧನ' ಚಿತ್ರ ಈಗ 'ಪರಮಾತ್ಮ'ನ ಆಗಮನಕ್ಕಾಗಿ ಕಾಯುತ್ತಾ ಕುಳಿತಿದೆ. ಪುನೀತ್‌ನ 'ಪರಮಾತ್ಮ'ನ ಮುಂದೆ ತಮ್ಮ ಚಿತ್ರವನ್ನು ಪ್ರತಿಸ್ಪರ್ಧೆಗೆ ಬಿಟ್ಟರೆ ಎಲ್ಲಿ ಲುಕ್ಸಾನು ಅನುಭವಿಸಬೇಕೋ ಎಂಬ ಭಯ ಕುಳ್ಳನದ್ದು.

ಹಾಗೆ ನೋಡಿದರೆ ಕಳೆದ ಬಾರಿ ಪುನೀತ್ ನಟನೆಯ 'ಜಾಕಿ' ಮತ್ತು ಸುದೀಪ್ ನಟನೆಯ 'ಕೆಂಪೇಗೌಡ' ಚಿತ್ರಗಳು ಒಟ್ಟೊಟ್ಟಿಗೇ ರಿಲೀಸ್ ಆಗಿದ್ದವು. ಜನ ಎರಡೂ ಚಿತ್ರಗಳಿಗೂ ಮುಗಿಬಿದ್ದಿದ್ದರು. ಪರಿಣಾಮವಾಗಿ ಎರಡೂ ಚಿತ್ರಗಳ ನಿರ್ಮಾಪಕರೂ ಭರ್ಜರಿ ಲಾಭ ಕಂಡಿದ್ದರು.



ಈಗಲೂ ಸುದೀಪ್ ನಟಿಸಿರುವ 'ವಿಷ್ಣುವರ್ಧನ' ಮತ್ತು ಪುನೀತ್ ನಟಿಸಿರುವ 'ಪರಮಾತ್ಮ' ಮುಖಾಮುಖಿಯಾಗುವ ಸಾಧ್ಯತೆಯಿದೆ. ಪಡೆಯೋರು ಯಾರು ಕಳೆದುಕೊಳ್ಳೋರು ಯಾರು ಅನ್ನೋದನ್ನು ಮಾತ್ರ ಕಾದುನೋಡಬೇಕು.

• ಅರುಣ್

ಹುಚ್ಚರ ಸಮಾಗಮ



ಇಬ್ಬರು ಹುಚ್ಚರು ಒಂದಾಗುತ್ತಿದ್ದಾರೆ!

ತಮ್ಮ ಹುಚ್ಚಾಟಗಳಿಂದಲೇ ಫೇಮಸ್ ಆಗಿರುವ ಉಪೇಂದ್ರ ಮತ್ತು ಸುದೀಪ್ ಒಂದೇ ಚಿತ್ರದಲ್ಲಿ ಕೆಲಸ ಮಾಡಲು ಸಿದ್ಧರಾಗಿದ್ದಾರೆ. ರಿಯಲ್ ಹುಚ್ಚ ಉಪ್ಪಿ ನಟಿಸುತ್ತಿರುವ ಈ ಸಿನಿಮಾವನ್ನು ಕಿಚ್ಚ ಸುದೀಪ್ ನಿರ್ದೇಶಿಸುತ್ತಿದ್ದಾರೆ. ಈ ವಿಷಯವನ್ನು ಖುದ್ದು ಉಪ್ಪಿ ಮತ್ತು ಸುದೀಪ್ ಅವರೇ ಒಪ್ಪಿಕೊಂಡಿದ್ದಾರಂತೆ. ಸದ್ಯ ತೆಲುಗಿನ 'ಈಗ' ಚಿತ್ರದಲ್ಲಿ ಬ್ಯುಸಿಯಾಗಿರುವ ಸುದೀಪ್ ಜೊತೆಜೊತೆಗೆ ತಮ್ಮ ಹೊಸ ಸಿನಿಮಾಕ್ಕಾಗಿ ಎಲ್ಲ ಸಿದ್ಧತೆಗಳನ್ನೂ ನಡೆಸಿದ್ದಾರೆ. ಹಾಗೆ ನೋಡಿದರೆ ಸುದೀಪ್ ನಿರ್ದೇಶನದ 'ಕನ್ವರ್‌ಲಾಲ್' ಮತ್ತು 'ರಕ್ತಚರಿತ್ರೆ' ಸಿನಿಮಾಗಳು ಬಹಳ ಹಿಂದೆ ಆರಂಭಗೊಂಡಿದ್ದರೂ ಅವು ಇನ್ನೂ ಮುಕ್ತಾಯಗೊಂಡಿಲ್ಲ, ಹಾಗಿದ್ದೂ ಉಪೇಂದ್ರನ ಸಿನಿಮಾ ಮಾಡಲು ಹೊರಟಿರುವ ಸುದೀಪ್ ಇದನ್ನಾದರೂ ಪೂರ್ತಿ ಮಾಡುತ್ತಾರೋ ಏನೋ?

ವೈಯಕ್ತಿಕವಾಗಿ ಈ ಇಬ್ಬರೂ ನಟ-ನಿರ್ದೇಶಕರು ಕಿರಿಕಿರಿ ಸ್ವಭಾವದವರಾದ್ದರಿಂದ ಇವರಿಬ್ಬರು ಒಟ್ಟು ಸೇರುತ್ತಿರುವುದು ಎರಡು ಹುಂಜಗಳನ್ನು ಒಟ್ಟಿಗೇ ಬಿಟ್ಟಂತಾಗಿದೆ. ಹುಂಜಗಳು ಕದನಕ್ಕೆ ನಿಲ್ಲುತ್ತವೋ? ಸೈಲೆಂಟಾಗಿ ಸಿನಿಮಾ ಮುಗಿಸುತ್ತವೋ? ಸದ್ಯಕ್ಕೆ ಹೇಳೋದು ಕಷ್ಟ.

...ನಿನ ಹಲ್ಲುಗಳು ಸಾಕಷ್ಟು ಹರಿತವಾಗಿದೆ ಎಂಬುದು ತಿಳಿಯುವುದು ...ಕ್ಕೆ. ಉಪ್ಪು ತಿಂದಿರುವ ದರ್ಶನ್ ನೀರು ಕುಡಿಯಲೇ ಬೇಕು.

- ಮಂಜಣ್ಣ, ಸೊರಬ.

ಹಿಂದೂತ್ವವಾದಿಗಳ ಶಕ್ತಿ ಕೇಂದ್ರವಾದ ಎಂಟು ಮಠಗಳಿರುವ ...ಡುಪಿಯಲ್ಲಿ ಸಂಘ ಪರಿವಾರದ ಅಟ್ಟಹಾಸ ಮಿತಿಮೀರಿದೆ. ಗೋ ...ರಕ್ಷಣೆಯ ನೆಪದಲ್ಲಿ ಅಮಾಯಕ ಮುಸ್ಲಿಂ ವ್ಯಾಪಾರಿಯ ಮೇಲೆ ನಡೆದ ...ಮಾನುಷ ಹಲ್ಲೆ ಎಲ್ಲ ಪ್ರಜ್ಞಾವಂತರ ಮನಸ್ಸನ್ನು ಕಲುಕುವಂಥದ್ದು.

ಈ ಘಟನೆಯ ಬಗ್ಗೆ ಜಿ. ರಾಜಶೇಖರ ಮತ್ತು ಕೆ.ಫಣಿರಾಜ್ ತಮ್ಮ ...ನದಲ್ಲಿ ಬಹಳ ಮನೋಜ್ಞವಾಗಿ ವಿವರಿಸಿದ್ದಾರೆ (ಲಂಕೇಶ್ 7-9-11) ನಮ್ಮ ಮುಖ್ಯ ಪತ್ರಿಕೆಗಳೂ, ದೃಶ್ಯ ಮಾಧ್ಯಮಗಳೂ ಇಂಥ ಘಟನೆಗಳನ್ನು ...ಪೂರ್ಣವಾಗಿ ನಿರ್ಲಕ್ಷಿಸುತ್ತಿವೆ. ನಮ್ಮ ಪ್ರಮುಖ ರಾಜಕೀಯ ಪಕ್ಷಗಳು ...ಸುತ್ತಿರುವ ಧೋರಣೆ ಕೂಡ ಆತಂಕಕಾರಿಯಾಗಿದೆ.

ಜಿ.ರಾಜಶೇಖರ ಕನ್ನಡ ಉತ್ತಮ ವಿಮರ್ಶಕ, ಚಿಂತಕ ಎಂದು ...ರಾದವರು. ಫಣಿರಾಜ್ ಕೂಡಾ ತಮ್ಮ ಪ್ರಖರ ಬರಹಗಳಿಂದ ಓರ್ವ ...ತಾ ಲೇಖಕರಾಗಿ ಗುರುತಿಸಲ್ಪಟ್ಟವರು. ತಮ್ಮ ಕಣ್ಣ ಮುಂದಿಗೆ ಘಟನೆಗಳನ್ನು ...ತಿಯಿಂದ ವಿವರಿಸುವ ಈ ಲೇಖನ ಅವರಿಬ್ಬರ ಮಾನವೀಯ ಕಾಳಜಿಗೆ ...ಯಾಗಿದೆ.

- ಐ.ಆರ್.ಪ್ರಮೋದ್, ಈ ಮೇಲ್ ಮೂಲಕ

...ಮಿಳುನಾಡಿನಲ್ಲಿ ದಲಿತರ ಪ್ರತಿಭಟನೆಯ ಸಂದರ್ಭದಲ್ಲಿ ನಡೆದ ಪೊಲೀಸ್ ...ಯಲ್ಲಿ ಸತ್ತವರ ಸಂಖ್ಯೆ ಎಂಟು. ಇದು ನಮ್ಮ ಬಹುತೇಕ ಪತ್ರಿಕೆಗಳಲ್ಲಿ ...ಅಥವಾ 7ನೇ ಪುಟಗಳಲ್ಲಿ ಅದೂ ಒಂದು ರೀತಿಯ ಅನಾದರದ ...ಗಿದ್ದರೆ ಇನ್ನೂ ಒಂದೆರಡು ಪತ್ರಿಕೆಗಳಲ್ಲಿ ಇದರ ಸುದ್ದಿ ಕೂಡ ... ಬಹುಶ ಈ ಜಾಣ ಕುರುಡು, ಮರೆ ಮೋಸಕ್ಕೆ ಕಾರಣ ಇವರಿಗೆ ...ದ ಸೊಬ್ಬು ಇಲ್ಲವೇ ಇಲ್ಲವೆನಿಸುತ್ತದೆ. ಆದರೆ 2002ರಲ್ಲಿ ಗುಜರಾತ್‌ನಲ್ಲಿ ...ಥ ನಡೆಸಿ, ಜಗತ್ತಿನ ಯಾವ ಡಿಟರ್ಜೆಂಟ್‌ಗಳನ್ನು ಉಪಯೋಗಿಸಿದರೂ ಹೋಗದಷ್ಟು ಕೈಮೈಯೆಲ್ಲ ರಕ್ತದ ಕಲೆಗಳನ್ನು ಮೆತ್ತಿಕೊಂಡಿರುವ ನರೇಂದ್ರ ಮೋದಿ ಈಗ ಸದ್ಭಾವನ ಪರವಾಗಿ ಮೂರು ದಿನ ಉಪವಾಸ ನಡೆಸುತ್ತಾರೆ ಎನ್ನುವ ಸುದ್ದಿಯೇ ಮನಸ್ಸಿಗೆ ಘಾಸಿಗೊಳಿಸುವಂತದ್ದು. ನರಮೇಧದ ರೂವಾರಿ ನರೇಂದ್ರ ಮೋದಿ ಹತ್ಯಾಕಾಂಡದಂತಹ ಅಪರಾಧವನ್ನು ಎಸಗಿ ಕಳೆದ 9 ವರ್ಷಗಳಿಂದ ಸುಖವಾಗಿ ನಿದ್ರಿಸಿದ್ದಾರೆ ಎನ್ನುವುದೇ ಮನುಕುಲದ ಒಂದು ದುರಂತ.

ಇತ್ತೀಚೆಗೆ ನೀಡಿದ ತೀರ್ಪಿನಲ್ಲಿ ಸುಪ್ರೀಂಕೋರ್ಟ್ ಎಲ್ಲಿಯೂ ಮೋದಿ ನಿರಪರಾಧಿ ಎಂದು ಹೇಳಿಲ್ಲ. ಸುಪ್ರೀಂಕೋರ್ಟ್ ಹೇಳಿದ್ದು ತಾನು ವಿಚಾರಣೆ ನಡೆಸುವುದಿಲ್ಲ, ಬದಲಾಗಿ ಮ್ಯಾಜಿಸ್ಟ್ರೇಟ್ ನ್ಯಾಯಾಲಯವೇ ನಿರ್ಧರಿಸಲಿ ಎಂದು ಮಾತ್ರ. ಇದನ್ನೇ ನಮ್ಮ ದಿನಪತ್ರಿಕೆಗಳು ಮುಖಪುಟದ ಸುದ್ದಿಯನ್ನಾಗಿಸಿದ್ದು ಮತ್ತು ಕೋಮುವಾದಿ ಬಿಜೆಪಿ ತನಗೆ ಜಯ ಸಂದಿದೆ ಎನ್ನುವಂತೆ ಬೀಗಿದ್ದು.

85 ವರ್ಷ ವಯಸ್ಸಿನ ಅಡ್ವಾನಿಗೆ 1990ರಲ್ಲಿ ತಮ್ಮ ಕೋಮುವಾದಿ, ಮುಸ್ಲಿಂ ದ್ವೇಷದ ರಥಯಾತ್ರೆ ಹುಟ್ಟು ಹಾಕಿದ ಕೋಮುಗಲಭೆಗಳು, ಈ ಮೂಲಕ ಭಯೋತ್ಪಾದನೆ ತನ್ನ ನೆಲೆ ಕಂಡುಕೊಳ್ಳಲು ಒಂದು ಒಪನಿಂಗ್ ಸಿಕ್ಕಿದ್ದು, ಇದಕ್ಕೆ ತಾನು ಸಂಪೂರ್ಣ ಹೊಣೆಗಾರ ಎನ್ನುವ ಪಾಪ ಪ್ರಜ್ಞೆಯಾಗಲಿ, ಪ್ರಾಯಶ್ಚಿತ್ತವಾಗಲಿ ಇಲ್ಲ, ಅದರ ಬದಲು ಅಮಾಯಕರ ಸಾವುಗಳಿಂದ, ಆ ದ್ವೇಷದ ಯಾತ್ರೆಯಿಂದ ಸಿಕ್ಕಿದ ಅಧಿಕಾರ ಮತ್ತೊಮ್ಮೆ ಅವರಲ್ಲಿ ಇನ್ನಿಲ್ಲದ ದುರಾಸೆಗಳನ್ನು ಹುಟ್ಟಿ ಹಾಕಿದಂತಿದೆ.



ಅದೆಲ್ಲ ಹೋಗಲಿ, ಈಗ ಇವಾವುದರ ಬಗ್ಗೆ ಪ್ರತಿಕ್ರಿಯಿಸದ, ಪ್ರತಿಭಟಿಸದ ನಮ್ಮೆಲ್ಲರ ಪಂಚೇಂದ್ರಿಯಗಳಿಗೆ ಏನಾಗಿದೆ? ಈಗ ಕೇವಲ ರಾಜಕಾರಣಿಗಳು ಮಾತ್ರವಲ್ಲ, ನಮ್ಮೆಲ್ಲರ ರಾಜಕೀಯ ಪ್ರಜ್ಞೆ, ಸಾಮಾಜಿಕ ಪರಿಕಲ್ಪನೆ, ರಾಜಕೀಯ ವಿವೇಚನೆ ಎಲ್ಲವಕ್ಕೂ ತುಕ್ಕು ಹಿಡಿದಿದೆ. ನಮ್ಮ ನೆಲದ ಕಾನೂನು ಅಸಹಾಯಕವಾಗಿಲ್ಲ, ಅದು ದುರ್ಬಲವಲ್ಲ ಎಂದು ಇವರಿಗೆ ತಕ್ಕ ಶಿಕ್ಷೆ ನೀಡುವ ಮೂಲಕ ಸಾಬೀತುಪಡಿಸಬೇಕಾಗಿದೆ.

- ಬಿ.ಶ್ರೀಪಾದ್ ಭಟ್, ಬೆಂಗಳೂರು

ದೀಪಕ್ ತಿಮ್ಮಯ್ಯ ಜತೆ 'ಉದಯ ನ್ಯೂಸ್' ಚಾನೆಲ್‌ನಲ್ಲಿ ಗೌರಿ ನಡೆಸಿದ ಮಾತುಕತೆಯ ಪೂರ್ತಿ ಭಾಗವನ್ನು ಆಸ್ವಾದಿಸಿದೆ. ಕನ್ನಡದ ಚಿತ್ರರಂಗದ ಬುದ್ಧಿಗೇಡಿ ಹಿರಿಯರನ್ನು ಗೌರಿ ತರಾಟೆಗೆ ತೆಗೆದುಕೊಂಡದ್ದು ಸರಿಯಾದ ಕೆಲಸ.


ಗಂಡನ ಕ್ರೌರ್ಯದ ಗುರುತುಗಳು ಬಾತ್‌ರೂಮಿನಲ್ಲಿ ಬಿದ್ದು ಆದ ಗಾಯದ ಗುರುತುಗಳಾಗಿ ಬದಲಾದುದು ಇಡೀ ನಮ್ಮ ವ್ಯವಸ್ಥೆಯ ಒಂದು ರೂಪಕದಂತಿದೆ ಅಲ್ಲವೇ? ಹೆಂಡತಿಯನ್ನು ಗಂಡ ಹೊಡೆಯುವುದು ಮತ್ತು ಮಗ ತಾಯಿಯನ್ನು ಹೊಡೆಯುವುದೆಲ್ಲ ಸಾಮಾನ್ಯ ಸಂಗತಿ ಎಂದು ಚಿತ್ರರಂಗದ ಹಿರಿಯ ಅಂಬರೀಷ್ ಅಪ್ಪಣೆ ಕೊಟ್ಟಾದ ಮೇಲೆ ಇನ್ನೇನು ಉಳಿಯಿತು? ಇವರೆಲ್ಲ ಎಂತಹ ರೋಲ್ ಮಾಡೆಲ್‌ಗಳು? ಇವರೆಲ್ಲ ಎಷ್ಟು ದಶಕಗಳನ್ನು ಹಿಂದೆ ಇದ್ದಾರೆ? ಜೈ ಕನ್ನಡ ಭುವನೇಶ್ವರಿ.

- ಶ್ರೀನಿವಾಸ ಕಾರ್ಕಳ, ಮಂಗಳೂರು

ಯಶ್ ಗುಜುರಿ ಹೀರೋನಾ?

ಇತ್ತೀಚೆಗಷ್ಟೇ ನಿರ್ಮಾಪಕರ ಸಂಘದ ಅಧ್ಯಕ್ಷರಾದ ಮುನಿರತ್ನ ಸಿಕ್ಕಾಪಟ್ಟೆ ಗರಂ ಆಗಿದ್ದಾರೆ. ಒಂದೆಡೆ ನಟಿ ನಿಖಿತಾಳ ವಿರುದ್ಧ ನಿಷೇಧ ಹೇರಿ ಎಲ್ಲರಿಂದ ಉಗಿಸಿಕೊಳ್ಳುತ್ತಿರುವ ಮುನಿರತ್ನ ಇನ್ನೊಂದೆಡೆ ಸ್ವತಃ ಹೊಸ ಹೀರೋಗಳ ಹಾಗೂ ಕೆಲವು ನಿರ್ಮಾಪಕರ ವಿರುದ್ಧ ಗುಡುಗಿ ಅಚ್ಚರಿ ಮೂಡಿಸಿದ್ದಾರೆ.

"ಈಗಿನ ನಟರಿಗೆ ಚಿತ್ರದ ಕಥೆ ಬೇಕಿಲ್ಲ, ಯಾರು ನಿರ್ದೇಶಕರು ಅನ್ನುವುದರ ಚಿಂತೆಯೂ ಅವರಿಗಿಲ್ಲ, ಅದೆಂತಹ ಸಿನಿಮಾವೇ ಆಗಿರಲಿ, ಕೆಲವು ಹೀರೋಗಳಿಗೆ ಬೇಕಾಗಿರುವುದು ಸಂಭಾವನೆ ಮಾತ್ರ. ಸ್ಯಾಟಲೈಟ್ ಹಕ್ಕಿಗೆ ಒಂದು ಕೋಟಿ ಸಿಗುವುದಾದರೆ ತನಗೆ ಒಂದೂವರೆ ಕೋಟಿ ಕೊಡಿ ಅಂತ ಕೇಳುತ್ತಾರೆ. ನಿನ್ನೆ ಮೊನ್ನೆ ಹುಟ್ಟಿ ಈಗ ಹೀರೋಗಳಾದವರು ಕೋಟಿ ಕೋಟಿ ಕೇಳುತ್ತಾರೆ. ಯಶ್ ಅನ್ನೋ ಯುವನಟ ನನಗೆ 90 ಲಕ್ಷ ರೂಪಾಯಿ ಸಂಭಾವನೆ ಬೇಕೆಂದು ಹೇಳುತ್ತಾನೆ. ಅವನ ಯಾವ ಸಿನಿಮಾ ಮಾರ್ನಿಂಗ್ ಶೋ ಫುಲ್ ಆಗಿದೆ? ಶಿವಾಜಿನಗರದ ಗುಜುರಿ ಅಂಗಡಿಗಳ ನಡುವೆ ನಿಲ್ಲಿಸಿದರೂ ಈತ ಯಾರು ಅಂತ ಯಾರೂ ಗುರುತಿಸುವುದಿಲ್ಲ, ಹಾಗೊಮ್ಮೆ ಈತನನ್ನು ಯಾರಾದರೂ ಗುರುತಿಸಿ ಆಟೋಗ್ರಾಫ್ ಪಡೆದರೆ ನಾನು ಬೆಂಗಳೂರನ್ನೇ ಬಿಡ್ತೀನಿ" ಎಂದು ಮುನಿರತ್ನ ಬುಸುಗುಟ್ಟಿದ್ದಾರೆ.



"ಒಂದೆರಡು ಸಿನಿಮಾದಲ್ಲಿ ಮುಖ ತೋರಿಸುತ್ತಿದ್ದಂತೇ ಧಿಮಾಕು ಶುರು ಮಾಡುವ ಚಿಲ್ಲರೆ ಹೀರೋಗಳ ಮೇಲೆ ಕೋಟಿಗಟ್ಟಲೆ ಹಣ ಹಾಕಿ ಕಡೆಗೆ ಬೀದಿಗೆ ಬರುವುದಕ್ಕಿಂತ ನಮ್ಮ ಮಕ್ಕಳನ್ನೇ ನಾಯಕರನ್ನಾಗಿ ಮಾಡಿದರೆ ಅಲ್ಲಿ ಕನಿಷ್ಠ ಸಂತೃಪ್ತಿಯಾದರೂ ಸಿಗುತ್ತದೆ. ನಮ್ಮ ಚಿತ್ರರಂಗ ಈ ಮಟ್ಟಿಗೆ ಹಳ್ಳ ಹಿಡಿಯಲು ನಮ್ಮ ನಿರ್ಮಾಪಕರೂ ಕಾರಣರಾಗಿದ್ದಾರೆ. ಕೆಲವು ನಿರ್ಮಾಪಕರು ಮಸಾಜ್ ಮಾಡಿಸಿಕೊಳ್ಳುವ ಕಾರಣದಿಂದ ವಿದೇಶಗಳಲ್ಲಿ ಶೂಟಿಂಗ್ ಮಾಡುತ್ತಾರೆ. ಇನ್ನು ಸ್ಯಾಟಲೈಟ್‌ಗಾಗಿ ಸಿನಿಮಾ ಮಾಡುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ" ಎಂಬುದು ಮುನಿರತ್ನ ಆರೋಪ.

ಸದ್ಯ ಸಿಕ್ಕಾಪಟ್ಟೆ 'ಚುರುಕಾಗಿರುವ' ನಿರ್ಮಾಪಕರ ಸಂಘ ಚಿತ್ರರಂಗದ ಇಂಥ ಅಡಸಾಬಡಸಾಗಳಿಗೆಲ್ಲಾ ಹೇಗೆ ಬ್ರೇಕ್ ಹಾಕುತ್ತೋ ನೋಡಬೇಕು.





ತ್ರಿಶಾಗೆ 80!

ಇಷ್ಟು ದಿನ ಕನ್ನಡದ ಹೀರೋಗಳಷ್ಟೇ ಲಕ್ಷಗಟ್ಟಲೆ ಸಂಭಾವನೆ ಪಡೆಯ... ಈಗ ನಾಯಕಿಯೊಬ್ಬಳು ಸಹ ಲಕ್ಷಗಟ್ಟಲೆ ಹಣ ಪಡೆಯುತ್ತಿರುವ ... ಹೊರಬಿದ್ದಿದೆ. ಕನ್ನಡದ ಹುಡುಗಿಯರಿಗೆ ಒಂದು ಲಕ್ಷ ರೂಪಾಯಿ ... ಸಂಭಾವನೆ ನೀಡಲು ಹಿಂದೆಮುಂದೆ ನೋಡುವ ಕನ್ನಡ ಚಿತ್ರಗಳ ನಿರ್ಮಾ... ಆಮದು ನಟಿಯರು ಕೇಳಿದಷ್ಟು ಸಂಭಾವನೆ ನೀಡುತ್ತಿರುವುದು ಮ... ಸಾಬೀತಾಗಿದೆ.

ತಮಿಳು ನಟಿ ತ್ರಿಶಾ ಕೃಷ್ಣನ್ ಎಂಬಾಕೆಗೆ 82 ಲಕ್ಷ ರೂಪಾಯಿ ಸಂ... ನೀಡಲು ನಿರ್ಮಾಪಕರೊಬ್ಬರು ನಿರ್ಧರಿಸಿದ್ದಾರೆ.

'ಚೆಲುವೆಯೇ ನಿನ್ನ ನೋಡಲು' ಚಿತ್ರವನ್ನು ನಿರ್ದೇಶಿಸಿದ್ದ ರಘು... ಈಗ ಶಿವರಾಜ್‌ಕುಮಾರ್‌ಗಾಗಿ 'ಸಿಎಂ' ಅನ್ನೋ ಚಿತ್ರವನ್ನು ಮಾಡು... ಈ ಚಿತ್ರದಲ್ಲಿ ತ್ರಿಶಾ ನಾಯಕಿಯಾಗಿ ನಟಿಸುತ್ತಿದ್ದಾಳೆ.

ಇಷ್ಟು ದೊಡ್ಡ ಸಂಭಾವನೆಯನ್ನು ನಟಿಯೊಬ್ಬಳಿಗೆ ಕನ್ನಡದಲ್ಲಿ ನೀಡುತ್ತಿ... ಇದೇ ಮೊದಲು. ನಟಿಯೊಬ್ಬಳಿಗೆ ಈ ಪಾಟಿ ಸಂಭಾವನೆ ನೀಡಿದರೆ ಚಿತ್ರರಂಗ ಉದ್ಧಾರವಾಗುವುದು ಹೇಗೆ?

ದೈವಭಕ್ತ ಸಾಯಿಯ ಭ್ರಷ್ಟಾಚಾರ!




ಇಷ್ಟು ದಿನ ಕಣ್ಣೀರ ಕಥೆಗಳು ಅಥವಾ ಭಕ್ತಿ ಪ್ರಧಾನ ಚಿತ್ರಗಳಿಗೆ ಆಕ್ಷನ್, ಕಟ್ ಹೇಳುತ್ತಿದ್ದ ನಿರ್ದೇಶಕ ಸಾಯಿಪ್ರಕಾಶ್ ಈಗ 'ಭ್ರಷ್ಟಾಚಾರ' ಮಾಡಲು ನಿಂತಿದ್ದಾರೆ! 'ಭ್ರಷ್ಟಾಚಾರ' ಎಂಬುದು ಸಾಯಿಪ್ರಕಾಶ್ ನಿರ್ದೇಶನದ ಹೊಸ ಸಿನೆಮಾದ ಹೆಸರು. ಅಣ್ಣಾ ಹಜಾರೆಯ ಹೋರಾಟ ಒಂದು ಮಟ್ಟದ ಗೆಲುವು ಕಾಣುತ್ತಿದ್ದಂತೇ ಗಾಂಧಿನಗರದ ಜನ ಅದರ ಸುತ್ತಲೇ ಕತೆ ಹೆಣೆಯಲು ಶುರು ಮಾಡಿದ್ದಾರೆ. ಸಾಯಿ ನಿರ್ದೇಶನದ 'ಭ್ರಷ್ಟಾಚಾರ' ಚಿತ್ರದಲ್ಲಿ ನಟ ಕಿಶೋರ್ ಹೀರೋ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು ಅನ್ನೋ ಸಿದ್ಧಾಂತವನ್ನು ಅನುಸರಿಸುವ ನಾಯಕ ಭ್ರಷ್ಟರನ್ನೇ ಬಳಸಿಕೊಂಡು ಭ್ರಷ್ಟಾಚಾರವನ್ನು ತೊಲಗಿಸುವ ಜನನಾಯಕನಂತೆ.



ಶೈಲೂ
ಗಣೇಶ್, ಭಾಮ

ಕಳಪೆಯಿಂದ ಕ್ವಾಲಿಟಿಯೆಡೆಗೆ



ಒಂದು ಕಾಲದಲ್ಲಿ 'ತ್ಯಾಗರಾಜ' ಎಂದೇ ಚಿತ್ರರಂಗದಲ್ಲಿ ಭಾರೀ ಹೆಸರು ಮಾಡಿದ್ದ ನಟ-ನಿರ್ದೇಶಕ ರಮೇಶ್ ಅರವಿಂದ್ ಅವರಿಗೆ ಕೊನೆಗೂ ಜ್ಞಾನೋದಯವಾದಂತಿದೆ. ಕಳೆದೆರಡು ವರ್ಷಗಳಲ್ಲಿ ತಾನು ನಟಿಸಿದ ಚಿತ್ರಗಳು ಕಳಪೆಯಾಗಿದ್ದವು ಎಂದು ಸ್ವತಃ ಅವರೇ ಒಪ್ಪಿಕೊಂಡು ಅದನ್ನು ತಿದ್ದಿಕೊಳ್ಳುವ ಕಾರ್ಯದಲ್ಲಿ ತೊಡಗಿದ್ದಾರೆ. ಇತ್ತೀಚಿನ ಎರಡು ವರ್ಷಗಳಲ್ಲಿ ರಮೇಶ್ ಸಿಕ್ಕಸಿಕ್ಕ ಚಿತ್ರಗಳಲ್ಲಿ ಅಭಿನಯಿಸಿದ್ದರು. ಅವರು ನಟಿಸಿದ್ದ ಸುಮಾರು 10ಕ್ಕೂ ಹೆಚ್ಚು ಚಿತ್ರಗಳು ಬಿಡುಗಡೆಗೊಂಡರೂ ಒಂದೂ ಗೆಲುವಿನ ಮುಖ ನೋಡಲಿಲ್ಲ.

'ರಾಮ ಶಾಮ ಭಾಮ', 'ಸತ್ಯವಾನ್ ಸಾವಿತ್ರಿ', 'ವೆಂಕಟ ಇನ್ ಸಂಕಟ' ಮತ್ತು 'ಆಕ್ಸಿಡೆಂಟ್' ಚಿತ್ರಗಳನ್ನು ನಿರ್ದೇಶಿಸಿದ್ದ ರಮೇಶ್ ಅರವಿಂದ್ ಈಗ ಐದನೇ ಚಿತ್ರ 'ನಮ್ಮಣ್ಣ ಡಾನ್' ಅನ್ನು ನಿರ್ದೇಶಿಸಿ ನಟಿಸಲು ಸಜ್ಜಾಗಿದ್ದಾರೆ.


ಈ ಚಿತ್ರದಲ್ಲಿ ರಮೇಶ್ ಡಾ. ಅರ್ಜುನ್ ಎಂಬ ಮಕ್ಕಳ ಕಾರ್ಡಿಯಾಕ್ ಸರ್ಜನ್ ಆಗಿ ಕಾಣಿಸಿಕೊಳ್ಳುತ್ತಿದ್ದಾರೆ. ಡಾ. ಅರ್ಜುನ್ ಕಣ್ಣಲ್ಲಿ ಲಾಭ ಎಂದರೆ ಇಷ್ಟು ಜೀವ ಬದುಕಿಸಿದೆ ಎಂಬುದಂತೆ. ಇತ್ತೀಚೆಗೆ ವೈದ್ಯ ವೃತ್ತಿಯಲ್ಲಿ ಸೇವಾ ಮನೋಭಾವನೆ ಕಳೆದುಕೊಂಡು ಹಣಗಳಿಕೆಯೇ ಮೂಲ ಉದ್ದೇಶವಾಗಿದೆಯಂತೆ. ಹೀಗಾಗಿ ಭಾವುಕತೆ, ಮಾನವೀಯತೆ ಮತ್ತು ಹಣಗಳಿಕೆ ನಡುವಿನ ಸಂಘರ್ಷಮಯ ಪರಿಸ್ಥಿತಿಯ ಚಿತ್ರಣ ಈ ಚಿತ್ರದಲ್ಲಿರುತ್ತದಂತೆ. 'ನಮ್ಮಣ್ಣ ಡಾನ್' ಚಿತ್ರದಲ್ಲಿ ನಾನ್‌ಸ್ಟಾಪ್ ಸಂಪೂರ್ಣ ಫನ್‌ನಿಂದ ಕೂಡಿರುವ ಮನರಂಜನೆ ಗ್ಯಾರಂಟಿಯಂತೆ.

ಅಲೆಮಾರಿ ಅಲೆದಾಟ



ಮಂದಾಕಿನಿ ಶ್ರೀನಿವಾಸ್ ಈಗ 'ಜೋಗಯ್ಯ' ಎಂಬ ಹೆಸರು ಕೇಳಿದರೂ ಕೆರಳಿಹೋಗುತ್ತಿದ್ದಾರೆ. ತಿಂಗಳ ಹಿಂದಷ್ಟೇ 'ಜೋಗಯ್ಯ'ನ ಮೇಲೆ ಸಿಕ್ಕಾಪಟ್ಟೆ ಭರವಸೆ ಇರಿಸಿಕೊಂಡಿದ್ದ ಸೀನಣ್ಣ ಈಗ ಅದೇ 'ಜೋಗಯ್ಯ'ನಿಂದ ಆರ್ಥಿಕ ಹೊಡೆತ ತಿಂದು ಅಪ್‌ಸೆಟ್ ಆಗಿದ್ದಾರೆ.

ಸದ್ಯ ಬಿ.ಕೆ. ಶ್ರೀನಿವಾಸ್ ಅಶ್ವಿನಿ ಸಂಸ್ಥೆಯೊಟ್ಟಿಗೆ ಸೇರಿ 'ಅಲೆಮಾರಿ' ಎಂಬ ಸಿನಿಮಾವನ್ನು ನಿರ್ಮಿಸುತ್ತಿದ್ದಾರೆ. ಯುವಕನೊಬ್ಬ ತನ್ನ ಪ್ರೀತಿಯನ್ನು ಹುಡುಕಿಕೊಂಡು ಅಲೆದಾಡುವ ಕಥೆಗೆ ಕಮರ್ಷಿಯಲ್ ಚಿತ್ರದ ಅಂಶಗಳಾದ ಆಕ್ಷನ್, ಸೆಂಟಿಮೆಂಟುಗಳನ್ನು ಸೇರಿಸಿ ನಿರ್ದೇಶಿಸಲು ಸಂತು ಎಂಬ ಯುವಕ ಸಿದ್ಧನಾಗಿದ್ದಾರೆ. ಈ ಚಿತ್ರದ ಹೀರೋ ಲೂಸ್ ಮಾದನ ಸ್ನೇಹಿತನೂ ಆಗಿರುವ ಸಂತು ಸತತ ಮೂರು ವರ್ಷಗಳ ಕಾಲ ಕೂತು ಸ್ಕ್ರಿಪ್ಟ್ ಸಿದ್ಧಗೊಳಿಸಿದ್ದಾನಂತೆ.



'ಅಲೆಮಾರಿ'ಯಲ್ಲಿ ಮೊಟ್ಟಮೊದಲ ಬಾರಿಗೆ ಲೂಸ್ ಮಾದನೊಂದಿಗೆ ಸದ್ಯದ ನಂ.1 ನಟಿ ರಾಧಿಕಾ ಪಂಡಿತ್ ನಾಯಕಿಯಾಗಿ ನಟಿಸುತ್ತಿದ್ದಾಳೆ. "ಇಷ್ಟು ದಿನ 'ಯೋಗಿಗೆ ನಟನೆ ಬರೋದಿಲ್ಲ' ಎಂಬ ಮಾತು ಕೇಳಿಬರುತ್ತಿತ್ತು, ಆದರೆ 'ಅಲೆಮಾರಿ' ಚಿತ್ರದಲ್ಲಿ ಯೋಗಿಗೆ ನಟಿಸಲೂ ಬರುತ್ತದೆ ಎಂಬುದು ಸಾಬೀತಾಗಲಿದೆ" ಎಂದದ್ದು ಬೇರೆ ಯಾರೂ ಅಲ್ಲ ಸ್ವತಃ ಯೋಗಿ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore...